7. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ನಡೆದ ಚರ್ಚೆಗೆ ಸರ್ಕಾರದಿಂದ ಉತ್ತರ ಹಾಗೂ ಪ್ರಸ್ತಾವದ ಅಂಗೀಕಾರ.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಸುಮಾರು 28 ಜನ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರಾದಂತಹ ಕುಮಾರಸ್ವಾಮಿಯವರು, ಬಿಜೆಪಿ ಮುಖಂಡರಾದಂತಹ ಜಗದೀಶ್ ಶೆಟ್ಟರ್‌ರವರು, ಮಾನ್ಯ ಯಡಿಯೂರಪ್ಪನವರು, ಬೋಪಯ್ಯನವರು, ಬಿ.ಆರ್.ಪಾಟೀಲ್‌ರವರು, ಇನ್ನೂ ಅನೇಕ ಜನ ಮಾನ್ಯ ಸದಸ್ಯರುಗಳು ಸುಮಾರು 28 ಜನ ಆ ಭಾಗದವರು ಮತ್ತು ಈ ಭಾಗದವರು ಹಾಗೂ ಮಾನ್ಯ ಬಸವರಾಜ ರಾಯರೆಡ್ಡಿಯವರು ವಂದನಾ ನಿರ್ಣಯದ ಮೇಲೆ ಪ್ರಸ್ತಾವ ಮಂಡಿಸಿ ಅವರೂ ಕೂಡ ಬಹಳ ದೀರ್ಘವಾಗಿ ಮಾತನಾಡಿದ್ದಾರೆ. ಪ್ರಮೋದ್ ಮಧ್ವರಾಜ್‌ರವರು ಅವರೂ ಕೂಡ ಅದನ್ನು ಅನುಮೋದನೆ ಮಾಡಿ ಮಾತನಾಡಿದ್ದಾರೆ. ಬಹಳ ಜನರು ಮಾತನಾಡಿ ಅನೇಕ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿ ಕೆಲವು ಸಲಹೆ ಸೂಚನೆಗಳನ್ನೂ ಸಹ ಕೊಟ್ಟಿದ್ದಾರೆ. ಸರ್ಕಾರದಲ್ಲಿ ಏನು ಸಮಸ್ಯೆಗಳು ಇವತ್ತು ರಾಜ್ಯದಲ್ಲಿವೆ, ಅದರ ಬಗ್ಗೆಯೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಮಾತನಾಡಿದಂತಹ ಎಲ್ಲಾ ಸದಸ್ಯರುಗಳು ಪ್ರತಿಯೊಂದು ಪ್ರಶ್ನೆಗೂ ಉತ್ತರವನ್ನು ಕೊಡುವಂತಹದ್ದು ಕಷ್ಟ, ಕಾಲದ ಮಿತಿಯಿಂದ ಆದರೆ ಪ್ರಮುಖವಾಗಿ ಯಾವ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ಆ ವಿಷಯಗಳಿಗೆ ಉತ್ತರವನ್ನು ಕೊಡುವಂತಹ ಪ್ರಯತ್ನವನ್ನು ಮಾಡುತ್ತೇನೆ. ಇದು ಚುನಾವಣೆ ಆದ ಮೇಲೆ ಚೊಚ್ಚಲ ಅಧಿವೇಶನವಾಗಿದೆ. ಈ ಚೊಚ್ಚಲ ಅಧಿವೇಶನ ಯಶಸ್ವಿಯಾಗಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಇದು ಬಹಳ ಚಿಕ್ಕ ಅಧಿವೇಶನವಾದರೂ ಕೂಡ ನಾವು ನಿಗಧಿ ಮಾಡಿರುವಂತಹ ದಿನಗಳಿಗಿಂತ ಹೆಚ್ಚಾಗಿ ನಿಮ್ಮ ಅಧ್ಯಕ್ಷತೆಯಲ್ಲಿ ಮೂರು ದಿನಗಳು ಮುಂದುವರಿಸಿದ್ದೇವೆ. ಕಾರಣವೇನೆಂದರೆ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ಎಲ್ಲರಿಗೂ ಅವಕಾಶ ಸಿಗಬೇಕು. ಇದರಲ್ಲಿ ಬಹಳ ಜನರು ಭಾಗವಹಿಸಬೇಕು ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಬೇಕು ಎನ್ನುವ ಉದ್ದೇಶದಿಂದ ನಾವು ಇಲ್ಲಿ ಕಾಯಿದೆಯನ್ನು ಮಾಡಿಕೊಂಡಿದ್ದೇವೆ.

ನಾವು ಇಲ್ಲಿ ವಿಧಾನ ಸಭೆಯನ್ನು ಕನಿಷ್ಠ 60 ದಿನಗಳ ಕಾಲ ನಡೆಸಬೇಕೆಂದು ಕಾಯಿದೆ ಮಾಡಿಕೊಂಡಿದ್ದೇವೆ. ಆದರೆ, ಕಳೆದ ಕೆಲವು ವರ್ಷಗಳಿಂದ 30-35 ದಿನಗಳಿಗಿಂತ ಹೆಚ್ಚಾಗಿ ವಿಧಾನ ಸಭೆ ನಡೆಯಲೇ ಇಲ್ಲ. ಯಾವಾಗಲೂ 30-32-35 ದಿನಗಳು ಈ ರೀತಿ ನಡೆದುಕೊಂಡು ಬಂದಿವೆ. ಮಾನ್ಯ ಬೋಪಯ್ಯನವರೂ ಕೂಡ ಸ್ಪೀಕರ್ ಆಗಿದ್ದರು. ನಾವು ಆ ಕಡೆ ಇದ್ದಾಗ ಅವರಿಗೆ ಬಹಳ ಒತ್ತಡ ಹಾಕುತ್ತಿದ್ದೆವು. ಪಾಪ ಅವರು ನಿಸ್ಸಹಾಯಕರಾಗಿ, ಸ್ಪೀಕರ್ ಆಗಿ ಏನೂ ಮಾಡುವುದಕ್ಕಾಗುವುದಿಲ್ಲ, ಮಾಡಬೇಕೆನ್ನುವ ಇಚ್ಚೆ ಇದೆ, ಆದರೆ ಮಾಡುವುದಕ್ಕಾಗಲ್ಲ ಎಂದು ಅಸಹಾಯಕತೆ ವ್ಯಕ್ತ ಮಾಡುತ್ತಿದ್ದರು. ನಾನು ಈ ಸದನಕ್ಕೆ ಏನು ಹೇಳುತ್ತೇನೆಂದರೆ, ನಮ್ಮ ಸರ್ಕಾರ ಕನಿಷ್ಠ 60 ದಿನಗಳು ವಿಧಾನ ಸಭೆ ನಡೆಸಲಿಕ್ಕೆ ಪ್ರಯತ್ನ ಮಾಡುತ್ತೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇದು ರಾಜ್ಯದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವ ವೇದಿಕೆ. ಪ್ರಜಾಪ್ರಭುತ್ವದಲ್ಲಿ ಮತದಾರರೆಲ್ಲರೂ ವಿಧಾನ ಸಭೆಗೆ ಬರುವುದಕ್ಕಾಗುವುದಿಲ್ಲ. ಅವರ ಪ್ರತಿನಿಧಿಗಳಾದ ನಮ್ಮನ್ನೆಲ್ಲಾ ಇಲ್ಲಿಗೆ ಕಳುಹಿಸುತ್ತಾರೆ. ನಾವು ಅವರ ಪರವಾಗಿ ಈ ವಿಧಾನ ಸಭೆಯಲ್ಲಿ ಅವರನ್ನು ಪ್ರತಿನಿಧಿಸತಕ್ಕಂಥ ಕೆಲಸ ಮಾಡಬೇಕು. ಇಡೀ ಕರ್ನಾಟಕದಲ್ಲಿ 6 ಕೋಟಿ 11 ಲಕ್ಷ ಜನರು ಇದ್ದಾರೆ. ಅಷ್ಟೂ ಜನರ ಹಿತ ಕಾಪಾಡುವುದು ನಮ್ಮೆಲ್ಲರ ಮೇಲೆ ಇರುವ ಜವಾಬ್ದಾರಿ. ಆ ಜವಾಬ್ದಾರಿಯನ್ನು ನಿರ್ವಹಿಸುವ ಸಲುವಾಗಿ ನಮ್ಮನ್ನೆಲ್ಲಾ ಅವರ ಪ್ರತಿನಿಧಿಗಳಾಗಿ ಇಲ್ಲಿಗೆ ಕಳುಹಿಸಿ ಕೊಟ್ಟಿದ್ದಾರೆ. ಅವರ ಆಶೋತ್ತರಗಳೇನು ಎಂಬುದನ್ನು ನಾವು ಅರ್ಥ ಮಾಡಿಕೊಂಡು ಕೆಲಸ ಮಾಡಬೇಕು. ಈ ರಾಜ್ಯದ ಜನತೆ ಕಾಂಗ್ರೆಸ್ ಪಕ್ಷಕ್ಕೆ ಆಶೀರ್ವಾದವನ್ನು ಮಾಡಿದ್ದಾರೆ. ಹಾಗೆಂದರೆ ಯಡಿಯೂರಪ್ಪನವರು ನಗುತ್ತಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಹೌದು, ಹೌದು.

ಅಧ್ಯಕ್ಷರು : ಅವರು ಭಾಷಣದಲ್ಲಿ ಹೇಳಿದ್ದಾರೆ.

ಶ್ರೀ **ಹೆಚ್.ಡಿ.ರೇವಣ್ಣ** : ಯಡಿಯೂರಪ್ಪನವರ ಆಶೀರ್ವಾದ ಜಾಸ್ತಿ ಇದೆ ಎಂದು ಹೇಳಿದರು.

ಶ್ರೀ **ಸಿದ್ದರಾಮಯ್ಯ** : ಯಾರಿಗೆ?

ಶ್ರೀ **ಹೆಚ್.ಡಿ.ರೇವಣ್ಣ** : ಯಡಿಯೂರಪ್ಪನವರ ಒಬ್ಬರ ಬಗ್ಗೆ ಹೇಳುತ್ತಿದ್ದೀರಿ, ಅದಕ್ಕೆ ಹೇಳಿದೆ.

ಶ್ರೀ ಸಿದ್ದರಾಮಯ್ಯ : ಇಲ್ಲಾ, ಅವರು ನನ್ನನ್ನು ನೋಡಿ ನಗುತ್ತಿದ್ದರು. ಅದಕ್ಕೆ ಹೇಳಿದೆ ಅಷ್ಟೆ.

ಡಾ:ಹೆಚ್.ಸಿ.ಮಹದೇವಪ್ಪ : ಅವರ ಆಸೆ ಬಿಜೆಪಿ+ಜೆಡಿ(ಎಸ್) ಇಬ್ಬರೂ ಸೇರಿದರು 115 ಬರಬಾರದು ಎನ್ನುವುದಿತ್ತು.

ಶ್ರೀ ಎಂ.ಟಿ.ಕೃಷ್ಣಪ್ಪ : ಕಾಂಗ್ರೆಸ್ ಸರ್ಕಾರ ಬರಲಿಕ್ಕೆ ಅವಕಾಶವಾಯಿತು.

ಶ್ರೀ ಹೆಚ್.ಡಿ.ರೇವಣ್ಣ : ಅದಕ್ಕೆ ಹೇಳಿದ್ದು, ಈಗ ಮಹದೇವಪ್ಪನವರು ಹೇಳಿದ್ದು ಏನೆಂದರೆ,...

ಶ್ರೀ ಸಿದ್ದರಾಮಯ್ಯ : ಅವರ ಆಸೆ ಇದ್ದದ್ದು ಏನೆಂದರೆ, .. .

ಶ್ರೀ ಹೆಚ್.ಡಿ.ರೇವಣ್ಣ : ಅದರೂ ನೀವು ಅವರ ಮೇಲೆ ಹಾಕಿಬಿಟ್ಟರಲ್ಲ?

ಶ್ರೀ ಸಿದ್ದರಾಮಯ್ಯ : ಏನಂತ?

ಶ್ರೀ ಹೆಚ್.ಡಿ.ರೇವಣ್ಣ : ರಾಜ್ಯಪಾಲರ ಭಾಷಣದಲ್ಲಿ ಭ್ರಷ್ಟಾಚಾರ ಎಂದು ಯಡಿಯೂರಪ್ಪನವರ ಮೇಲೆ ಹಾಕಿದರಲ್ಲ?

ಶ್ರೀ ಸಿದ್ದರಾಮಯ್ಯ : ನಾನು ಭ್ರಷ್ಟಾಚಾರ ಯಡಿಯೂರಪ್ಪನವರ ಮೇಲೆ ಎಂದು ಎಲ್ಲಿ ಹೇಳಿದ್ದೇನೆ? ಭ್ರಷ್ಟಾಚಾರ ಅಂತ.

ಶ್ರೀ ಹೆಚ್.ಡಿ.ರೇವಣ್ಣ : ದೇಶದಲ್ಲಿ ಯಡಿಯೂರಪ್ಪನವರೊಬ್ಬರೆ ಭ್ರಷ್ಟಾಚಾರ ಮಾಡಿದ್ದಾರೆಯೆ?

ಶ್ರೀ ಸಿದ್ದರಾಮಯ್ಯ : ಭ್ರಷ್ಟಾಚಾರ ಎಂದು ನಿಮ್ಮ ಮೇಲೂ ಹೇಳಿಲ್ಲ, ಯಡಿಯೂರಪ್ಪನವರ ಮೇಲೂ ಹೇಳಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಸರ್, ನೀವು ಆ ಬುಕ್ ನೋಡಿ ಸಾರ್. ನನ್ನ ಮೇಲೆ ಹೇಳುವುದಕ್ಕೆ ಏನಿಲ್ಲ.

ಶ್ರೀ ಸಿದ್ದರಾಮಯ್ಯ : ನಾನು ಹಾಗೆಂದು ಹೇಳಿದ್ದೇನೆಯೆ? ಅದರಲ್ಲಿ ನಾವು ಯಡಿಯೂರಪ್ಪನವರ ಹೆಸರನ್ನು ಪ್ರಸ್ತಾಪ ಮಾಡಿದ್ದೇವೆಯೆ? ನಿಮ್ಮ ಹೆಸರನ್ನು ಪ್ರಸ್ತಾಪ ಮಾಡಿದ್ದೇವೆಯೆ?

ಶ್ರೀ ಹೆಚ್.ಡಿ.ರೇವಣ್ಣ : ನೀವು ರಾಜ್ಯಪಾಲರ ಭಾಷಣ ತೆಗೆದು ನೋಡಿ ಸರ್. ಮಾನ್ಯ ಅಧ್ಯಕ್ಷರು ಅವಕಾಶ ಕೊಟ್ಟರೆ ನಾನು ಓದುತ್ತೇನೆ.

ಶ್ರೀ ಸಿದ್ದರಾಮಯ್ಯ : ಏನೆಂದು ಇದೆ?

ಶ್ರೀ ಹೆಚ್.ಡಿ.ರೇವಣ್ಣ : ಹಿಂದಿನ ಭ್ರಷ್ಟಾಚಾರ ಸರ್ಕಾರ..

ಶ್ರೀ ಸಿದ್ದರಾಮಯ್ಯ : ಹಿಂದಿನ ಸರ್ಕಾರಗಳು ಎಂದರೆ, ಅದು ಯಡಿಯೂರಪ್ಪನವರು ಅಂತ ಅಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಯಡಿಯೂರಪ್ಪನವರು ಇಲ್ಲವೆಂದು ಹೇಳಿ ಸರ್.

ಶ್ರೀ ಸಿದ್ದರಾಮಯ್ಯ : ಹಿಂದಿನ ಸರ್ಕಾರದಲ್ಲಿ ಹಗರಣಗಳಾಗಿರಲಿಲ್ಲವೆ? ಆಗಿದ್ದವೋ ಇಲ್ಲವೋ? ಇಲ್ಲವೆಂದು ಹೇಳುತ್ತೀರೋ, ಉಂಟು ಎಂದು ಹೇಳುತ್ತೀರೋ?

ಅಧ್ಯಕ್ಷರು : ಉಂಟು ಅಂತ.

ಶ್ರೀ ಸಿದ್ದರಾಮಯ್ಯ : ಉಂಟು ಅಂತ ಹೇಳುತ್ತೀರೋ, ಇಲ್ಲ ಅಂತ ಹೇಳುತ್ತೀರೋ ರೇವಣ್ಣ? ಹಗರಣಗಳಾಗಿಲ್ಲ ಎಂದು ಹೇಳುತ್ತೀರಾ? ಏನು ರೇವಣ್ಣನವರೆ, ಉತ್ತರವೇ ಇಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ನೋಡಿ ಭ್ರಷ್ಟಾಚಾರದ ಬಗ್ಗೆ ಮಾತನಾಡುವುದಕ್ಕೆ ಟೈಮ್ ಕೊಟ್ಟರೆ ನಾನು ಮಾತನಾಡುತ್ತೇನೆ. ಅಧ್ಯಕ್ಷರು ಬೇಡ ಎಂದು ಆದೇಶ ಮಾಡಿರುವುದರಿಂದ ನಾನು ಮಾತನಾಡುತ್ತಿಲ್ಲ. ಮಾತನಾಡಲಿಕ್ಕೆ ಹೇಳಿದರೆ, ಏನೇನು ಭ್ರಷ್ಟಾಚಾರವಾಗಿದೆ ಬೇಕಾದರೆ ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ರೇವಣ್ಣಾ ಭ್ರಷ್ಟಾಚಾರ ಎಂದರೆ, ಲಂಚ ತೆಗೆದುಕೊಳ್ಳುವುದೇ ಭ್ರಷ್ಟಾಚಾರವಲ್ಲ. ಕಾನೂನುಬಾಹಿರವಾಗಿ ಇನ್ನೊಬ್ಬರಿಗೆ ಸಹಾಯ ಮಾಡುವುದು ಭ್ರಷ್ಟಾಚಾರ. ಕಾನೂನು ಉಲ್ಲಂಘನೆ ಮಾಡುವುದು ಭ್ರಷ್ಟಾಚಾರ. ಬರೀ ಲಂಚ ತೆಗೆದುಕೊಳ್ಳುವುದು ಮಾತ್ರ ಭ್ರಷ್ಟಾಚಾರ ಎಂದು ಹೇಳುವುದಕ್ಕೆ ಬರುವುದಿಲ್ಲ. ಸ್ವಜನ ಪಕ್ಷಪಾತ ಮಾಡುವುದು ಭ್ರಷ್ಟಾಚಾರ. ಜಾತಿ ಮಾಡುವುದು ಭ್ರಷ್ಟಾಚಾರವೇ. ಭ್ರಷ್ಟಾಚಾರಕ್ಕೆ ವ್ಯಾಖ್ಯಾನ ಇದೆಯೆಲ್ಲಾ, ಆ ವ್ಯಾಖ್ಯಾನಕ್ಕೆ ಬಹಳ ದೊಡ್ಡ ವ್ಯಾಪ್ತಿಯಿದೆ. ಆ ಕಾರಣದಿಂದ ನಾನು ಹೇಳಿದ್ದೇನೆಯೇ ಹೊರತು, ಇನ್ನೇನೂ ಅಲ್ಲ ಅಲ್ಲಿ ಇದೆ, ಬರೆದಿರುವುದನ್ನು ನಾನು ನೋಡಿದ್ದೇನೆ. ಅನೇಕ ಹಗರಣಗಳು ಹಿಂದಿನ ಸರ್ಕಾರದ ಅನೇಕ ಹಗರಣಗಳು, ಭ್ರಷ್ಟಾಚಾರಗಳು,.. ಹಾಗಾದರೆ ಜನ ನಮಗ್ಯಾಕೆ ಓಟು ಕೊಟ್ಟರು? ನಾನು ಇನ್ನೂ ಶುರು ಮಾಡಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ನೀವು ಕುಳಿತುಕೊಳ್ಳಿ ಎಂದು ನಾನು ಹೇಳುತ್ತಿಲ್ಲ. ಅದಕ್ಕೇ ನಾನು ಹೇಳಿದ್ದು, 1998 ರಿಂದ ಅಕ್ರಮ ಗಣಿಗಾರಿಕೆಯಿಂದ

ಹಿಡಿದು ಎಲ್ಲವನ್ನೂ ಸಮಗ್ರವಾಗಿ ತನಿಖೆ ನಿಮ್ಮ ಕಾಲದಲ್ಲಿ ಮಾಡಿಸಿ ದೇಶದ ಜನತೆಗೆ ಸತ್ಯ ಸಂಗತಿ ಏನೆಂಬುದನ್ನು ಹೊರಗೆ ಬರಲಿ ಎಂದು ಹೇಳಿದೆ, ತಾವು ಉತ್ತರ ಕೊಡುವಾಗ ಹೇಳಿ.

ಶ್ರೀ ಸಿದ್ದರಾಮಯ್ಯ : ಯಡಿಯೂರಪ್ಪನವರೆ, ಈಗ ತನಿಖೆ ಮಾಡಿಸಬೇಕೆಂದರೆ ಮಾಡಿಸೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ : ಖಂಡಿತ ಮಾಡಿಸಬೇಕು ಸರ್. ಡಿ-ನೋಟಿಫಿಕೇಷನ್ ಬಗ್ಗೆ, ಮುಖ್ಯಮಂತ್ರಿಗಳ discretionary powers ನಲ್ಲಿ ಸೈಟ್ ಕೊಟ್ಟ ಬಗ್ಗೆ, Industrial purposesಗೆ site ಕೊಟ್ಟಿರುವುದರ ಬಗ್ಗೆ ಎಲ್ಲಾ ತನಿಖೆ ಮಾಡಿಸಿ.

ಶ್ರೀ ಸಿದ್ದರಾಮಯ್ಯ : ಪಾಪ, ನೀವು ಆಗಲೇ ಮಾತನಾಡುವಾಗ ಎಲ್ಲಾ ಹೇಳಿದಿರಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಎಲ್ಲದರ ಬಗ್ಗೆಯೂ ಸಮಗ್ರವಾಗಿ ತನಿಖೆ ಮಾಡಿಸಿ, ದೇಶದ ಜನತೆಗೆ ಸತ್ಯ ಏನೆಂಬುದು ಗೊತ್ತಾಗಲಿ ಎನ್ನುವುದು ತಮ್ಮಲ್ಲಿ ನನ್ನ ವಿನಂತಿ ಅಷ್ಟೆ.

ಅಧ್ಯಕ್ಷರು : ಆಯಿತು, ಹೇಳುತ್ತಾರೆ ಬಿಡಿ.

ಶ್ರೀ ಸಿದ್ದರಾಮಯ್ಯ : ನಾನು ಹೇಳುವುದೇನೆಂದರೆ, ಹಿಂದಿನ ಸರ್ಕಾರಗಳು ಭ್ರಷ್ಟಾಚಾರ ಎಂದ ತಕ್ಷಣ, ಜೆಡಿ(ಎಸ್) ನವರು ಏನು ಹೇಳುತ್ತಾರೆ ಎಂದರೆ ಭ್ರಷ್ಟಾಚಾರದ ಬಗ್ಗೆ ಮಾತನಾಡುವುದಾದರೆ ಬಹಳ ದೊಡ್ಡದಾಗಿ ಮಾತನಾಡಬೇಕಾಗುತ್ತದೆ ಎನ್ನುತ್ತಾರೆ. ಹಾಗಾದರೆ, ಭ್ರಷ್ಟಾಚಾರ ಹೀಗೆಯೆ ಉಳಿಯಬೇಕೆ? ಭ್ರಷ್ಟಾಚಾರವನ್ನು ಸಹಿಸಿಕೊಳ್ಳಬೇಕೆ? ಅಥವಾ ಭ್ರಷ್ಟಾಚಾರ ಹೀಗೆ ಅವ್ಯಾಹತವಾಗಿ ನಡೆಯಬೇಕೆ? ಇದೂ ಕೂಡ ಚರ್ಚೆಯಾಗಬೇಕಾಗುತ್ತದೆ ಅಲ್ಲವೆ? ಎಲ್ಲಾದರೂ ಒಂದು ಕಡೆಗೆ ಅದಕ್ಕೆ ಕಡಿವಾಣ ಹಾಕಬೇಕಲ್ಲವೆ? ಕಡಿವಾಣ ಹಾಕದೇ ಹೋದರೆ ಈ ರಾಜ್ಯದ ಜನರಿಗೆ ನಾವು ದ್ರೋಹ ಮಾಡಿದ ಹಾಗೆ ಆಗುತ್ತದೆ. ಸಮಾಜಕ್ಕೆ ದ್ರೋಹ ಮಾಡಿದ ಹಾಗೆ ಆಗುತ್ತದೆ. ಇಂಥದ್ದಕ್ಕೆ ಕಡಿವಾಣ ಹಾಕತಕ್ಕಂಥ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಇದರಲ್ಲಿ ನಾವು ನೂರಕ್ಕೆ ನೂರರಷ್ಟು ಸಫಲರಾಗಬಹುದು, ಆಗದೇ ಇರಬಹುದು. ಆದರೆ, ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡುತ್ತೇವೆ. ನಾವು ಭ್ರಷ್ಟಾಚಾರದ ವಿರುದ್ಧ ಕಾಯಾ ವಾಚಾ ಮನಸಾ ಕ್ರಮಗಳನ್ನು ತೆಗೆದುಕೊಳ್ಳದೇ ಹೋದರೆ, ಭ್ರಷ್ಟಾಚಾರ

ಇನ್ನೂ ವ್ಯಾಪಕವಾಗಿ ಬೆಳೆಯುತ್ತದೆ. ಜನರಿಗೆ ನಮ್ಮ ಮೇಲೆ ಸಂಪೂರ್ಣ ವಿಶ್ವಾಸ ಹೋಗುತ್ತದೆ. ಪ್ರಜಾಪ್ರಭುತ್ವ ನಾಶವಾಗತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಈಗಾಗಲೇ ನಮ್ಮ ಮೇಲೆ ಸಿನಿಕತನ ಶುರುವಾಗಿ ಬಿಟ್ಟಿದೆ. ಒಳ್ಳೆಯವರು, ಪ್ರಾಮಾಣಿಕರು, ಕೆಟ್ಟವರು ಎಂದು ರಾಜಕಾರಣಿಗಳನ್ನು ನೋಡುವುದಿಲ್ಲ. ಯಾರು ಒಳ್ಳೆಯವರು, ಯಾರು ಕೆಟ್ಟವರು ಎಂದು ನೋಡುವುದಿಲ್ಲ. ಅಧಿಕಾರದಲ್ಲಿರುವವರೆಲ್ಲ ಭ್ರಷ್ಟರು ಎಂದೇ ತೀರ್ಮಾನ ಮಾಡಿಬಿಟ್ಟಿದ್ದಾರೆ. ಅದಕ್ಕೆ ಪ್ರತಿಯೊಬ್ಬರೂ ಕೂಡ ನಮ್ಮ ಆತ್ಮಾವಲೋಕನ ಮಾಡಿಕೊಳ್ಳಬೇಕು. ಆತ್ಮಾವಲೋಕನ ಮಾಡಿಕೊಂಡು ಮಾತನಾಡಿದರೆ, ಆ ದಿಕ್ಕಿನಲ್ಲಿ ನಾವು ಪ್ರಯತ್ನಗಳನ್ನು ಮಾಡಿದರೆ ಏನಾದರೂ ಸಫಲತೆ ಕಾಣುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ನಾವು ಆತ್ಮವಂಚಕರಾಗುತ್ತೇವೆ ಎನ್ನತಕ್ಕಂಥ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತಿದ್ದೇನೆ. ಆ ಕಾರಣದಿಂದಲೇ ಜನ ಇವತ್ತು ಹಿಂದಿನ ಸರ್ಕಾರಗಳ ಮೇಲೆ ಬೇಸತ್ತು ಕಾಂಗ್ರೆಸ್‌ಗೆ ಆಶೀರ್ವಾದ ಮಾಡಿರತಕ್ಕಂಥದ್ದು.

ಅದನ್ನು ಹೇಳುವುದಕ್ಕೆ ಹೋದರೆ ಯುಪಿಎ ಯಲ್ಲಿ ಭ್ರಷ್ಟಾಚಾರಿಗಳು ಇಲ್ಲವೋ ಎಂದು ನಮ್ಮ ವಿರೋಧ ಪಕ್ಷದಲ್ಲಿರತಕ್ಕಂಥವರು ಅಂದರೆ, ವಿಶೇಷವಾಗಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಮತ್ತು ಮಾನ್ಯ ಸಿ.ಟಿ.ರವಿರವರು ಸಹ ಮಾತನಾಡಿದ್ದಾರೆ. ನಾವು ಇಲ್ಲಿ ರಾಜ್ಯಪಾಲರ ಭಾಷಣ ಮಾಡಿರತಕ್ಕಂಥದ್ದು ಕೇವಲ ಕರ್ನಾಟಕ ರಾಜ್ಯಕ್ಕೆ ಮಾತ್ರ ಸೀಮಿತವಾಗಿದೆ. ಕರ್ನಾಟಕ ವಿಧಾನಸಭೆಯಲ್ಲಿ ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಆದ್ದರಿಂದ ಇಲ್ಲಿನ ಬಗ್ಗೆ ಮಾತನಾಡೋಣ. ಅಲ್ಲಿ ನಿಮ್ಮವರು ಇದ್ದಾರೆ. ಆದ್ದರಿಂದ ಅಲ್ಲಿ ಏನೇನು ಮಾತನಾಡಬೇಕೆಂದು ಅವರಿಗೆ ಹೇಳಿ. ಜನ ನಿಮ್ಮನ್ನು ಇಲ್ಲಿಗೆ ಕಳುಹಿಸಿದ್ದಾರೆ. ಅಲ್ಲಿನ ಬಗ್ಗೆ ಮಾತನಾಡುವುದು ನಿಮ್ಮ ಉಸಾಬರಿ ಅಲ್ಲ. ಚಿಕ್ಕಮಗಳೂರಿನ ಸಾರ್ವಜನಿಕ ಸಭೆಯಲ್ಲಿ ಮಾತನಾಡುವುದಾದರೆ ಮಾತನಾಡಿ. ಕರ್ನಾಟಕದಲ್ಲಿ ಏನಾಗಿದೆ ಎಂಬುದು ಇಲ್ಲಿ ಬಹಳ ಮುಖ್ಯವಾಗಿದೆ. ನಾವು ಭ್ರಷ್ಟಾಚಾರ ಮಾಡಿದರೆ ನೀವು ಮಾತನಾಡಬೇಡಿ ಎಂದು ನಾವು ಹೇಳುವುದಿಲ್ಲ. ನಾವು ತಪ್ಪು ಮಾಡಿದರೆ ನೀವು ಮಾತನಾಡಬೇಡಿ ಎಂದು ಹೇಳುವುದಿಲ್ಲ. ನಮ್ಮ ಸರ್ಕಾರ ಎಡವಿದರೆ ನೀವು ಮಾತನಾಡಬೇಡಿ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. You have got every right, freedom. ಅವೆಲ್ಲವನ್ನು

ಹೇಳುವುದಕ್ಕೆ ನಿಮಗೆ ಅಧಿಕಾರ ಇದೆ. ಆದರೆ, ಅಲ್ಲಿರುವವರ ಮೇಲೆ ನಾವು ಆರೋಪ ಮಾಡಿದರೆ ಹೇಗೆ? ಅವರೇನಾದರೂ ಇಲ್ಲಿ ಇದ್ದಾರೆಯೇ? I am not in a position to defend them. ಯಾರ ಮೇಲೆ ನೀವು ಅರೋಪ ಮಾಡುತ್ತೀರೋ, they are not the members of this House, they cannot defend themselves. ಆ ತರಹ ಮಾಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಅದನ್ನು ನಿಮಗೆ ಮನವರಿಕೆ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಮೇಲ್ಮನೆಯಲ್ಲಿ ಮತ್ತು ಇಲ್ಲಿಯೂ ಕೂಡ ಅದೇ ರೀತಿ ಮಾಡಿದ್ದೀರಿ. ನಾನು ಯಾರ ಮೇಲೂ ಕೂಡ ವೈಯಕ್ತಿಕವಾಗಿ ದ್ವೇಷವನ್ನು ಇಟ್ಟುಕೊಂಡು ಈ ಮಾತನ್ನು ಆಡುತ್ತಿಲ್ಲ. ಅಥವಾ vindictive ಆಗಿ ಕೂಡ ಮಾಡಬೇಕೆಂಬ ಅಭಿಪ್ರಾಯ ಸಹ ನನಗೆ ಇಲ್ಲ. ಆದರೆ, ನಾವೆಲ್ಲ ಕೂಡ ಪ್ರಜಾಪ್ರಭುತ್ವದಲ್ಲಿ ಜನಪ್ರತಿನಿಧಿಗಳಾಗಿ ಕೆಲಸ ಮಾಡುವಾಗ ಸಾರ್ವಜನಿಕ ಜೀವನ ಸ್ವಚ್ಛ ಆಗಬೇಕೆಂದು ಮತ್ತು ಪ್ರಜಾಪ್ರಭುತ್ವ ಯಶಸ್ವಿಯಾಗಬೇಕೆಂದು ಹಾಗೂ ಜನರ ಕಷ್ಟಸುಖಗಳಿಗೆ ಸ್ಪಂದಿಸಬೇಕು, ರಾಜ್ಯದ ಅಭಿವೃದ್ಧಿಯಾಗಬೇಕು, ಜನ ನೆಮ್ಮದಿಯಿಂದ ಪರಸ್ಪರ ವಿಶ್ವಾಸದಿಂದ ಬದುಕತಕ್ಕಂಥ ಒಂದು ವಾತಾವರಣ ರಾಜ್ಯದಲ್ಲಿ ನಿರ್ಮಾಣ ಆಗಬೇಕಾಗಿದೆ. ಅಂಥ ಒಂದು ವಾತಾವರಣ ನಿರ್ಮಾಣ ಮಾಡುವುದಕ್ಕೆ ನಾವೆಲ್ಲರೂ ಕೂಡ ಪ್ರಾಮಾಣಿಕವಾದಂಥ ಪ್ರಯತ್ನವನ್ನು ಮಾಡಬೇಕಾಗಿದೆ ಎಂದು ನನ್ನ ಇಚ್ಛೆಯಾಗಿದೆ. ಅದಕ್ಕೋಸ್ಕರ ಆ ಮಾತುಗಳನ್ನು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಅನೇಕ ಮಾನ್ಯ ಸದಸ್ಯರು ಮಾತನಾಡುವಂಥ ಸಂದರ್ಭದಲ್ಲಿ ನನಗೆ ಅಭಿನಂದನೆಗಳನ್ನು ಹೇಳಿದ್ದಾರೆ. ಸಿದ್ದರಾಮಯ್ಯನವರು ಬಹಳ ವರ್ಷಗಳಿಂದ ಕರ್ನಾಟಕ ರಾಜಕಾರಣದಲ್ಲಿದ್ದಾರೆ. ಅವರು ಈಗ ಮುಖ್ಯ ಮಂತ್ರಿಗಳಾಗಿರುವುದು ಬಹಳ ಸಂತೋಷ ತಂದಿದೆ. ಆದ್ದರಿಂದ, ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆಂದು ಮಾತನಾಡಿದಂಥ ಬಹಳ ಜನ ಮಾನ್ಯ ಸದಸ್ಯರು ವ್ಯಕ್ತ ಮಾಡಿದ್ದಾರೆ. ನಾನು ಅವರೆಲ್ಲರಿಗೂ ಸಹ ಕೃತಜ್ಞತೆಗಳನ್ನು, ಧನ್ಯವಾದಗಳನ್ನು ಹೇಳಲಿಕ್ಕೆ ಬಯಸುತ್ತಿದ್ದೇನೆ. ಮಾನ್ಯ ಯಡಿಯೂರಪ್ಪನವರು ಮಾತನಾಡುವಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು 'ಮಾನ್ಯ ಸಿದ್ದರಾಮಯ್ಯನವರೆ, ನೀವು ಇನ್ನು ಒಂದು ವರ್ಷ ಮಾತ್ರ ಇರುತ್ತೀರೆಂದು ಅನಿಸುತ್ತದೆ. ನಿಮ್ಮಲ್ಲಿ ಒಂದು ವರ್ಷಕ್ಕಿಂತ ಜಾಸ್ತಿ ಇರುವುದಕ್ಕೆ ಬಿಡುವುದಿಲ್ಲ.'

ಅಂದರೆ, ಅವಕಾಶವನ್ನು ಕೊಡುವುದಿಲ್ಲ, ಎಂದು ಹೇಳಿದ್ದೀರಿ. ತಾವು ನೋವನ್ನು ಅನುಭವಿಸಿ ಆ ರೀತಿ ಹೇಳಿದ್ದೀರೆಂದು ಅನಿಸುತ್ತದೆ. ನಿಮ್ಮವರೆಲ್ಲಾ ನಿಮಗೆ ಕೈಕೊಟ್ಟಿದ್ದಾರೆ. ಆದರೆ ಕಾಂಗ್ರೆಸ್‌ನಲ್ಲಿ ಆ ತರಹ ಇಲ್ಲ. ನಾವೆಲ್ಲರೂ ಕೂಡ ಒಮ್ಮತದಿಂದ ಇದ್ದೇವೆ, ಒಗ್ಗಟ್ಟಿನಿಂದ ಇದ್ದೇವೆ. ನಮ್ಮ High Command ಬಹಳ strong ಆಗಿದೆ. ಆದುದರಿಂದ ನೀವೇನು ಒಂದು ವರ್ಷ ಎಂದು ಹೇಳಿದ್ದೀರೋ ಅದನ್ನು ದುರುದ್ದೇಶದಿಂದ ಹೇಳಿದ್ದೀರಿ ಎಂದು ಅಂದುಕೊಳ್ಳುವುದಿಲ್ಲ, ಸದುದ್ದೇಶವೇ ಇರಬಹುದು. ಆದರೆ 5 ವರ್ಷಗಳೂ ಕೂಡ ನಾವಿದ್ದೇ ಇರುತ್ತೇವೆ. ಅದರ ಬಗ್ಗೆ ಯಾವುದೇ ಸಂಶಯ ಇಟ್ಟುಕೊಳ್ಳಬೇಕಾದ ಅಗತ್ಯ ಇಲ್ಲ. ಆ ತರಹ ಯೋಚನೆ ನಿಮ್ಮ ತಲೆಯಲ್ಲಿ ಬಂದಿದ್ದರೆ ಅದನ್ನು ತೆಗೆದುಹಾಕಿಬಿಡಿ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. 5 ವರ್ಷಗಳೂ ನಾನು ಇರುತ್ತೇನೆ. 5 ವರ್ಷಗಳೂ ಸಹ ಈ ಸರ್ಕಾರ ಒಳ್ಳೆಯ ಕೆಲಸ ಮಾಡುತ್ತದೆ. ನಾವು ಜನರಿಗೆ ಚುನಾವಣೆ ಪ್ರಣಾಳಿಕೆ ಮೂಲಕ ಯಾವ ಭರವಸೆಗಳನ್ನು ಕೊಟ್ಟಿದ್ದೇವೆಯೋ ಆ ಎಲ್ಲಾ ಭರವಸೆಗಳನ್ನು ಕೂಡ ಈಡೇರಿಸುತ್ತೇವೆ. ಈ ರಾಜ್ಯವನ್ನು ಮಾದರಿ ರಾಜ್ಯವನ್ನಾಗಿ ಮಾಡಲು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇವೆ. ದೇಶದ ಬೇರೆ ರಾಜ್ಯಗಳು ನಮ್ಮ ರಾಜ್ಯವನ್ನು ಅನುಕರಣೆ ಮಾಡುವ ಮಟ್ಟಕ್ಕೆ ಈ ರಾಜ್ಯವನ್ನು ತೆಗೆದುಕೊಂಡು ಹೋಗುತ್ತೇವೆ. ಇದರ ಬಗ್ಗೆ ಯಾರೂ ಕೂಡ ಸಂಶಯ ಇಟ್ಟುಕೊಳ್ಳಬೇಕಾದ ಅಗತ್ಯ ಇಲ್ಲ ಎನ್ನುವ ಮಾತನ್ನು ಬಹಳ ಸ್ಪಷ್ಟವಾಗಿ ತಿಳಿಸುವುದಕ್ಕೆ ಬಯಸುತ್ತೇನೆ. ಮಾನ್ಯ ದತ್ತರವರು ನಮ್ಮ ಹಳೆಯ ಸ್ನೇಹಿತರು. ಅವರು ಇತ್ತೀಚೆಗೆ ವಚನಕಾರರು ಆಗಿಬಿಟ್ಟಿದ್ದಾರೆ. ಅದು ನನಗೆ ಗೊತ್ತಿರಲಿಲ್ಲ. ಇವರು ಬಸವಾದಿ ಶರಣರು ಅಲ್ಲ. ಆದರೆ ದೇವರ ದಾಸಿಮಯ್ಯನವರ ವಚನ ತೆಗೆದುಕೊಂಡು ಅದಕ್ಕೆ ವಚನ ರಚನೆ ಮಾಡಿದ್ದೀರಿ, ಬಹಳ ಸಂತೋಷ. ಆದರೆ ನಿಮ್ಮ ಉದ್ದೇಶ ಇದೆಯಲ್ಲ, ಆ ಉದ್ದೇಶ ಅಥವಾ ನೀವು ಹೇಳತಕ್ಕಂಥ ವಿಚಾರ ಇದೆಯಲ್ಲ, ಅದು ಸತ್ಯಕ್ಕೆ ದೂರವಾದುದು. ನಮ್ಮಲ್ಲಿ ಯಾವುದೇ ವಿಭಜನೆಗಳಿಲ್ಲ. ಅದನ್ನು ಪ್ರಯತ್ನ ಮಾಡುವುದಕ್ಕೆ ಹೋಗಬೇಡಿ. ಹಾಗಾದರೆ ದೇವೇಗೌಡರೂ ಕಾಂಗ್ರೆಸ್‌ನಲ್ಲಿ ಇದ್ದರಲ್ಲವೇ? ನಾವೆಲ್ಲಾ ಜನತಾ ಪಾರ್ಟಿಯಲ್ಲಿ ಇದ್ದದ್ದು ನಿಜ. ಜನತಾ ದಳದಲ್ಲಿ ಇದ್ದದ್ದು ನಿಜ. ಅದರ ಬಗ್ಗೆ ಎರಡನೇ ಮಾತಿಲ್ಲ. ನಾನು ಈಗ ನೂರಕ್ಕೆ ನೂರು ಕಾಂಗ್ರೆಸ್ಸಿಗ. ಬಹುಶಃ ಕಾಂಗ್ರೆಸ್‌ನಲ್ಲಿ ಇರುವವರೇ ಎಲ್ಲಾ

ಪಾರ್ಟಿಗಳಲ್ಲೂ ಇರುವವರು. 1969ಕ್ಕಿಂತ ಮುಂಚಿತವಾಗಿ ಮಾನ್ಯ ದೇವೇಗೌಡರು ಎಲ್ಲಿದ್ದರು? ಕಾಂಗ್ರೆಸ್‌ನಲ್ಲೇ ಇದ್ದರಲ್ಲವೇ? 1962 ರಲ್ಲಿ ಪಕ್ಷೇತರರಾಗಿ ನಿಂತು ಗೆದ್ದರು. ಆಮೇಲೆ, ಕಾಂಗ್ರೆಸ್ ಸೇರಿಕೊಂಡರು.

ಶ್ರೀ ಹೆಚ್.ಡಿ.ರೇವಣ್ಣ :- ಯಾವಾಗ ಸೇರಿದರು? ಈಗಿನ ಕಾಂಗ್ರೆಸ್‌ಗೆ ಅವರು ಸೇರಿರಲಿಲ್ಲ.

ಶ್ರೀ ಸಿದ್ದರಾಮಯ್ಯ :- ಹಾಗಾದರೆ, ಈಗಿನ ಜನತಾದಳ ಅಲ್ಲವೆಂದು ನಾವು ಹೇಳಿಬೇಕಾಗುತ್ತದೆ.

ಶ್ರೀ ಹೆಚ್.ಸಿ.ಬಾಲಕೃಷ್ಣ :- ಆಗ ಜನತಾ ಪರಿವಾರ ಇತ್ತು.

ಶ್ರೀ ಸಿದ್ದರಾಮಯ್ಯ :- ಮಾನ್ಯ ಬಾಲಕೃಷ್ಣ, ಯಾವ ಜನತಾ ಪರಿವಾರ? ಅವೆಲ್ಲ ಹೊರಟು ಹೋಯಿತು. ಈಗಿರುವುದು ಬೇರೆ ಜನತಾದಳ, ಈಗ ಅದರ ಬಗ್ಗೆ ಹೆಚ್ಚಾಗಿ ವ್ಯಾಖ್ಯಾನ ಮಾಡುವುದು ಬೇಡ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಾವು ಜನತಾದಳದಲ್ಲಿ ಮತ್ತು ಜನತಾ ಪಾರ್ಟಿಯಲ್ಲಿದ್ದೆವು ಮತ್ತು ನಾವು ಅನೇಕ ಜನರು ಒಟ್ಟಿಗೆ ಇದ್ದೆವು ಈಗ ಕೆಲವರು ಹೊಸದಾಗಿ ಬಂದಿದ್ದಾರೆ. ಇವೆಲ್ಲ ಬೇರೆ ವಿಚಾರ. ಆದರೆ ನಾನು 2007ರಲ್ಲಿ ಕಾಂಗ್ರೆಸ್ ಪಕ್ಷ ಸೇರಿ ಆಯಿತು. ಕಾಂಗ್ರೆಸ್‌ನ ಸಿಂಬಲ್ ಮೇಲೆ ನಾನು ಈಗಾಗಲೇ ಮೂರು ಸಾರಿ ಶಾಸಕನಾಗಿದ್ದೇನೆ. ಮತ್ತೆ ಈ ರೀತಿಯಾಗಿ ಹುಟ್ಟು ಹಾಕುವುದಕ್ಕೆ ಮಾನ್ಯ ದತ್ತ ರವರು ಪ್ರಯತ್ನ ಮಾಡಿದ್ದಾರೆ.

ಶ್ರೀ ಹೆಚ್.ಡಿ.ರೇವಣ್ಣ :- ನಿಮ್ಮ ಮೇಲಿನ ಅಭಿಮಾನಕ್ಕೆ ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ :- ಆಯಿತು, thank you. ನೀನು ಆ ವಚನವನ್ನು ಓದಲಿಲ್ಲವೇ? ಅಭಿಮಾನ, ಪ್ರೀತಿ ಸೇರಿಸಿ ಹೇಳುತ್ತಾ ಹೇಳುತ್ತಾ ನಮ್ಮನ್ನೇ ಎತ್ತಿಕಟ್ಟುವಂಥ ಕೆಲಸವನ್ನು ಮಾಡಿದ್ದಾರೆ ಇದು ನಿಮಗೆ ಗೊತ್ತಾ? ಸಿದ್ದರಾಮಣ್ಣ ನೀವು ನಿಮ್ಮ ಆತ್ಮೀಯರಿಗೆ ಒಳ್ಳೆಯ ಇಲಾಖೆಯನ್ನು ಕೊಟ್ಟಿದ್ದೀರಿ ಅಣ್ಣಾ, ಜನತಾ ದಳದವರೆಲ್ಲರನ್ನು ಸೇರಿಸಿದ್ದೀರಿ ಅಣ್ಣಾ ಎಂದು ಹೇಳಿರುವುದೇನು? ನಿಮ್ಮ ಬುದ್ಧಿವಂತಿಕೆಯನ್ನು ಮೆಚ್ಚಬೇಕು ಅಣ್ಣಾ ಎಂದು ಹೇಳಿದ್ದಾರೆ.

ಇದಕ್ಕೆ ಯಾವುದೇ ಮೂರು ಕಾಸಿನ ಕಿಮ್ಮತ್ತು ಇಲ್ಲ. We are all Congressmen. We are all committed to the ideology of the Congress party. Smt.Sonia Gandhi is our leader. I am

making it very clear on this floor. ಆ ರೀತಿ ಭಿನ್ನಾಭಿಪ್ರಾಯ ಬರುವಂಥ ರೀತಿಯಲ್ಲೇನಾದರೂ ದುರುದ್ದೇಶದಿಂದ ಹೇಳಿದ್ದರೆ, ಅದು ಅನಗತ್ಯ ಮತ್ತು ಅದಕ್ಕೆ ಯಾವುದೇ ಕಿಮ್ಮತ್ತಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತಿದ್ದೇನೆ. ಸಿದ್ದರಾಮಯ್ಯನವರು ಬಹಳ ತರಾತುರಿಯಲ್ಲಿ ಕೆಲವು ನಿರ್ಣಯಗಳನ್ನು ಎಲ್ಲಾ ಮಾಡಿಬಿಟ್ಟರು, ಅವರು ಬಹಳ ವೇಗವಾಗಿ ಓಡುತ್ತಿದ್ದಾರೆ, ಇಷ್ಟೊಂದು ತರಾತುರಿ ಬೇಕಾಗಿರಲಿಲ್ಲ ಎಂದೆಲ್ಲಾ ಹೇಳಿದರು. ಇದರಲ್ಲಿ ತರಾತುರಿಯೇನೂ ಇಲ್ಲ, ನಮಗೆ ನಮ್ಮ ಪ್ರಣಾಳಿಕೆ ಇದೆ. Our party is committed to it. ಪ್ರಣಾಳಿಕೆ ಎಂದರೆ ಕೇವಲ ಪ್ರಚಾರಕ್ಕಾಗಿ ಉಪಯೋಗಿಸತಕ್ಕಂಥ ಕರಪತ್ರವಲ್ಲ. ಇತ್ತೀಚೆಗೆ ಏನಾಗಿಬಿಟ್ಟದೆ ಪ್ರಣಾಳಿಕೆ ಎಂದರೆ ಅನೇಕ ಪಕ್ಷಗಳು ಅದನ್ನು ಉಪಯೋಗಿಸತಕ್ಕಂಥ ಕರಪತ್ರವಲ್ಲ. ಇತ್ತೀಚೆಗೆ ಏನಾಗಿಬಿಟ್ಟಿದೆ ಪ್ರಣಾಳಿಕೆ ಎಂದರೆ ಅನೇಕ ಪಕ್ಷಗಳು ಅದನ್ನು ಅನುಕರಣೆ ಮಾಡದೇ ಇರುವುದರಿಂದ ಆ ರೀತಿಯ ಭಾವನೆ ಬರಲು ಪ್ರಾರಂಭವಾಗಿದೆ. ಆದರೆ ನಾನು ಬಹಳ ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ, ನಮಗೆ ನಮ್ಮದೇ ಆದ ಪ್ರಣಾಳಿಕೆ ಇದೆ, ನಮ್ಮ ಪಕ್ಷದ ಬಹಳ ಜನ ಸೀನಿಯರ್ ಲೀಡರ್ಸ್, ಇಲ್ಲಿರುವಂಥವರು, ಹೊರಗಡೆಯಿರುವವರು, ಪಕ್ಷದಲ್ಲಿರುವವರು ಎಲ್ಲರೂ ಸೇರಿ manifesto ಮಾಡಿದ್ದೇವೆ. ಆ manifestoಗೆ ನಮ್ಮ commitment ಇದೆ, ಬದ್ಧತೆ ಇದೆ. It is not the manifesto of Siddaramaiah. It is the manifesto of the party. ಅದರಲ್ಲಿರುವ ಕೆಲವು ಬಡವರ ಕಾರ್ಯಕ್ರಮಗಳನ್ನು ಘೋಷಣೆ ಮಾಡುವ ಪ್ರಯತ್ನವನ್ನು ನಾನು ಮಾಡಿದ್ದೇನೆ. ಬಹಳ ಫಾಸ್ಟ್ ಆಗಿ ಮಾಡಿದರೆ ಏಕೆ ಫಾಸ್ಟ್ ಆಗಿ ಮಾಡಿದಿರಿ ಎಂದು ಕೇಳುತ್ತೀರಿ. ಮಾಡಲಿಲ್ಲವೆಂದರೆ, ಸರ್ಕಾರ ಬಹಳ ಸ್ಲೋ ಎಂದು ಹೇಳುತ್ತೀರಿ. ಸರ್ಕಾರ ಬಹಳ ನಿಧಾನಗತಿಯಲ್ಲಿ, ಆಮೆ ವೇಗದಲ್ಲಿ ನಡೆಯುತ್ತಿದೆ ಎಂದು ಹೇಳುತ್ತೀರಿ. ಫಾಸ್ಟ್ ಆಗಿ ಹೋದರೆ, ಏಕೆ ಫಾಸ್ಟ್ ಆಗಿ ಹೋದಿರಿ, ತರಾತುರಿಯಲ್ಲಿ ಮಾಡುತ್ತಿದ್ದೀರಿ ಎಂದು ಹೇಳುತ್ತಾರೆ. ಈ ಟೀಕೆಗಳನ್ನು ಮಾಡಲು ನಿಮಗೆ ಹಕ್ಕಿದೆ, ಮಾಡಿ. ಆದರೆ ನಾನು ಜನಗಳ ಹಿತದೃಷ್ಟಿಯಿಂದ, ಬಡವರ ಹಿತದೃಷ್ಟಿಯಿಂದ ಈ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದೇನೆಯೇ ಹೊರತು ಬೇರೆ ಯಾವುದೇ ದೃಷ್ಟಿಯಿಂದಲ್ಲ, ಬೇರೆ ಯಾವುದೇ ಉದ್ದೇಶದಿಂದಲ್ಲ ಎನ್ನುವುದನ್ನು ಸ್ಪಷ್ಟಪಡಿಸಲಿಕ್ಕೆ

ಬಯಸುತ್ತಿದ್ದೇನೆ. ಇವೆಲ್ಲ ನಮ್ಮ ಪಕ್ಷದ ಕಾರ್ಯಕ್ರಮಗಳು. ನಾನು ಘೋಷಣೆ ಮಾಡಿರತಕ್ಕಂಥ ಎಲ್ಲ ಕಾರ್ಯಕ್ರಮಗಳೂ ಕೂಡ ಪ್ರಣಾಳಿಕೆಯಲ್ಲಿ ಇರುವಂಥ ಕಾರ್ಯಕ್ರಮಗಳೇ ಆಗಿವೆ. ಒಂದು ರೂಪಾಯಿಗೆ ಒಂದು ಕೆ.ಜಿ. ಕೊಡುವ ಕಾರ್ಯಕ್ರಮ. ಎರಡು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಕೊಡುತ್ತೇವೆ ಎಂದು ಬಿ.ಜೆ.ಪಿ.ಯವರೂ ಮಾಡಿದ್ದರು. ಆದರೆ ಅದನ್ನು ನೀವು ಅನಿಷ್ಠಾನ ಮಾಡಲಿಲ್ಲ. ನಿಮ್ಮ ಸರ್ಕಾರವಿರುವಾಗ ನೀವು ಐದು ವರ್ಷಗಳ ಕಾಲ ಅದನ್ನು ಮಾಡುವುದಕ್ಕೇ ಹೋಗಲಿಲ್ಲ.

ಶ್ರೀ ಡಿ.ಎನ್. ಜೀವರಾಜ್ : ನಾವು ಮಾಡಿದ್ದೆವು, ಒಂದು ವಾರ ಅಕ್ಕಿಯನ್ನೂ ಕೊಟ್ಟೆವು.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ : ಒಂದು ವಾರ ಕೊಟ್ಟೆವು ಎಂದು ಹೇಳುತ್ತಿದ್ದೀರಿ. ಅದರಲ್ಲೇ ನಿಮ್ಮ ಬದ್ಧತೆ ಏನೆನ್ನುವುದು ಗೊತ್ತಾಗುತ್ತದೆ. ಒಂದು ವಾರ ಕೊಟ್ಟರೆ ಅದರಿಂತ ಏನೂ ಉಪಯೋಗವಿಲ್ಲ. ನಿಮಗೆ ಬದ್ಧತೆಯಿಲ್ಲ ಎಂದು ಗೊತ್ತಾಗುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಆಯಿತು, ಜೀವರಾಜ್‌ರವರೇ ಕುಳಿತುಕೊಳ್ಳಿ. ಒಂದು ವಾರವೆಂದರೆ ಅದು ಐದು ವರ್ಷವಲ್ಲ. ಒಂದು ವಾರವೆಂದರೆ ಐದು ವರ್ಷವೇ?

ಶ್ರೀ ಸಿ.ಟಿ.ರವಿ : ತುಂಬ ಜನಪ್ರಿಯ ಕಾರ್ಯಗಳಿಂದ ನೀವು ಜನಪ್ರಿಯರಾಗಿ. ಆದರೆ ಒಂದು ಅಪಾಯವೆಂದರೆ ಕಾಂಗ್ರೆಸ್ಸಿಗಿಂತ ಜಾಸ್ತಿ ಜನಪ್ರಿಯರಾಗಲು ಹೊರಟಿರುವುದು.

ಶ್ರೀ ದಿನೇಶ್ ಗುಂಡೂರಾವ್ : ಎಂದು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಕೊಡುತ್ತೇನೆ ಎನ್ನುವುದು ನಿಮ್ಮ ಕಾರ್ಯಕ್ರಮ. ಅದರಂತೆ ನೀವು ಕೊಡಲಿಲ್ಲ. ನೀವು ವಚನಭ್ರಷ್ಟರಾದಿರಿ ಅಷ್ಟೇ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಒಂದು ವಾರವೆಂದರೆ ಐದು ವರ್ಷಗಳಲ್ಲ. ಹೌದೋ, ಅಲ್ಲವೋ?

ಶ್ರೀ ಸಿ.ಟಿ. ರವಿ : ಮುಂದಿನ ಐದು ವರ್ಷಗಳು.

ಶ್ರೀ ಸಿದ್ದರಾಮಯ್ಯ : ಇಲ್ಲಿ ಕುಳಿತುಕೊಂಡು ಯಡಿಯೂರಪ್ಪನವರು ಹೇಳುತ್ತಿದ್ದರು, ಈಶ್ವರಪ್ಪನವರು ಈಗ ಇಲ್ಲಿ ಇಲ್ಲ, ಅವರೂ ಹೇಳುತ್ತಿದ್ದರು, 20 ವರ್ಷಗಳ ಕಾಲ ನಾವು ಇಲ್ಲೇ ಇರುತ್ತೇವೆ, ಕಾಂಗ್ರೆಸ್ಸಿನವರು ಅಲ್ಲೇ ಇರಬೇಕು ಎಂದು ಹೇಳಿದಿರಿ. ಈಗ ನೀವು ಎಲ್ಲಿದ್ದೀರಿ?

ಶ್ರೀ ಸಿ.ಟಿ. ರವಿ : ಜಗಳವಾಡಿಕೊಂಡು ಬಿಟ್ಟೆವು. ಜಗಳವಾಡದಿದರೆ ನೀವು ಇಲ್ಲೇ ಇರುತ್ತಿದ್ದಿರಿ, ನಾವು ಅಲ್ಲೇ ಇರುತ್ತಿದ್ದೆವು. ತಪ್ಪಾಗಿದೆ, ಅದಕ್ಕೋಸ್ಕರ ನಿಮ್ಮನ್ನು ಅಲ್ಲಿ ಕೂರಿಸಿ, ನಾವು ಇಲ್ಲಿ ಐದು ವರ್ಷ ಶಿಕ್ಷೆ ಅನುಭವಿಸುತ್ತೇವೆ. ನೀವು ಮತ್ತೆ ಅದೇ ಕೆಲಸ ಮಾಡಿದರೆ ನೀವು ಇಲ್ಲಿಗೆ ಬರುತ್ತೀರಿ, ನಾವು ಅಲ್ಲಿಗೆ ಹೋಗುತ್ತೇವೆ.

ಶ್ರೀ ಸಿದ್ದರಾಮಯ್ಯ : ಆಯಿತು, ನಾವು ಅದನ್ನು ಮಾಡುವುದಿಲ್ಲ ಎಂದು ಹೇಳುವುದಕ್ಕೇ ಇಲ್ಲಿ ನಿಂತಿರುವುದು.

ಶ್ರೀ ಸಿ.ಟಿ. ರವಿ : ವಿಶ್ವಾಮಿತ್ರ ತಪಸ್ಸಿಗೆ ಕುಳಿತಿದ್ದ. ಅವನ ತಪಸ್ಸಿಗೆ ಯಾರೂ ಭಂಗಗೊಳಿಸಲು ಆಗಲಿಲ್ಲ. ಮೇನಕ ಬಂದ ಮೇಲೆಯೇ ಶಕುಂತಲೆ ಹುಟ್ಟಿದ್ದು. ಮೇನಕೆ ಬರುವವರೆಗೆ ಅವನು ಘೋರ ತಪಸ್ವಿ. ಈಗ ಅಧಿಕಾರ ಎನ್ನುವ ಮೇನಕೆ ನಿಮ್ಮ ಹತ್ತಿರ ಬಂದಿದೆ.

ಶ್ರೀ ಸಿದ್ದರಾಮಯ್ಯ : ಆ ಕಥೆಗಳೆಲ್ಲಾ ಬೇಡ. ಕಥೆಗಳನ್ನು ನಂಬಿಕೊಂಡೇ ನೀವು ಹೀಗಾದಿರಿ. ಇಂಥ ಕಥೆಗಳನ್ನು ಕೇಳಿ ಕೇಳಿ ಸಾಕಾಗಿದೆ. ರವಿಯವರೇ, ಆಮೇಲೆ ಮಾತನಾಡಿ. ನಾನು ನಿಮ್ಮ ಕಡೆ ನೋಡಿ ಮಾತನಾಡಿದರೆ ಹೀಗೆಲ್ಲ ಕಷ್ಟವಾಗುತ್ತದೆ. ಆದ್ದರಿಂದ, ಅಧ್ಯಕ್ಷರೆ, ನಾನು ನಿಮ್ಮ ಕಡೆ ನೋಡಲು ಶುರು ಮಾಡುತ್ತೇನೆ. ಈ ಕಥೆಗಳನ್ನು ಹೇಳಿಯೇ ಅವರು ಆ ಕಡೆಗೆ ಹೋಗಿರುವುದು. ರಾಮಾಯಣ, ಮಹಾಭಾರತ, ವಿಶ್ವಾಮಿತ್ರ, ವಶಿಷ್ಠ, ಮೇನಕೆ, ಭಗವದ್ಗೀತೆ ಇವೆಲ್ಲವನ್ನೂ ಹೇಳಿಯೇ ಅವರು ಅಲ್ಲಿ ಹೋಗಿ ಕುಳಿತಿರುವುದು. ಅವರು ಎಲ್ಲವನ್ನೂ ಹೇಳಿದರು, ರಾಮಾಯಣ ಹೇಳಿದರು, ಮಹಾಭಾರತ ಹೇಳಿದರು, ವಿಶ್ವಾಮಿತ್ರನ ಕಥೆ ಹೇಳಿದರು, ಪುಣ್ಯಕೋಟಿ ಬಗ್ಗೆ ಹೇಳಿದರು, ಅಯೋಧ್ಯೆ ಬಗ್ಗೆ ಹೇಳಿ ಆಯಿತು. ಅಯೋಧ್ಯೆಯ ರಾಮನನ್ನು ನೆನೆದುಕೊಂಡಾಯಿತು, ಎಲ್ಲವನ್ನೂ ಹೇಳಿ, ನಾವು 20 ವರ್ಷ ಇಲ್ಲೇ ಇರುತ್ತೇವೆ, 20 ವರ್ಷ ನಮ್ಮನ್ನು ಯಾರಿಂದಲೂ ಅಲ್ಲಾಡಿಸಲು ಸಾಧ್ಯವಿಲ್ಲ ಎಂದು ಹೇಳಿದರು. ಆದರೆ ಜನರು ಅಲ್ಲಾಡಿಸುತ್ತಾರೆ ಎನ್ನುವುದು ಇವರ ತಲೆಗೇ ಹೋಗಲಿಲ್ಲ. ನೀವು ಅದನ್ನು

ಹೇಳುವಾಗಲೂ ತಪ್ಪು ಮಾಡಿದ್ದಿರಿ. ಅಷ್ಟು ಹೊತ್ತಿಗಾಗಲೇ ಅನೇಕ ಹಗರಣಗಲ್ಲಿ ಸಿಕ್ಕಿಹಾಕಿಕೊಂಡಿದ್ದಿರಿ.

ಶ್ರೀ ಸಿ.ಟಿ. ರವಿ : ಬುದ್ಧಿವಂತಿಕೆಯಿಂದ ನೀವು ರಾಜಕೀಯ ನಿವೃತ್ತಿ ಘೋಷಣೆ ಮಾಡಿರುವುದರಿಂದ ನಿಮಗೇನು ಆ ಅಪಾಯವಿಲ್ಲ.

ಶ್ರೀ ಸಿದ್ದರಾಮಯ್ಯ : ನಾನು ರಾಜಕೀಯ ನಿವೃತ್ತಿ ಘೋಷಣೆ ಮಾಡಿಲ್ಲ. ಮುಂದೆ ಚುನಾವಣೆಗೆ ನಿಲ್ಲುವುದಿಲ್ಲ ಎಂದು ಹೇಳಿದ್ದೇನಷ್ಟೇ. What I said was, ನಾನು ಮುಂದಿನ ಚುನಾವಣೆಯಲ್ಲಿ ಕಂಟೆಸ್ಟ್ ಮಾಡುವುದಿಲ್ಲ ಎಂದು ಹೇಳಿದೇನೆ, ಅಷ್ಟೇ ಹೊರತು ರಾಜಕೀಯದಿಂದ ನಿವೃತ್ತಿಯಾಗುತ್ತೇನೆ ಎಂದು ಹೇಳಿಲ್ಲ. I am making it very clear. ಪರಿಷತ್ತಿಗೂ ಹೋಗುವುದಿಲ್ಲ, ರಾಜ್ಯಸಭೆಯೂ ಇಲ್ಲ. No Parishat, no Rajya sabha, no Lok sabha. ಇದೇ ನನಗೆ ಕೊನೆಯ ಚುನಾವಣೆ. I am making it very clear. ಇದರಿಂದ ಹಿಂದಕ್ಕೆ ಹೋಗುವ ಪ್ರಶ್ನೆಯೇ ಇಲ್ಲ. ರಾಜ್ಯಪಾಲರೂ ಇಲ್ಲ, ಯಾವುದೂ ಇಲ್ಲ. ರಾಜ್ಯಪಾಲರೂ ಇಲ್ಲ, ಅದಕ್ಕಿಂತ ಇನ್ನೂ ಹೆಚ್ಚಿನ ಹುದ್ದೆಗಳಿದ್ದರೂ ಕೂಡ ಇಲ್ಲ.

ಶ್ರೀ ಬಿ.ಆರ್. ಪಾಟೀಲ್ : ತಮಗೆ High Command ಹೇಳಿದರೆ ಆಗುವಿರಾ?

ಶ್ರೀ ಸಿದ್ದರಾಮಯ್ಯ : ನಾನು ತೀರ್ಮಾನ ಮಾಡಿದ ಮೇಲೆ High Command ವಿಚಾರ ಏಕೆ ಬರುತ್ತದೆ?

ಡಾ: ಹೆಚ್.ಸಿ. ಮಹದೇವಪ್ಪ : ಮುಂದಿನ ಅಸೆಂಬ್ಲಿಗೆ ಚುನಾವಣೆಗೆ ನಿಲ್ಲುವುದಿಲ್ಲ ಎಂದು ಹೇಳಿದ್ದಾರೆ. ಸುಮ್ಮನೆ ಅನವಶ್ಯಕ ಮಾತು ಏಕೆ?

ಶ್ರೀ ಸಿದ್ದರಾಮಯ್ಯ : ಅನವಶ್ಯಕವಲ್ಲ, ಅದರಲ್ಲಿ ಎರಡನೇ ಮಾತಿಲ್ಲ. ನಾನು ಮತ್ತೆ ಅಸೆಂಬ್ಲಿಗೆ ನಿಲ್ಲುವುದಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಹದೇವಪ್ಪನವರಿಗೆ ಈಗಲೇ ಟೆನ್‌ಷನ್ ಆಗುತ್ತಿದೆ.

ಡಾ: ಹೆಚ್.ಸಿ. ಮಹದೇವಪ್ಪ : ಟೆನ್‌ಷನ್ ಏನಿಲ್ಲ. ಯೋಗ್ಯರೆಲ್ಲ ಹೊರಟ ಹೋಗಿಬಿಟ್ಟರೆ ಮುಂದೆ ಎಲ್ಲಿಂದ ತೆಗೆದುಕೊಂಡು ಬರುವುದು?

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಿಮ್ಮನ್ನು ನೋಡಿಬಿಟ್ಟು ನನಗೆ ಹಾಗೆ ಆಗಿಹೋಯಿತು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ರವಿಯವರೇ, ನೀವು ಪದೇ ಪದೇ ಏಳಬಾರದು. You are my good friend. ನೀವು ಹೀಗೆ ಪದೇ ಪದೇ ಎದ್ದರೆ ಹೇಗೆ? ನಾನು ಏಕೆ ಹೇಳುತ್ತಿದ್ದೇನೆ ಎಂದರೆ ಒಂದು ತೀರ್ಮಾನ ತೆಗೆದುಕೊಂಡ ಮೇಲೆ ಅದಕ್ಕೆ ಬದ್ಧವಾಗಿರಬೇಕಾಗುತ್ತದೆ. ಸಾರ್ವಜನಿಕವಾಗಿ ಒಂದು ಹೇಳಿಕೆ ಕೊಟ್ಟ ಮೇಲೆ ಆ ಹೇಳೀಕೆಗೆ ಬದ್ಧವಾಗಿರಬೇಕಾಗುತ್ತದೆ. ಇಲ್ಲದಿದ್ದರೆ ಜನ ನಮ್ಮ ಮೇಲೆ ಮೂರು ಕಾಸಿನ ಗೌರವವಿಟ್ಟುಕೊಳ್ಳವುದಿಲ್ಲ, ನಮ್ಮ ಮೇಲೆ ವಿಶ್ವಾಸವಿಡುವುದಿಲ್ಲ. It is not relevant now. ಸದ್ಯಕ್ಕೆ ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ನೀವು ಪ್ರಸ್ತಾಪ ಮಾಡಿದಿರಲ್ಲ ಎಂದು ಅದನ್ನು ಹೇಳಿದ್ದೇನಷ್ಟೇ.

ಮಾನ್ಯ ಜಗದೀಶ್ ಶೆಟ್ಟರ್‌ರವರು, ಇವರು ತರಾತುರಿಯಲ್ಲಿ ಮಾಡಿದ್ದಾರೆ, ಇವರಿಗೆ ಮುಂದಾಲೋಚನೆ ಇರಲಿಲ್ಲ, ಅಕ್ಕಿಯನ್ನು ಎಲ್ಲಿಂದ ಕೊಡುತ್ತಾರೆ? ಜೂನ್ ತಿಂಗಳಿನಿಂದ ಕೊಡುತ್ತೇವೆ ಎಂದು ಹೇಳಿದರು. ಈಗಾಗಲೇ ಜುಲೈ ತಿಂಗಳಿಗೆ ಕೊಡಲಾಗುವುದು ಎಂದು ಮುಂದೆ ಹಾಕಿದ್ದಾರೆ ಎಂದು ಹೇಳಿದರು. ಮಾನ್ಯ ಅಧ್ಯಕ್ಷರೆ, ನಾವು ಜೂನ್ ತಿಂಗಳಿಂದ ಕೊಡಬೇಕೆನ್ನುವ ಉದ್ದೇಶವಿತ್ತು. ನನಗೆ ಈಗ 1 ಲಕ್ಷ 77 ಸಾವಿರ ಮೆಟ್ರಿಕ್ ಟನ್ ಅಕ್ಕಿ ಬರುತ್ತಿದೆ. 87 ಲಕ್ಷ ಬಿ.ಪಿ.ಎಲ್. ಕಾರ್ಡ್‌ನವರು ಇದ್ದಾರೆ. 11 ಲಕ್ಷ ಅಂತ್ಯೋದಯ ಕಾರ್ಡ್‌ನವರು ಇದ್ದಾರೆ. ಒಟ್ಟು 98 ಲಕ್ಷ ಜನ ಇದ್ದಾರೆ. ಅವರೆಲ್ಲರಿಗೂ ಕೂಡ ಒಂದು ರೂಪಾಯಿಗೆ ಒಂದು ಕೆ.ಜಿ. ಅಕ್ಕಿಯಂತೆ ಒಂದು ಕುಟುಂಬಕ್ಕೆ 30 ಕೆ.ಜಿ. ಅಕ್ಕಿ ಎಂದು ಕೊಡಬೇಕಾದರೆ, ಇನ್ನೂ 1 ಲಕ್ಷದ 60 ಸಾವಿರ ಮೆಟ್ರಿಕ್ ಟನ್ ಅಕ್ಕಿ ಬೇಕು. ತತ್‌ಕ್ಷಣಕ್ಕೆ ಅದನ್ನು ಹೊಂದಿಸಿಕೊಳ್ಳಲು ಆಗಲಿಲ್ಲ. ಜುಲೈ ತಿಂಗಳಿನಲ್ಲಿ open market ನಿಂದ ತೆಗೆದುಕೊಳ್ಳುವುದಕ್ಕೆ ಅಥವಾ ಕೇಂದ್ರ ಸರ್ಕಾರದಿಂದ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ. ಹಾಗಾಗಿ ನಾವು ಪ್ರಾಮಾಣಿಕವಾದ ಪ್ರಯತ್ನ ಮಾಡಿದರೂ ಕೂಡ ಜೂನ್ ತಿಂಗಳಿನಲ್ಲಿ ಕೊಡುವುದಕ್ಕೆ ಆಗಲಿಲ್ಲ. ಜುಲೈ ತಿಂಗಳಿನಿಂದ ನೂರಕ್ಕೆ ನೂರಷ್ಟು ಒಂದು ರೂಪಾಯಿತಂತೆ ಒಂದು ಕೆ.ಜಿ. ಅಕ್ಕಿ ಕೊಡುವುದನ್ನು ಕೊಟ್ಟೇ ಕೊಡುತ್ತೇವೆ. ಅದು ಬಡವರ ಕಾರ್ಯಕ್ರಮ. ಉದ್ದೇಶವೇನೆಂದರೆ, ಹಿಂದೆ 2004–05ರಲ್ಲಿ

ಸಮ್ಮಿಶ್ರ ಸರ್ಕಾರ ಇದ್ದಾಗ, ನಾನು ಆಗ ಹಣಕಾಸಿನ ಮಂತ್ರಿಯಾಗಿದ್ದೆ. 25 ಕೆ.ಜಿ. ಅಕ್ಕಿ. 5 ಕೆ.ಜಿ. ಗೋಧಿಯನ್ನು ಮೂರು ರೂಪಾಯಿಯಂತೆ ಕೊಡಬೇಕೆಂದು ಮಾಡಿದ್ದರು. ಆನಂತರ ಕುಮಾರಸ್ವಾಮಿಯವರ ಸಮ್ಮಿಶ್ರ ಸರ್ಕಾರ ಬಂದಾಗ ಯೂನಿಟ್ ಸಿಸ್ಟಂ ಮಾಡಿದರು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು): ನೀವು ಉಪಮುಖ್ಯಮಂತ್ರಿಯಾಗಿದ್ದ ಮಂತ್ರಿಮಂಡಲದಲ್ಲಿ ಆಹಾರ ಸಚಿವರಾಗಿದ್ದವರು ಯೂನಿಟ್‌ಗೆ ತಲಾವಾರು 4 ಕೆ.ಜಿ. ಕೊಡಬೇಕೆಂದು proposal ಅನ್ನು ತೀರ್ಮಾನ ಮಾಡಿದ್ದರು. ಅವರನ್ನೇ ಕೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅದನ್ನು ನಾವು ತೀರ್ಮಾನ ಮಾಡಿದ್ದಲ್ಲಾ.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಅಲ್ಲಿ ಅವರನ್ನು ಕೇಳಿ.

(ಗೊಂದಲ)

ಅಧ್ಯಕ್ಷರು : ಆಗ ನಾನು ಮುಖ್ಯಮತ್ರಿಯಾಗಿರಲಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ yield ಆಗಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ರೇವಣ್ಣನವರೆ, ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದರು.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಇಡೀ ರಾಷ್ಟ್ರದಲ್ಲಿ ಕೆ.ಜಿ.ಗೆ 3 ರೂಪಾಯಿ ಅಕ್ಕಿ, ಕೆ.ಜಿ.ಗೆ 2 ರೂಪಾಯಿ ಗೋಧಿ ಕಾರ್ಯಕ್ರಮ ಮಾಡಿದ್ದು ಮಾನ್ಯ ದೇವೇಗೌಡರು ಪ್ರಧಾನಮಂತ್ರಿಯಾಗಿದ್ದಾಗ ಮಾಡಲಾಗಿದೆ.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ನೀವು ಉಪಮುಖ್ಯಮಂತ್ರಿಗಳಾಗಿದ್ದಾಗ ಮಹದೇವಪ್ರಸಾದ್‌ರವರೆ ಆಹಾರ ಸಚಿವರಾಗಿದ್ದರು. ಅವರ ಕಾಲದಲ್ಲಿಯೇ ತಲಾವಾರು 4 ಕೆ.ಜಿ. ಕೊಡಬೇಕೆಂದು proposal ತಂದು introduce

ಮಾಡಿದ್ದು. ಮರೆತಿದ್ದರೆ ತಾವು ಸ್ವಲ್ಪ ಹೇಳಬೇಕು. ನಾವು ಮಾಡುತ್ತೇವೆ ಎಂದು ಹೇಳಿರಲಿಲ್ಲವಲ್ಲ. ಸಾಲದ್ದಕ್ಕೆ ನಾನು ಅವತ್ತು ಪ್ರಣಾಳಿಕೆ ಬಿಡುಗಡೆ ಮಾಡಿ ಆದಂತಹ ಮುಖ್ಯಮಂತ್ರಿ ಅಲ್ಲ. ರಾಜಕೀಯ ಸನ್ನಿವೇಶದಲ್ಲಿ ಆದಂತಹ ಮುಖ್ಯಮಂತ್ರಿ. ನನ್ನ ಕೈಯಲ್ಲಿ ಏನು ಮಾಡಲಿಕ್ಕೆ ಸಾಧ್ಯವಿತ್ತು. ಅದನ್ನು ಮಾಡಿದ್ದೇನೆ. ನಾಡಿನ ಜನಕ್ಕೆ ಏನು ಮಾಡಬೇಕಿತ್ತು ಅದನ್ನು ಮಾಡಿದ್ದೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : Facts ಹೇಳಿದರೆ ತಮಗೆ ಏಕೆ ಕೋಪ?

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ನನಗೆ ಕೋಪ ಅಲ್ಲ. Introduce ಮಾಡಿದ್ದು ನೀವು Finance Minister ಆಗಿ,. ..

(ಗೊಂದಲ)

ಶ್ರೀ ಸಿದ್ದರಾಮಯ್ಯ : No, no, ನಾನು introduce ಮಾಡಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಅವರನ್ನು ಕೇಳಿ ಅವರು ಆಹಾರ ಸಚಿವರಾಗಿ ಅಲ್ಲಿದ್ದರು. ನೀವು ಉಪಮುಖ್ಯಮಂತ್ರಿಗಳಾಗಿದ್ದಾಗ ಮಾಡಲಾಗಿತ್ತು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಆಗ ತೀರ್ಮಾನವಾಗಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ನೀವು ಆರ್ಥಿಕ ಸಚಿವರಾಗಿ, ನಿಮ್ಮ ಸಚಿವ ಸಂಪುಟದಲ್ಲಿಯೇ ಆಹಾರ ಸಚಿವರಾಗಿ ಅವರೇ ಮುಂದುವರೆಸಿದ್ದಾರೆ. ಈಗ ಸದನದಲ್ಲಿ ದಾರಿ ತಪ್ಪಿಸಬೇಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇದು ದಾರಿ ತಪ್ಪಿಸುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಅಲ್ಲಿ ಅವರು ಹೇಳಬೇಕು. ನಿಮ್ಮ ಕಾಲದಲ್ಲಿ ಆಹಾರ ಸಚಿವರಾಗಿ ಮಹದೇವಪ್ರಸಾದ್‌ನವರು ಏನು ತೀರ್ಮಾನ ಮಾಡಿದ್ದರು ಎನ್ನುವುದನ್ನು ಹೇಳಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಿಮ್ಮ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿರುವುದು.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ನೀವು ಇದ್ದಿದ್ದರೆ, ಮುಂದುವರೆದಿದ್ದರೆ ಅದನ್ನು ನೀವೇ ತರುತ್ತಿದ್ದೀರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನೋಡಿ. ನೋಡಿ ಹೇಗೆ ಹೇಳುತ್ತಿದ್ದಾರೆ?

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಮಾನ್ಯ ಆಹಾರ ಸಚಿವರಾಗಿದ್ದವರು ಹೇಳಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಯಡಿಯೂರಪ್ಪನವರೆ, ನಿಮ್ಮ ಕಾಲದಲ್ಲಿಯೇ ಅಲ್ಲವೇ ಆದದ್ದು ನೀವು ಹಣಕಾಸಿನ ಮಂತ್ರಿಗಳು ಆಗಿದ್ದಾಗ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅವರು ಬೇರೆ ಪಾರ್ಟಿಬಿಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಆಗ ಸಮ್ಮಿಶ್ರ ಸರ್ಕಾರ ಇತ್ತು.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಅವರನ್ನು ಕೇಳಿ ಮೌನವಾಗಿದ್ದಾರಲ್ಲಾ? ನೀವು ಏನಾದರೂ ಅವತ್ತು ಮುಂದುವರೆದಿದ್ದರೆ ಅವತ್ತೇ ನೀವು ತರುತ್ತಿದ್ದೀರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅವರ ಪರವಾಗಿ ನಾನೇ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಮಹದೇವಪ್ರಸಾದ್‌ರವರೆ, ಅವತ್ತು ತರುತ್ತಿದ್ದರು.

(ಗೊಂದಲ)

ಶ್ರೀ ಸಿದ್ದರಾಮಯ್ಯ : As I know, ನಾವು ಇರುವಾಗ ಅದು ತೀರ್ಮಾನವಾಗಲಿಲ್ಲ. ಒಂದು propsal ಎಂದರೆ ಅದು ತೀರ್ಮಾನ ಅಲ್ಲ. Proposal may be rejected or accepted.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಆಯಿತು, ಬಡವರ ಪರವಾಗಿ ನೀವೇ ಇರುವವರು. ನಮಗೂ ಗೊತ್ತಿದೆ. ದಯವಿಟ್ಟು ಯಾರು ತಂದಿದ್ದಾರೆ ಎನ್ನುವುದನ್ನು ನೋಡೋಣ. ಲೋಕಸಭೆ ಚುನಾವಣೆ ಸಮಯದಲ್ಲಿ ನಿಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ದೇಶಕ್ಕೆ ಎಷ್ಟು ರೂಪಾಯಿಗೆ ಕೆ.ಜಿ ಅಕ್ಕಿಯನ್ನು ಕೊಡುತ್ತೇವೆ ಎಂದು ಹೇಳಿದ್ದರು. ಕೇಂದ್ರ ಸರ್ಕಾರದಲ್ಲಿ ತಂದರೆ? ಐದು ವರ್ಷ ಆಯಿತು. ಮುಗಿಯುತ್ತಾ ಬಂದಿದೆ. ಇವೆಲ್ಲಾ ಚರ್ಚೆ ಮಾಡುವುದು ಬೇಡ.

(ಗೊಂದಲ)

ಶ್ರೀ ಸಿದ್ದರಾಮಯ್ಯ : Food Security Act ಬರುತ್ತಿದೆ. Food Security Act is coming.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಎಲ್ಲಿ ಬರುತ್ತಿದೆ? ಮನೆಗೆ ಹೋಗುತ್ತಿದ್ದೀರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇಲ್ಲ. ಈಗ ಬರುತ್ತಿದೆ.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : Food Security Act ತರದೇ ಮನೆಗೆ ಹೋಗುತ್ತಿದ್ದೀರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಯಾರ್ಯಾರು ಮನೆಗೆ ಹೋಗುತ್ತಿದ್ದಾರೆ ಎನ್ನುವುದು ಗೊತ್ತಾಗುವುದಿಲ್ಲವೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅದಕ್ಕೆ ಬಿ.ಜೆ.ಪಿಯವರೇ ವಿರೋಧ ಮಾಡುತ್ತಿರುವುದು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಕೇಂದ್ರ ಸರ್ಕಾರದಲ್ಲಿರುವ ಆಹಾರ ಸಚಿವರೇ ವಿರೋಧ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ : ಆಹಾರ ಸಚಿವರು ವಿರೋಧ ಮಾಡುತ್ತಿಲ್ಲ. 62% of the population of the country will be covered.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಏನು ಬೇಕಾದರೂ ಹೇಳಿ ಕುಮಾರಸ್ವಾಮಿ-ಯವರೆ, ನಾನು ಬೇಡ ಎನ್ನುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ನಾನು ಹೇಳುವುದೇನೆಂದರೆ, ನಮ್ಮ ಮೇಲೆ ದೂರುವುದು ಬೇಡ. ಯಾವ್ಯಾವ ಸಂದರ್ಭದಲ್ಲಿ ಏನು ತೀರ್ಮಾನವಾಯಿತು ಎಂದು ಸತ್ಯ ಹೇಳಿ ಅಷ್ಟೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : I am putting the facts before the House. I am putting the facts before the House. I am not misleading the House. Facts ಮಾತ್ರ ಹೇಳುತ್ತಿದ್ದೇನೆ. I am not making this statement with any mala fide intentions. ನಾನು facts ಏನಿದೆ, ಅದನ್ನು ಹೇಳುತ್ತಿದ್ದೇನೆ. Unit system ಬಂದಿದ್ದು ಸಮ್ಮಿಶ್ರ ಸರ್ಕಾರದಲ್ಲಿ ಎನ್ನುವುದು ಸತ್ಯ. ಅದಕ್ಕೆ ನಾವು ಈ ಬಾರಿಯ manifesto ದಲ್ಲಿ ಏನು ಹೇಳಿದ್ದೇವೆಂದರೆ, unit system ನಲ್ಲಿ ಸಾರ್ವಜನಿಕರಿಂದ ಬಹಳಷ್ಟು ದೂರುಗಳು ಬಂದಿದ್ದವು. ನಾನು ಆ ಕಡೆ ಕುಳಿತಿದ್ದಾಗ ಅನೇಕ ಬಾರಿ ಇಲ್ಲಿದ್ದಂತಹ ಸಮ್ಮಿಶ್ರ ಸರ್ಕಾರಕ್ಕೆ, ಬಿ.ಜೆ.ಪಿ ಸರ್ಕಾರಕ್ಕೆ ಆ unit system ಅನ್ನು ತೆಗೆದು ಹಾಕಿ ಎಂದು ಹೇಳಿದ್ದೆ. 25 ಕೆ.ಜಿ. ಕೊಡಿ ಎಂದು ಹೇಳಿದೆವು. ಆದರೆ ಅವರು ಕೊಡಲಿಲ್ಲ. 12 ವರ್ಷದೊಳಗಿರುವ ಮಕ್ಕಳಿಗೆ ಕೊಡುವುದನ್ನು ನಿಲ್ಲಿಸಿದ್ದರು. ಮಕ್ಕಳೇ ಜಾಸ್ತಿ ಊಟ ಮಾಡುವುದು. ಈಗ ನಿಮ್ಮ ವಯಸ್ಸಿನವರು ಜಾಸ್ತಿ ಊಟ ಮಾಡುವುದಕ್ಕೆ ಆಗುತ್ತದೆಯೇ ಮಾನ್ಯ ಅಧ್ಯಕ್ಷರೆ? ಮಕ್ಕಳಷ್ಟು ಊಟ ಮಾಡುವುದಕ್ಕಾಗುವುದಿಲ್ಲ. 10–12 ವರ್ಷದೊಳಗಿನ ಮಕ್ಕಳಿಗೆ ಕೊಡುವುದನ್ನು ನಿಲ್ಲಿಸಿದ್ದರು. ಯಾರೂ ಕೂಡ ಸಮಾಜದಲ್ಲಿ ಬಡವರಿಗೆ ಎಲ್ಲರಿಗೂ ಎರಡು ಹೊತ್ತಿನ ಊಟ ಸಿಗಬೇಕು. ಯಾರೂ ಹಸಿವಿಯಿಂದ ಬದುಕಬಾರದು. ಹಸಿವಿನಿಂದ ಯಾರು ಇರಬಾರದು. ಹಸಿವನ್ನು

ನೀಗಿಸುವಂತಹ ದಿಕ್ಕಿನಲ್ಲಿ ಇದೊಂದು ಪ್ರಮುಖವಾದಂತಹ ಹೆಜ್ಜೆ ಎಂದು ಒಂದು ಕುಟುಂಬಕ್ಕೆ 30 ಕೆ.ಜಿ. ಅಕ್ಕಿ ಕೊಡುವಂತಹ ತೀರ್ಮಾನವನ್ನು ಮಾಡಿದ್ದೇವೆ. ಒಂದು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ. ಬಿ.ಜೆ.ಪಿಯವರೂ ಕೂಡ, ಒಂದು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಕೊಡುತ್ತೇವೆಂದು ಮೊನ್ನೆ ಪ್ರಣಾಳಿಕೆಯಲ್ಲಿ ಹೇಳಿದ್ದರು. ಎರಡು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಕೊಡುತ್ತೇವೆಂದು ಹೇಳಿ ಮಾನ್ಯ ಜಗದೀಶ್ ಶೆಟ್ಟರೆ ತಾವು ಕೊಡಲಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : Election Code of Conduct ಇದ್ದುದರಿಂದ ಮಾಡುವುದಕ್ಕೆ ಆಗಲಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇಲ್ಲ ಐದು ವರ್ಷ ಇದ್ದಿರಲ್ಲಾ ನೀವು 11 ತಿಂಗಳು ಅಧಿಕಾರದಲ್ಲಿದ್ದೀರಿ. ಅವರು 3 1/4 ವರ್ಷ ಇದ್ದರು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ತರಬೇಕೆಂದು ವಿಚಾರ ಮಾಡಿದ್ದೆವು. ಏಪ್ರಿಲ್ ಒಂದನೇ ತಾರೀಖಿನಿಂದ Code of Conduct ಜಾರಿಗೆ ಬಂದಿತು. ಆದ್ದರಿಂದ ಮಾಡಲು ಆಗಲಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಜಗದೀಶ್ ಶೆಟ್ಟರೆ, ನಾವೇ ಮತ್ತೆ ಅಧಿಕಾರಕ್ಕೆ ಬರುತ್ತೇವೆ ಎಂದು ನೀವೂ ಹೇಳುತ್ತಿದ್ದಿರಿ. ಈ ರೀತಿ ಮಾಡಿದ್ದಕ್ಕೆ ನಿಮ್ಮನ್ನು ಅಲ್ಲಿ ಕೂರಿಸಿದರು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನೀವು ಮಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾಡುತ್ತಿದ್ದೇವಲ್ಲಾ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಎಷ್ಟೇ ದುಡ್ಡು ಖರ್ಚು ಆಗಲಿ. ಸಬ್ಸಿಡಿ ಎಷ್ಟೇ ದುಡ್ಡು ಆಗಲಿ. ನಾವು ಇದನ್ನು ಕಡ್ಡಾಯವಾಗಿ ನೂರಕ್ಕೆ ನೂರು ಜಾರಿಗೆ ತೆಗೆದುಕೊಂಡು ಬರುತ್ತಿದ್ದೇವೆ. ನನಗೆ ಗೊತ್ತಿರುವ information ಪ್ರಕಾರ, ಇಡೀ ದೇಶದಲ್ಲೇ ಜಾರಿಗೆ ತರಬೇಕೆಂದು ಕೇಂದ್ರ ಸರ್ಕಾರ ಕೂಡ Food Security Act ಅನ್ನು ಜಾರಿಗೆ ತರುತ್ತಿದೆ. ಇದು ಬಡವರಿಗೆ ಉಪಯೋಗವಾಗುವಂತಹ ಕಾರ್ಯಕ್ರಮ. ಮಾನ್ಯ ಯಡಿಯೂರಪ್ಪನವರು, ಮಾನ್ಯ ಜಗದೀಶ್ ಶೆಟ್ಟರ್‌ರವರು ಇನ್ನೊಂದು ಮಾತನ್ನು ಹೇಳಿದರು. ಈ ಎಲ್ಲಾ ಕಾರ್ಯಕ್ರಮಗಳನ್ನು ಮಾಡುತ್ತಿರುವುದು ಹಣಕಾಸಿನ ಪರಿಸ್ಥಿತಿ ಬಹಳ ಸುಭದ್ರವಾಗಿತ್ತು, ನಾವೆಲ್ಲಾ ಸುಭದ್ರವಾಗಿ ಇಟ್ಟಿದ್ದೆವು ಅದಕ್ಕೋಸ್ಕರವಾಗಿ ಇದನ್ನೆಲ್ಲಾ ಮಾಡಿದ್ದೀರಿ ಎಂದು ಹೇಳಿದರು. ನೀವೆಲ್ಲಾ ಟೀಕೆ ಮಾಡುತ್ತಿದ್ದಿರಿ, ಆದರೆ ಸುಭದ್ರ ಇಲ್ಲದೇ ಹೇಗೆ ಇವೆಲ್ಲಾ ಮಾಡುತ್ತಿದ್ದೀರಿ ಎಂದು ಮಾನ್ಯ ಯಡಿಯೂರಪ್ಪನವರು ಮತ್ತು ಮಾನ್ಯ ಜಗದೀಶ್ ಶೆಟ್ಟರ್‌ರವರು ಪ್ರಶ್ನೆ ಮಾಡಿದ್ದರು.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಕೇಂದ್ರ ಸರ್ಕಾರದಿಂದ 33 ಲಕ್ಷ ಕಾರ್ಡುದಾರರಿಗೆ ಕಿಲೋ ಒಂದಕ್ಕೆ 3 ರೂಪಾಯಿಯಂತೆ ಅಕ್ಕಿ ಕೊಡುತ್ತಾರೆ.

ಶ್ರೀ ಸಿದ್ದರಾಮಯ್ಯ : 31 ಲಕ್ಷ ಕಾರ್ಡುದಾರರಿಗೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : 11 ಲಕ್ಷ ಅಂತ್ಯೋದಯ ಕಾರ್ಡುದಾರರಿಗೆ ಅದು ಪೂರ್ಣ ಪ್ರಮಾಣದಲ್ಲಿ 35 ಕೆ.ಜಿ. ಅಕ್ಕಿಯನ್ನು ಕೇಂದ್ರ ಸರ್ಕಾರದ ಹಣಕಾಸಿನ ಹಣದಿಂದಲೇ ಕೊಡುತ್ತಾರೆ. ರಾಜ್ಯ ಸರ್ಕಾರದಿಂದಲ್ಲ.

ಶ್ರೀ ಸಿದ್ದರಾಮಯ್ಯ : ಅದನ್ನು ಕೆ.ಜಿ. ಒಂದಕ್ಕೆ 3 ರೂಪಾಯಿಯಂತೆ ಕೊಡುವುದು. ಅದಕ್ಕೂ ಒಂದು ರೂಪಾಯಿಗೆ ಕೊಡುತ್ತೇವೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಒಂದು ರೂಪಾಯಿಗೆ ಕೊಡುತ್ತೀರಷ್ಟೆ. ಅದೆಲ್ಲ ಕೇಂದ್ರ ಸರ್ಕಾರದ ಮೇಲೆ ಬೀಳುವಂಥ ಹೊರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಶಿವಲಿಂಗೇಗೌಡರೆ, ಅದು ಎಲ್ಲರಿಗೂ ಗೊತ್ತಿರುವುದಲ್ಲವೇ? ನಾನು ಇಲ್ಲ ಎಂದು ಹೇಳಿದ್ದೇನೆಯೇ? 11 ಲಕ್ಷ ಅಂತ್ಯೋದಯ ಕಾರ್ಡುಗಳಿಗೆ 35 ಕೆ.ಜಿ. ಅಕ್ಕಿ ಕೊಡುತ್ತೇವೆ ನಿಜ. ಆದರೆ, ಅದಕ್ಕೆ ಕೆ.ಜಿ. ಒಂದಕ್ಕೆ 3 ರೂಪಾಯಿ. ಆ 3 ರೂಪಾಯಿಯ ಬದಲು ನಾವು

ಈಗ ಅದಕ್ಕೂ ಒಂದು ರೂಪಾಯಿ ಎಂದು ಮಾಡುತ್ತಿದ್ದೇವೆ. ಅವರಿಗೂ ಒಂದು ರೂಪಾಯಿಗೆ ಕೆ.ಜಿ. ಅಕ್ಕಿಯನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. 11 ಲಕ್ಷ ಅಂತ್ಯೋದಯ ಕಾರ್ಡುದಾರರು ಏನಿದ್ದಾರೆ. ಅವರಿಗೂ ಕೂಡ 1 ರೂ.ಗೆ ಒಂದು ಕೆ.ಜಿ. ಅಕ್ಕಿಯಂತೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಈಗ ಅಂತ್ಯೋದಯ, ಬಿಪಿಎಲ್ ಈ ಎರಡೂ ಕಾರ್ಡುದಾರರಿಗೆ ಕೊಡಬೇಕೆಂದು ಮಾಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : APL ನವರಿಗೆ ಏನು ಮಾಡುತ್ತೀರಿ?

ಶ್ರೀ ಸಿದ್ದರಾಮಯ್ಯ : APL ನವರಿಗೆ ಕೊಡುವುದನ್ನು ಈ ಹಿಂದಿನ ಸರ್ಕಾರದವರೇ ನಿಲ್ಲಿಸಿಬಿಟ್ಟಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ನೀವು ಮೈಸೂರಿನಲ್ಲಿ statement ಕೊಟ್ಟಿದ್ದೀರಲ್ಲ?

(ಗೊಂದಲ)

ಶ್ರೀ ಸಿದ್ದರಾಮಯ್ಯ : No, no. it is not correct. ನಾನು ಮೈಸೂರಿನಲ್ಲಿದ್ದಾಗ press ನವರು ನನಗೆ ಪ್ರಶ್ನೆ ಕೇಳಿದರು. ಮಾಧ್ಯಮದವರಿಗೆ ನಾನು ಹೇಳಿದೆ. BPL ನವರಿಗೆ ಮಾತ್ರ ಇದು apply ಆಗುತ್ತದೆ, APL ನವರಿಗೆ ಅಲ್ಲ ಎಂದು ಹೇಳಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ : APL ನವರಿಗೆ BPLcard ಕೊಟ್ಟಿದ್ದಾರೆ, BPL ನವರಿಗೆ APL card ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ : ಅದನ್ನೆಲ್ಲ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಉದ್ದೇಶವೇನೆಂದರೆ, ಅರ್ಹರಿಗೆ ತಪ್ಪಿಹೋಗಬಾರದೆನ್ನುವುದು. ಅನರ್ಹರನ್ನು ತೆಗೆದುಹಾಕುವ ಕೆಲಸವನ್ನೂ ಸಹ ಮಾಡುತ್ತೇವೆ. ಆದರೆ, ಅರ್ಹರಿಗೆ ತಪ್ಪಿಹೋಗಬಾರದು. ಯಾರ್‍ಯಾರು ಅರ್ಹರಿಗೆ ಸಿಗಬೇಕು, ಅವರೆಲ್ಲರಿಗೂ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಈಗಲೂ ಕೂಡ ಯಾರ್‍ಯಾರು ಹೊರಗುಳಿದಿದ್ದಾರೆ, ಯಾವುದಾದರೂ ಕಾರಣಕ್ಕೆ ತೆಗೆದು ಹಾಕಿದ್ದರೆ ಅವರು ಮತ್ತೆ ಅರ್ಜಿ ಹಾಕಿಕೊಳ್ಳಬಹುದು. ಅವರನ್ನು ಗುರುತಿಸಿ ವಿಚಾರಣೆ ಮಾಡಿ ಅವರನ್ನು ಮತ್ತೆ BPL ಜಾಗಕ್ಕೆ ಸೇರಿಸುವಂಥ ಕೆಲಸವನ್ನು ಮಾಡುತ್ತೇವೆ.

ಶ್ರೀ ಎಂ.ಟಿ. ಕೃಷ್ಣಪ್ಪ : ಮಾನ್ಯ ಮುಖ್ಯಮಂತ್ರಿಯವರೆ,......

ಶ್ರೀ ಸಿದ್ದರಾಮಯ್ಯ : ಹೀಗೆ ಎಲ್ಲರೂ ಮಧ್ಯೆ ಮಧ್ಯೆ ಎದ್ದು ನಿಂತರೆ ಹೇಗೆ? Clarification ಸಂದರ್ಭದಲ್ಲಿ ಕೇಳಿ ಕೃಷ್ಣಪ್ಪನವರೆ.

ಅಧ್ಯಕ್ಷರು : ಈಗ ಮಧ್ಯದಲ್ಲಿ ಕೇಳುವುದು ಬೇಡ. ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಏನಾಗುತ್ತದೆ ಎಂದರೆ, ನಾನು ಏನೆಲ್ಲಾ ಮಾತನಾಡಬೇಕೆಂದಿದ್ದೆನೋ ಅದನ್ನೆಲ್ಲ ದಾರಿತಪ್ಪಿಸಬೇಕು ಎಂದು ಮಾಡು-ತ್ತಿದ್ದೀರಿ.

ಶ್ರೀ ಎಂ.ಟಿ. ಕೃಷ್ಣಪ್ಪ : ಹಾಗಲ್ಲ. ಸನ್ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ Affidavit ಮುಖಾಂತರ ಅರ್ಜಿ ಹಾಕಿದವರಿಗೆಲ್ಲ ಕಾರ್ಡ್ ಕೊಟ್ಟರು. Parliament election ಮುಗಿದ ಬೆಳಗ್ಗೆಯೇ withdraw ಆಗಿಹೋಯಿತು. ನೀವು ಆ ತರಹ ಏನಾದರೂ ಮಾಡುತ್ತೀರೋ ಅಥವಾ continue ಮಾಡುತ್ತೀರೋ ಎನ್ನುವುದು ನನ್ನ ಪ್ರಶ್ನೆ.

ಶ್ರೀ ಸಿದ್ದರಾಮಯ್ಯ : ಈಗ ಪಾಪ ಇವೆಲ್ಲ ಆಗಿ ಮಾನ್ಯ ಯಡಿಯೂರಪ್ಪನವರು ಆ ಕಡೆ ಬಂದು ಕುಳಿತುಬಿಟ್ಟಿದ್ದಾರೆ. ಈಗ ಇವೆಲ್ಲವನ್ನು ಏಕೆ ಜ್ಞಾಪಕ ಮಾಡಿಕೊಳ್ಳುವುದಕ್ಕೆ ಹೋಗುತ್ತೀರಿ? ಕೃಷ್ಣನವರೆ, ಆ ತರಹದ ಸಂಶಯ ಇಟ್ಟು ಕೊಳ್ಳ ಬೇಕಾದಂಥ ಅಗತ್ಯವಿಲ್ಲ. ನನಗೆ 5 ವರ್ಷ ಇರಲಿಕ್ಕೆ ಜನರು mandate ಕೊಟ್ಟಿದ್ದಾರೆ, ಜನಾದೇಶ ಆಗಿದೆ. 5 ವರ್ಷದವರೆಗೂ ಕೂಡ ಈ ಕಾರ್ಯಕ್ರಮವನ್ನು ಮುಂದುವರೆಸುತ್ತೇವೆ. ಅದರ ಬಗ್ಗೆ ಯಾವುದೇ ಸಂಶಯ ಇಟ್ಟುಕೊಳ್ಳಬೇಕಾದ ಅಗತ್ಯವಿಲ್ಲ. ನಿಜ, ಯಡಿಯೂರಪ್ಪನವರು ಆ Parliament ಚುನಾವಣೆ ಬಂದಾಗ ನೆಮ್ಮದಿ ಕೇಂದ್ರಗಳ ಮೂಲಕ ಅರ್ಜಿ ಹಾಕಿದವರಿಗೆಲ್ಲ ಕೊಟ್ಟುಬಿಟ್ಟರು. ಆಮೇಲೆ ಅವೆಲ್ಲ ತಾತ್ಕಾಲಿಕ ಕಾರ್ಡುಗಳೆಂದು ರದ್ದಾದವು. 2–3 ತಿಂಗಳು ಇತ್ತು. ನಾವು ಆ ತರಹ ಮಾಡುವುದಕ್ಕೆ ಹೋಗುವುದಿಲ್ಲ. ಆಮೇಲೆ ಹಣ ಎಲ್ಲಿಂದ ತರುತ್ತಾರೆ? ಹಣಕಾಸಿನ ಪರಿಸ್ಥಿತಿ ಚೆನ್ನಾಗಿತ್ತು, ಅದಕ್ಕೋಸ್ಕರ ಇವೆಲ್ಲ ಕೊಡಲಿಕ್ಕೆ ಸಾಧ್ಯವಾಯಿತು ಎಂದು ಹೇಳಿದರು. ಹಾಗಿದ್ದರೆ ಇದನ್ನು ನೀವೂ ಸಹ ಮಾಡಬಹುದಾಗಿತ್ತಲ್ಲ? ಹಣಕಾಸು ಪರಿಸ್ಥಿತಿ ಚೆನ್ನಾಗಿದ್ದಾಗ ಇದನ್ನು ನೀವು ಏಕೆ ಮಾಡಲಿಲ್ಲ? ಒಂದು ಮಾತು ಹೇಳುತ್ತೇನೆ, ಮಾನ್ಯ ಯಡಿಯೂರಪ್ಪನವರು ಹಣಕಾಸಿನ ಮಂತ್ರಿಯಾದಾಗ he

has inherited robust economy in the State. ಎಂಥ ಪರಿಸ್ಥಿತಿಯಲ್ಲಿ ಇವರು ಹಣಕಾಸಿನ ಮಂತ್ರಿಯಾದರು ಎಂದರೆ, tax growth 28% ಇತ್ತು, ಆ timeನಲ್ಲಿ ಹಣಕಾಸಿನ ಮಂತ್ರಿಯಾದರು. Fiscal Deficit 2.16 ಇತ್ತು, ಆ ಟೈಮ್‌ನಲ್ಲಿ ಆದರು. Revenue Surplus ಸುಮಾರು 3 ಸಾವಿರ ಕೋಟಿಗಿಂತ ಜಾಸ್ತಿ ಇತ್ತು, ಆ ಟೈಮ್‌ನಲ್ಲಿ ಆದರು. ಅದು ಆದಮೇಲೆ ಇವರ ಸರ್ಕಾರದಲ್ಲಿ tax growth decline ಆಗುವುದಕ್ಕೆ ಪ್ರಾರಂಭವಾಯಿತು, ಕೆಳಕ್ಕೆ ಇಳಿಯುವುದಕ್ಕೆ ಪ್ರಾರಂಭವಾಯಿತು. Fiscal deficit ಮೇಲಕ್ಕೆ ಹೋಗುವುದಕ್ಕೆ ಪ್ರಾರಂಭವಾಯಿತು, debt service ಮೇಲಕ್ಕೆ ಹೋಗುವುದಕ್ಕೆ ಪ್ರಾರಂಭವಾಯಿತು, debt burden ಜಾಸ್ತಿ ಆಗುವುದಕ್ಕೆ ಪ್ರಾರಂಭವಾಯಿತು.

ಶ್ರೀ ಜಗದೀಶ್ ಶೆಟ್ಟರ್ : ದಯವಿಟ್ಟು ಆ ಪ್ರತಿ ವರ್ಷದ statistics ನೋಡಿ ಹೇಳಿ. ಆ statistics ಇಡಿ. ಹಿಂದೆ budget discussion ಆದಾಗಲೂ ಇದನ್ನೇ ಹೇಳಿದ್ದಿರಿ. ಅವತ್ತೂ ಸಹ ನಾವು ಉತ್ತರ ಕೊಟ್ಟಿದ್ದೇವೆ. ನೀವು ಸುಮ್ಮನೆ ಹೆಚ್ಚಿಗೆ ಆಯಿತು ಅದು ಇದು ಎಂದು ಹೇಳುವುದು ಬೇಡ.

ಶ್ರೀ ಸಿದ್ದರಾಮಯ್ಯ : ಏಕೆ?

ಶ್ರೀ ಜಗದೀಶ್ ಶೆಟ್ಟರ್ : ನಾನು ಹೇಳುತ್ತಿದ್ದೇನೆಲ್ಲ, ಆ time ನಲ್ಲಿ Financial discipline maintain ಮಾಡಿ ಹೋಗಿದ್ದೇವೆಂದು ಹೇಳಿದ್ದೇನೆ. ಪದೇ ಪದೇ ಅವತ್ತೂ ಹೇಳಿದ್ದೇನೆ, ಇವತ್ತೂ ಹೇಳುತ್ತಿದ್ದೇನೆ, ಮೊನೆ ಮಾನ್ಯ ರಾಯರೆಡ್ಡಿಯವರು ಮಾತನಾಡಿದಾಗಲೂ ಹೇಳಿದ್ದೇನೆ. ದಯವಿಟ್ಟು statistics ಅನ್ನು ಸಭೆಯ ಮುಂದೆ ಇಡಿ.

ಶ್ರೀ ಸಿದ್ದರಾಮಯ್ಯ : Is it not a fact? 2010-11ರಲ್ಲಿ Fiscal deficit 3.4 ಗೆ ಹೋಗಿರಲಿಲ್ಲವೇ?

ಶ್ರೀ ಜಗದೀಶ್ ಶೆಟ್ಟರ್ : ನೀವು ಆ ಒಂದು ವರ್ಷದ್ದು ಹೇಳುತ್ತಿದ್ದೀರಿ. ನಾನು 5 ವರ್ಷದ್ದು ಬಿಜೆಪಿ ಸರ್ಕಾರ ಇದ್ದಾಗ ಇದ್ದುದನ್ನು ಹೇಳಿದೆ. ಒಂದು ವರ್ಷದ್ದು ಏನೋ ಒಂದು ಹೆಚ್ಚು ಕಡಿಮೆ ಆಗಿರುತ್ತದೆ. ಅದನ್ನು ಒಂದನ್ನೇ refer ಮಾಡಬೇಡಿ. 5 ವರ್ಷದ್ದನ್ನು ಸೇರಿಸಿ ಹೇಳಿ.

ಶ್ರೀ ಸಿದ್ದರಾಮಯ್ಯ : ಒಂದು ವರ್ಷ ಹಣಕಾಸು ಪರಿಸ್ಥಿತಿ ಕೆಟ್ಟುಹೋ-ದರೆ ಪರವಾಗಿಲ್ಲವೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಹಿಂದೆ National level ನದು ಹೇಗಿತ್ತು? ಇವತ್ತು National level ನದು ಹೇಗಿದೆ? ಇಡೀ ದೇಶದ್ದು ಈಗ ನೋಡಿ ಹೇಳಿ. ಇಡೀ ದೇಶದ್ದು ಅವತ್ತು ಏನಿತ್ತು?

ಶ್ರೀ ಹೆಚ್.ಡಿ. ರೇವಣ್ಣ : 9 ವರ್ಷದ್ದು ಯು.ಪಿ.ಎ. ಸರ್ಕಾರದ ಆರ್ಥಿಕ ಪರಿಸ್ಥಿತಿಯನ್ನೂ ಹೇಳಿಬಿಡಿ.

ಶ್ರೀ ಸಿದ್ದರಾಮಯ್ಯ : 2004–05–06ರಲ್ಲಿ ಹಣಕಾಸಿನ ಪರಿಸ್ಥಿತಿ ದೇಶದಲ್ಲಿ ಏನಿತ್ತು, ಅದೇ ಪರಿಸ್ಥಿತಿ ರಾಜ್ಯದಲ್ಲೂ ಇತ್ತು.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಮುಖ್ಯಮಂತ್ರಿಯವರೆ, ನಿಮ್ಮ ಬಾಯಿಂದ ನಾನು ಇಷ್ಟು ನಿರೀಕ್ಷೆ ಮಾಡಿದ್ದೆ. ಯಡಿಯೂರಪ್ಪನವರು ಮುಖ್ಯಮಂತ್ರಿಯಾದಾಗ ದೇಶದ ಹಣಕಾಸಿನ ಪರಿಸ್ಥಿತಿ ಚೆನ್ನಾಗಿತ್ತು, ಆ 3 ವರ್ಷ ನಾನು ಅಧಿಕಾರ ಬಿಡುವವರೆಗೂ ಸಹ ಇಡೀ ದೇಶದ ಬೇರೆ ಬೇರೆ ರಾಜ್ಯಗಳ comparative figures ಅನ್ನು ನೀವು study ಮಾಡಿ. ನನ್ನ ರಾಜ್ಯ ಪ್ರತಿಯೊಂದು ಸಂದರ್ಭದಲ್ಲೂ ಬಹುತೇಕ ದೇಶಕ್ಕೆ ಮಾದರಿಯಾದ ಮೊದಲನೇ ಸ್ಥಾನದಲ್ಲಿತ್ತು ಎನ್ನುವುದನ್ನು ನಿಮಗೆ ಅಂಕಿಅಂಶದ ಮೂಲಕ ನೀವು reply ಕೊಡುವ time ನಲ್ಲಿ ನಾನು ಚರ್ಚೆ ಮಾಡುವ ಕಾಲದಲ್ಲಿ ಹೇಳುತ್ತೇನೆ. ಆ 3–4 ವರ್ಷದ ಹಣಕಾಸಿನ ಪರಿಸ್ಥಿತಿ ನೀವು study ಮಾಡಿ, ಬೇರೆ ರಾಜ್ಯಗಳ comparative figure ತಂದು ನೋಡಿ, ನನ್ನ ರಾಜ್ಯದ ಹಣಕಾಸಿನ ಪರಿಸ್ಥಿತಿ ಅತ್ಯಂತ ಉತ್ತಮವಾಗಿತ್ತು ಎಂದು ಹೆಮ್ಮೆಯಿಂದ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಎಸ್.ಎಂ. ಕೃಷ್ಣ ರವರು ಇಲ್ಲಿ ಮುಖ್ಯಮಂತ್ರಿಯಾಗಿದ್ದಾಗ Fiscal Responsibility Act ಅನ್ನು ತೆಗೆದುಕೊಂಡು ಬಂದರು. ಅದಕ್ಕಿಂತ ಹಿಂದೆ ರಾಜ್ಯದಲ್ಲಿ, ಅನೇಕ ರಾಜ್ಯದಲ್ಲಿ ಹಣಕಾಸಿನ ಪರಿಸ್ಥಿತಿ ಚೆನ್ನಾಗಿರಲಿಲ್ಲ. Fiscal Responsibility Act ಬಂದ ಮೇಲೆ ಸುಧಾರಣೆ ಪ್ರಾರಂಭವಾಯಿತು. ಆರ್ಥಿಕ ಸುಧಾರಣೆಗಳು ಪ್ರಾರಂಭವಾದವು. ಆರ್ಥಿಕ ಸುಧಾರಣೆ ಪ್ರಾರಂಭವಾದ ಮೇಲೆ ಆ Fiscal Responsibility Act ನಲ್ಲಿ 2006 ಏಪ್ರಿಲ್ ಒಂದರೊಳಗಡೆ ಎಲ್ಲಾ

ರಾಜ್ಯಗಳೂ ಕೂಡ Fiscal Deficit ಅನ್ನು 3ರ ಒಳಗಡೆ ತರಬೇಕು, Revenue surplus ಇರಬೇಕು, Fiscal Consolidation ಆಗಬೇಕು, Fiscal discipline ಇರಬೇಕೆನ್ನುವ ಗುರಿಗಳನ್ನು ನಿಗದಿ ಮಾಡಿದರು. ನಾನು ಅವತ್ತು ಹಣಕಾಸಿನ ಮಂತ್ರಿಯಾಗಿದ್ದೆ. ಹಣಕಾಸಿನ ಮಂತ್ರಿಯಾಗಿರುವಾಗ ಇನ್ನೂ ಒಂದು ವರ್ಷ ಮುಂಚಿತವಾಗಿ Fiscal Responsibility Act 2002 ಅದರಲ್ಲಿ ಏನೇನು target ಗಳು ಇದ್ದವೋ, ಒಂದು ವರ್ಷ ಮುಂಚಿತವಾಗಿಯೇ ಆ target ಗಳೆಲ್ಲವನ್ನು reach ಆದೆವು. 2004–05ರಲ್ಲಿಯೇ 28–29% tax growth ಹೋಗಿರುವುದು. ಅದು ಆದಮೇಲೆ decline ಆಗುವುದಕ್ಕೆ ಪ್ರಾರಂಭವಾಯಿತು. ನಮ್ಮ ಕಾಲದಲ್ಲಿ ಬಜೆಟ್ ಒಂದು ಲಕ್ಷ ಕೋಟಿಗಿಂತ ಮೇಲಕ್ಕೆ ಹೋಯಿತು ಎಂದು ಮಾನ್ಯ ಯಡಿಯೂರಪ್ಪನವರು ಯಾವಾಗಲೂ ಹೇಳುತ್ತಿರುತ್ತಾರೆ. ಅದು ಪ್ರತಿ ವರ್ಷ ಹೆಚ್ಚಾಗುತ್ತಾ ಹೋಗುತ್ತಿರುತ್ತದೆ. ಪ್ರತಿ ವರ್ಷ inflation 7–8% ಇರುತ್ತದೆ. ಅದರ ಜೊತೆಗೆ tax growth ಕೂಡ ಆಗುತ್ತದೆ, tax expansion ಆಗುತ್ತದೆ, ಇದರಿಂದ ಹೆಚ್ಚಾಗುತ್ತಾ ಹೋಗುತ್ತಿರುತ್ತದೆ.

ನಿಮ್ಮ ಸರ್ಕಾರದ efforts ನಿಂದ ಆಯಿತು ಎಂದು ನೀವೇನು claim ಮಾಡುತ್ತೀರಲ್ಲಾ, ಹಾಗಾದರೆ 1947ನೇ ಇಸವಿಯಲ್ಲಿ ಬಜೆಟ್ ಎಷ್ಟಿತ್ತು? ಈಗ ಎಷ್ಟಾಗಿದೆ? ಅದು ಪ್ರತಿ ವರ್ಷ 10%, 15%, 11%, 12% ಹೀಗೆ ಹೆಚ್ಚಾಗುತ್ತಾ ಹೋಗುತ್ತದೆ. ಜಗದೀಶ್ ಶೆಟ್ಟರ್ ಬಜೆಟ್ ಮಂಡಿಸುವಾಗ ಒಂದು ಲಕ್ಷ ಕೋಟಿ ರೂಪಾಯಿಗಳಾಗಿವೆ. ಆದರೆ ಅಷ್ಟೇ ಸಾಲ ಇದೆಯೆಲ್ಲಾ, debt burden? ಇವತ್ತು 2013–14 ಕ್ಕೆ ಎಷ್ಟಾಗಿದೆ? 1,34,000–00 ಕೋಟಿ ರೂಪಾಯಿಗಳಾಗಿವೆ. ಅದು 2005–06 ರಲ್ಲಿ ಎಷ್ಟಿತ್ತು? ಬೇರೆ ರಾಜ್ಯದ್ದನ್ನು ಕಟ್ಟಿಕೊಂಡು ನಮಗೇನಾಗಬೇಕು? ನಮ್ಮ ರಾಜ್ಯದ tax ಇಲ್ಲಿ ನಮಗೆ ಮುಖ್ಯ. ಇಲ್ಲಿ tax mobilization ಮಾಡುವುದು ಮುಖ್ಯ. ಬೇರೆ ರಾಜ್ಯದಲ್ಲಿ ಮಾಡುತ್ತಾರೋ, ಬಿಡುತ್ತಾರೋ ನಮಗೇನಾಗಬೇಕು? ಅವರು tax mobilization ಮಾಡುವುದಿಲ್ಲ. Can we compare with Bihar or UP? Tax ಹೆಚ್ಚು ಮಾಡಿಲ್ಲ. VAT introduce ಮಾಡಿದ್ದು ನಾವು. ಆಗ tax ಅನ್ನು ಏನೂ ಹೆಚ್ಚು ಮಾಡಲಿಲ್ಲ. ಇಡೀ ದೇಶದಲ್ಲಿ VAT introduce ಆಯಿತು. ನಾವು

ಮೊದಲನೇ ರಾಜ್ಯ. VAT introduce ಮಾಡಿದಾಗ 4% – 12.50% tax ಹೆಚ್ಚಾಯಿತು. As a matter of fact, ಇವರು ಬಂದ ಮೇಲೆ ಈಗ ಅದು 5.50%, 14.50% ಆಗಿದೆ. ಇವರು ಪ್ರತಿ ವರ್ಷ ಸ್ವಲ್ಪ ಸ್ವಲ್ಪ ಅರ್ಧ ಪರ್ಸೆಂಟ್ ಹೆಚ್ಚು ಮಾಡಿ ಈಗ 4% ಇದ್ದುದು 5.50% ಆಗಿದೆ. 12.50% ಇದ್ದುದು 14.50% ಆಗಿದೆ. ಇವರ ಕಾಲದಲ್ಲಿ ಅದುದು, ಇವರು ಹೆಚ್ಚು ಮಾಡಿದರು.

ಶ್ರೀ ಹೆಚ್.ಡಿ.ರೇವಣ್ಣ : ನೇವು ಈಗ ಕಡಿಮೆ ಮಾಡಿ, ಸರ್.

ಶ್ರೀ ಆರ್.ವಿ.ದೇಶಪಾಂಡೆ : ರೇವಣ್ಣನವರೇ, ಇದು ಹಣಕಾಸಿನ ವಿಚಾರ ಇದರ ಬಗ್ಗೆ ಇಲೆ ಕೆಡಿಸಿಕೊಳ್ಳಬೇಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ರೇವಣ್ಣನವರೇ, ನಾವು ನೀವು ಇಬ್ಬರೇ ಇರುವಾಗ ಅವೆಲ್ಲವನ್ನು ಹೇಳುತ್ತೇನೆ. ಈ ಕಾರಣಗಳಿಗಾಗಿ ಭಾರತೀಯ ಜನತಾ ಪಕ್ಷದ ಸರ್ಕಾರದ ಕಾಲದಲ್ಲಿ fiscal discipline ಅನ್ನು ಅವರು maintain ಮಾಡಲಿಲ್ಲ ಎಂದು ಹೇಳಿದ್ದುದು ನಿಜ. ಈಗಲೂ ಕೂಡ I stand by my statement. ಅದರಲ್ಲೇನೂ ಎರಡನೇ ಮಾತಿಲ್ಲ. But, ಹಾಗೆಂದು ಹೇಳೀ Fiscal Responsinility Act ಅನ್ನು ಸಹ ತೀರಾ violate ಮಾಡಿಬಿಟ್ಟಿದ್ದೀರಿ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈಗ 13th Finance Commission ನವರು GDP ಯ ಸಾಲ 25% ಇರಬೇಕೆಂದು ಹೇಳಿದ್ದಾರೆ. ಸಾಲ ಅದರೊಳಗೆ ಇದೆ. No problem, 22 ಅಥವಾ 25% ಇದೆ. 13th Finance Commission ನವರು ಹೇಳಿರುವುದು 25% ಒಳಗೆ ಇರಬೇಕು. ಹಾಗೆಂದು ಹೇಳಿ ಸಾಲ ಸಿಗುತ್ತದೆಂದು ಸಾಲ ಮಾಡುವುದಕ್ಕಾಗುದಿಲ್ಲ. ನಮ್ಮ ನೀತಿ ಏನಪ್ಪಾ ಅಂದರೆ ಸಾಲ ಸಿಗುತ್ತದೆಂದು ಸಾಲ ಮಾಡುವುದಲ್ಲ, ಮಾಡಿದ ಸಾಲದ ಹಣವನ್ನು assets create ಮಾಡುವುದಕ್ಕೆ ಖರ್ಚು ಮಾಡಬೇಕು. ನಾನು ಸಾಲವನ್ನು ಮಾಡಬಾರದು ಎಂದು ಹೇಳುವುದಕ್ಕೆ ಹೋಗುವುದಿಲ್ಲ. Whatever we borrow, ಸಾಲ ಮಾಡಿದ ಹಣವನ್ನು ಆಸ್ತಿ ನಿರ್ಮಾಣ ಮಾಡುವುದಕ್ಕೆ ಖರ್ಚು ಮಾಡಬೇಕು. ಅದು ನೀತಿ. We should not go for the loan on the ground thar money is a vailable. Not on the basis of the

availability, on the basis of the affordability. ನಾನು ಆ ಕಡೆ ವಿರೋಧ ಪಕ್ಷದಲ್ಲಿ ಕುಳಿತಿದ್ದಾಗ ಅದನ್ನೆಲ್ಲಾ ನೀವು ಮಾಡಲಿಲ್ಲವೆಂದು ಪದಗಳನ್ನು ಬಳಸಿದ್ದೇನೇ ಹೊರತು ನೀವೆಲ್ಲಾ Fiscal Responsinility Act ನ್ನೆಲ್ಲಾ ತೀರಾ violate ಮಾಡಿಬಿಟ್ಟಿದ್ದೀರಿ ಎಂದು ಹೇಳುವುದಕ್ಕೆ ಹೋಗಿರಲಿಲ್ಲ. Tax ಅನ್ನು ಇನ್ನೂ ಜಾಸ್ತಿ mobilize ಮಾಡಿದ್ದರೆ ಇಷ್ಟು ಪ್ರಮಾಣದ ಸಾಲ ಆಗುತ್ತಿರಲಿಲ್ಲ. ಇವತ್ತಿನ fiscal responsibility, debt burden ಇದೆಯಲ್ಲಾ, ಅದು ಇಷ್ಟೊಂದು ಆಗುತ್ತಿರಲಿಲ್ಲ. ಇವತ್ತು ಈ ವರ್ಷಕ್ಕೆ 9,550-00 ಕೋಟಿ ರೂಪಾಯಿಗಳಷ್ಟು ಅಸಲು ಮತ್ತು ಬಡ್ಡಿ ಕೊಡಬೇಕು.

ಶ್ರೀ ಜಗದೀಶ್ ಶೆಟ್ಟರ್ : 2004-05 ರಲ್ಲಿ ತಾವೇ ಹಣಕಾಸಿನ ಸಚಿವರಾಗಿದ್ದಿರಿ. ಆಗ 32% ಇತ್ತು. ನಮ್ಮ ಕಾಲದಲ್ಲಿ 24%-25% ಇತ್ತು, ನಾವು ಆ 25% limit ದಾಟಲೇ ಇಲ್ಲ. ಆದರೆ 2004-05 ನಲ್ಲಿ 32%, 2005-06 ರಲ್ಲಿ 29% ಆಗ ಸಾಲ ತೆಗೆದುಕೊಂಡಿರುವುದು.

ಶ್ರೀ ಸಿದ್ದರಾಮಯ್ಯ : Those figures are, debt swapping ಮಾಡುವುದಕ್ಕೆ ಮುಂಚಿತವಾಗಿ. After debt swapping ಇವೆಲ್ಲಾ ಕಡಿಮೆಯಾಗಿದೆ.

ಶ್ರೀ ಜಗದೀಶ್ ಶೆಟ್ಟರ್ : ಅದಕ್ಕೆ ನಾನು statistics ಕೊಡಿ ಎಂದು ಹೇಳಿದ್ದು. ಸುಮ್ಮನೆ ಮಾತನಾಡುತ್ತಿಲ್ಲ.

ಶ್ರೀ ಸಿದ್ದರಾಮಯ್ಯ : ಕೇಂದ್ರ ಸರ್ಕಾರ debt swapping ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿತ್ತು. Incentives ಎಲ್ಲಾ ಕೊಟ್ಟರು. ಅದಕ್ಕಿಂತ ಮುಂಚಿತವಾಗಿ ಇದ್ದುದು ಅದು. ಅದಾದ ಮೇಲೆ ಕಡಿಮೆ ಆಗಿ ಅದು 25% ಒಳಗೆ ಬಂದಿದೆ. But, ನಾನು ಅದನ್ನು ಏಕೆ ಹೇಳುತ್ತಿದ್ದೇನೆಂದರೆ ಇವತ್ತು debt burden 9,550-00 ಕೋಟಿ ರೂಪಾಯಿಗಳು. 7,500-00 ಕೋಟಿ ರೂಪಾಯಿಗಳು ಅಸಲು ಕಟ್ಟಬೇಕು, ಉಳಿದ ಹಣವನ್ನು ಬಡ್ಡಿಯನ್ನಾಗಿ ಕಟ್ಟಬೇಕು. ಇಷ್ಟೊಂದು ಜಾಸ್ತಿ ಆಯಿತಲ್ಲಾ? Is it not a burden on the people of Karnataka? It is a heavy burden on the people of Karnataka. ಅದು ಅನಿವಾರ್ಯ ಇರಬಹುದು. ನೀವು Resource mobilize ಹೆಚ್ಚಾಗಿ ಮಾಡಿದ್ದಿರಿ ಎಂದು ಇಟ್ಟುಕೊಳ್ಳೋಣ. ನಿಮ್ಮ ಕಾಲದಲ್ಲಿ

ಒಂದು ವರ್ಷದಲ್ಲಿ growth 6%ಗೆ ಬಂದು ಬಿಟ್ಟಿದೆ. ನಾನು ಆ ಹಿನ್ನೆಲೆಯಲ್ಲಿ ಹೇಳಿದ್ದೆ ಆದ್ದರಿಂದ ಮಾನ್ಯ ಅಧ್ಯಕ್ಷರೆ, ನಾವು ಇವತ್ತೇನಾದರೂ ಸಾಲ ಮಾಡಿದರೆ ನಮ್ಮ ಸರ್ಕಾರದಲ್ಲಿ ಇವತ್ತು we are making it very very clear, ನಾವು ಮಾಡತಕ್ಕಂಥ ಸಾಲ ಸಂಪೂರ್ಣವಾಗಿ assets ನಿರ್ಮಾಣಕ್ಕೆ ಖರ್ಚು ಮಾಡುತ್ತೇವೆ. ಅದನ್ನು ಬಿಟ್ಟು ಬೇರೆ ಯಾವುದಕ್ಕೂ ಖರ್ಚು ಮಾಡಲಿಕ್ಕೆ ಹೋಗುವುದಿಲ್ಲ ಎನ್ನುವ ಮಾತುಗಳನ್ನು ಬಹಳ ಸ್ಪಷ್ಟವಾಗಿ ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತಿದ್ದೇನೆ.

ನೋಡಿ ಜಗದೀಶ್ ಶೆಟ್ಟರೆ, 2003–04ರಲ್ಲಿ debt burden 9,123 ಕೋಟಿ ರೂಪಾಯಿಗಳಿತ್ತು, 2004–05 ರಲ್ಲಿ after debt swapping, 5,492–00 ಕೋಟಿ ರೂಪಾಯಿಗಳಿಗೆ ಬಂತು. ಯಾವ ಸರ್ಕಾರವಾದರೂ ಇರಲಿ, ಅದಕ್ಕೆ ನಾನು ಹೇಳಿದ್ದು Fiscal Responsibility Act ಬರುವುದಕ್ಕೂ ಮುಂಚಿತವಾಗಿ ಇವೆಲ್ಲಾ ಇತ್ತು. Fiscal Responsibility Act ಆದ ಮೇಲೆ reforms ಆಯಿತು. ಆರ್ಥಿಕ ಸುಧಾರಣೆಗಳ ಕಡೆ ಹೆಜ್ಜೆ ಇಟ್ಟಿತು. ಕೇಂದ್ರ ಸರ್ಕಾರದ ನೆರವು, Finance Commission ಸಹಾಯಕ್ಕೆ ಬಂತು. ಇವೆಲ್ಲಾ ಮಾಡಿದ್ದರಿಂದ ಅಲ್ಲಿಂದೀಚೆಗೆ ಕಡಿಮೆ ಆಗಲಿಕ್ಕೆ ಪ್ರಾರಂಭವಾಯಿತು. Finance Commission 4% ಮೇಲಿತ್ತು. ಅದು 3% ಒಳಗೆ ಬಂತು. Revenue surplus ಇರಲಿಲ್ಲ. ಒಂದು ವರ್ಷ ನಿಮ್ಮದು 3.24 % ಆಗಿದೆ.

ಶ್ರೀ ಜಗದೀಶ್ ಶೆಟ್ಟರ್ : ನೀವು ಐದು ವರ್ಷಗಳ ಮಾಹಿತಿ ನೋಡಿ. ನಾವು 3% ದಾಟಿಲ್ಲ.

ಶ್ರೀ ಸಿದ್ದರಾಮಯ್ಯ : ಆ ಒಂದು ವರ್ಷ 2010–11 ಬಿಟ್ಟುಬಿಡೋಣವೇ? ಬೇಡ ಬಿಡಿ.

ಶ್ರೀ ಜಗದೀಶ್ ಶೆಟ್ಟರ್ : ನಿಮಗೆ ಹೇಳಲಿಕ್ಕೆ ಅಧಿಕಾರ ಇದೆ,ಹೇಳಿ ಯಾರು ಬೇಡವೆನ್ನುತ್ತಾರೆ?

ಶ್ರೀ ಸಿದ್ದರಾಮಯ್ಯ : ಓಕೆ, ನಾನು ಅಲ್ಲಿ ಹೇಳಿದ ಎಂದು ನೀವು ಹೇಳಿದ್ದಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ. ಇಲ್ಲದಿದ್ದರೆ ನಾನು ಅದನ್ನು ಹೇಳುವುದಕ್ಕೆ ಹೋಗುತ್ತಿರಲಿಲ್ಲ. ನಾನು ಅಲ್ಲಿ ಕುಳಿತಿದ್ದಾಗ ಬೇರೆ ರೀತಿ

ಹೇಳಿದ್ದಿರಿ ಎಂದಿರಿ, ಅಂದರೆ ನಾನು ಅಲ್ಲಿ ಕುಳಿತಿದ್ದಾಗ ಏನು ಹೇಳಿದ್ದೆ? Fiscal discipline ಅನ್ನು follow ಮಾಡಿಲ್ಲ. Resource mobilize ಮಾಲಿಲ್ಲ. ಅದಕ್ಕೋಸ್ಕರವಾಗಿ debt burden ಜಾಸ್ತಿಯಾಯಿತು ಎಂದು ಹೇಳಿದ್ದು. Now, I stand by it. ಅದನ್ನು ಬಿಟ್ಟರೆ ಬೇರೇನಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಅಂದಿನ ಪರಿಸ್ಥಿತಿಯಲ್ಲಿ, ಹಣಕಾಸಿನ ಸ್ಥಿತಿಗತಿಗಳಲ್ಲಿ ಯಾವ ರೀತಿ ಕೆಲಸ ಮಾಡಬೇಕೋ ಅದನ್ನು ನಾನು ಮಾಡಿದ್ದೇನೆ. ಯಾವಾಗ ಈ figures ದೇಶದ ಜನತೆಗೆ ಸ್ಪಷ್ಟವಾಗುತ್ತದೆ ಎಂದರೆ neigh bouring ಮೂರು ನಾಲ್ಕು ರಾಜ್ಯಗಳಿಗೆ ನೀವು compare ಮಾಡಿದರೆ, ಆ ರೀತಿಯ ಒಂದು white paper ಅನ್ನು ಹೊರಗೆ ಬಿಟ್ಟಾಗ ಪ್ರಾಮಾಣಿಕವಾಗಿ ನನ್ನ ಕಾಲದಲ್ಲಿ ಹಣಕಾಸಿನ ಸ್ಥಿತಿ ಯಾವ ರೀತಿ ಸುಧಾರಣೆ ಆಗಿತ್ತು, ಅಭಿವೃದ್ಧಿ ಕಾರ್ಯಗಳಿಗೆ ಹಣ ವಿನಿಯೋಗವಾಗಿತ್ತು ಎಂದು ಗೊತ್ತಾಗುತ್ತದೆ. ಎರಡನೆಯದಾಗಿ, ಯಡಿಯೂರಪ್ಪ, ನೀವು ಸಾಲ ತರುವುದು ಆಸ್ತಿ ನಿರ್ಮಾಣಕ್ಕೆ ವಿನಿಯೋಗವಾಗಬೇಕೆ. ನನ್ನ ಕಾಲದಲ್ಲಿ ಸಾಲ ತಂದದ್ದು ಆಸ್ತಿ ನಿರ್ಮಾಣಕ್ಕೆ ಆಗಲಿಲ್ಲ. ಇಂಥದ್ದಕ್ಕೆ waste ಮಾಡಿದಿರಿ ಎಂದು ಒಂದು white paper ಹೊರಡಿಸಿ ಸ್ವಾಮಿ, ಈ ದೇಶದ ಜನ ತಿಳಿದುಕೊಳ್ಳಲಿ. ರಾಜ್ಯದ ಜನತೆಗೆ ಗೊತ್ತಾಗಲಿ.

ಶ್ರೀ ಸಿದ್ದರಾಮಯ್ಯ : ಬಜೆಟ್ ಮಂಡಿಸುವಾಗ ಎಲ್ಲಾ detail ಗಳನ್ನು black and white ನಲ್ಲಿ ಇಡುತ್ತೇವೆ.

ಶ್ರೀ ವೈ.ಎಸ್.ವಿ.ದತ್ತ : ನಾನು ಶ್ರೀ ಸಿದ್ದರಾಮಯ್ಯನವರಲ್ಲಿ ಒಂದು ಮಾತನ್ನು ಕೇಳುವುದಕ್ಕೆ ಬಯಸುತ್ತೇನೆ. ಬಿ.ಜೆ.ಪಿ. ಸರ್ಕಾರ ತುಂಬಿದ ಬೊಕ್ಕಸವನ್ನು ಕೊಟ್ಟಿ ದ್ದಾರೋ ಅಥವಾ ಖಾಲಿ ಬೊಕ್ಕಸವನ್ನು ಕೊಟ್ಟಿದ್ದಾರೋ?

ಶ್ರೀ ಸಿದ್ದರಾಮಯ್ಯ : ಈ ವಿಷಯವನ್ನು ಇಷ್ಟಕ್ಕೇ ಬಿಡುತ್ತೇನೆ. ಬಜೆಟ್‌ನಲ್ಲಿ ಬೇಕಾದರೆ ಎಲ್ಲಾ ಅಂಕಿ ಅಂಶಗಳ ಸಮೇತವಾಗಿ ಚರ್ಚೆ ಮಾಡೋಣ. ಬೇರೆ ರಾಜ್ಯಗಳದ್ದು, ಕರ್ನಾಟಕ ರಾಜ್ಯದ್ದು, ನಮ್ಮ ಕಾಲದ್ದು, ನಿಮ್ಮ ಕಾಲದ್ದು ಎಲ್ಲವನ್ನೂ ಚರ್ಚೆ ಮಾಡೋಣ. ಅಭಿವೃದ್ಧಿಗೆ ಖರ್ಚು ಮಾಡಿರುವುದನ್ನು ಚರ್ಚೆ ಮಾಡೋಣ. Asset creation ಗೆ ಖರ್ಚು ಮಾಡಿರುವುದರ ಬಗ್ಗೆ ಕೂಡ ಚರ್ಚೆ ಮಾಡೋಣ. ಬೇರೆ ಎಲ್ಲವನ್ನೂ ಚರ್ಚೆ

ಮಾಡೋಣ. ನಾವು ಇವತ್ತು ಒಂದು ರೂಪಾಯಿಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದು, ಅದನ್ನು ಚಾಚೂ ತಪ್ಪದೆ 1st Julyನಿಂದ ಜಾರಿಗೆ ತಂದೇ ತರುತ್ತೇವೆಂಬ ಮಾತನ್ನು ಹೇಳಿದ್ದೇವೆ. ಯಡಿಯೂರಪ್ಪನವರು ಕೂಡ ಹಾಲಿಗೆ ಎರಡು ರೂಪಾಯಿಗಳ ಸಬ್ಸಿಡಿಯನ್ನು ಕೊಟ್ಟಿದ್ದಿರಿ. ನಾವು ಅದನ್ನು ನಾಲ್ಕು ರೂಪಾಯಿಗಳಾಗಿ ಮಾಡಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಬಹಳ ಸಂತೋಷ. ಇದನ್ನು ನಾವು ಸ್ವಾಗತ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ : ಬಹಳ ದಿನಗಳಿಂದ ನಿಮ್ಮ ಮೇಲೆ ಒತ್ತಡವಿತ್ತು. ಪರಿಶಿಷ್ಟ ಜಾತಿಯವರು, ಪರಿಶಿಷ್ಟ ವರ್ಗದವರು, ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರು, ಅಂಬೇಡ್ಕರ್ ಅಭಿವೃದ್ಧಿ ನಿಗಮ, ದೇವರಾಜು ಅರಸು ಅಭಿವೃದ್ಧಿ ನಿಗಮ, ಎಸ್.ಟಿ. ಅಭಿವೃದ್ಧಿ ನಿಗಮ ಮತ್ತು Minorities ಅಭಿವೃದ್ಧಿ ನಿಗಮಗಳಲ್ಲಿ ಅನೇಕ ಆರ್ಥಿಕ ಚಟುವಟಿಕೆಗಳಗಾಗಿ ಅವರಿಗೆ ಸಾಲವನ್ನು ಕೊಟ್ಟಿದ್ದೇವೆ. arrears, ಅಸಲು ಮತ್ತು ಬಡ್ಡಿ ಎಲ್ಲಾ ಉಳಿದಿದ್ದು, ಬಹಳ ವರ್ಷಗಳಿಂದ ಒತ್ತಾಯವಿತ್ತು. ನಾನು ಅದನ್ನು ಮನ್ನಾ ಮಾಡುತ್ತೇವೆಂದು ನಮ್ಮ manifesto ನಲ್ಲಿ ಹೇಳಿದ್ದೇನೆ. As one-time measure ಸಂಪೂರ್ಣವಾಗಿ ಅದನ್ನು ಮನ್ನಾ ಮಾಡಿದ್ದೇವೆ. ಅದೆಲ್ಲಾ ಬಡವರ ಕಾರ್ಯಕ್ರಮ. ಪರಿಶಿಷ್ಟ ಜಾತಿಯವರು, ಪರಿಶಿಷ್ಟ ವರ್ಗದವರು, ಹಿಂದುಳಿದ ಜಾತಿಯವರು, ಅಲ್ಪಸಂಖ್ಯಾತ ಜನಾಂಗದವರು ಮತ್ತು ಬೇರೆ ಬೇರೆ ಎಲ್ಲಾ ಜಾತಿ ಬಡವರೂ ಕೂಡ ಅದರಲ್ಲಿದ್ದಾರೆ. ಹಾಗಾಗಿ ಆ ಕಾರ್ಯಕ್ರಮವನ್ನು ಮಾಡಿದ್ದೇವೆ. ಭಾಗ್ಯಜ್ಯೋತಿ ಲೈಟ್ ಬಗ್ಗೆ 2–3 ಬಾರಿ assembly ಯಲ್ಲಿ raise ಮಾಡಿದ್ದೇವೆ. ಜಗದೀಶ್ ಶೆಟ್ಟರ್ ಮತ್ತು ಸದಾನಂದಗೌಡರು ಮಾನ್ಯ ಮುಖ್ಯಮಂತ್ರಿಗಳಾಗಿದ್ದಾಗ ಭಾಗ್ಯಜ್ಯೋತಿ ವಿದ್ಯುತ್‌ನ್ನು disconnect ಮಾಡಬೇಡಿ ಎಂದು ನಾನು ಹೇಳಿದ್ದೇನೆ. ಆದರೂ ಯಡಿಯೂರಪ್ಪನವರೆ, ಎಲ್ಲಾ ಕಡೆ disconnect ಮಾಡಿದರು. ನಾವು ಅಧಿಕಾರಕ್ಕೆ ಬಂದ ನಂತರ ಕೊಡಬೇಕಾಗಿರುವ ಬಾಕಿಯನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದು, ಅದನ್ನು ಮನ್ನಾ ಮಾಡಿದ್ದೇವೆ. ವಿದ್ಯುಚ್ಛಕ್ತಿ connection ಕೂಡ ವಾಪಸ್ಸು ಕೊಟ್ಟಿದ್ದೇವೆ. ಮನೆಗಳಿಗೆ ಸಬ್ಸಿಡಿ 75,000 ರೂಪಾಯಿಗಳಿತ್ತು, ಅದನ್ನು 1,20,000

ರೂಪಾಯಿಗಳಿಗೆ ಹೆಚ್ಚಿಸಿದ್ದೇವೆ. ಈಗ ಒಂದು ಮನೆಗೆ 45,000 ರೂಪಾಯಿಗಳಷ್ಟು ಹೆಚ್ಚಿಗೆ ಮಾಡಿದ್ದೇವೆ. ಇನ್ನೂ ಹೆಚ್ಚಿಗೆ ಕೊಡಬೇಕು ನಿಜ. ಆದರೆ ಒಳ್ಳೆಯ ಮನೆಯನ್ನು ಕಟ್ಟಿಕೊಳ್ಳಲಿ ಎಂಬ ಉದ್ದೇಶದಿಂದ 75,000 ರೂಪಾಯಿಗಳಿಂದ 1,20,000 ರೂಪಾಯಿಗಳಿಗೆ ಹೆಚ್ಚು ಮಾಡಿದ್ದು, ಅವರ contribution 30,000 ರೂಪಾಯಿಗಳನ್ನು ಹಾಕಿಕೊಂಡು ಒಟ್ಟು 1,50,000 ರೂಪಾಯಿಗಳಿಗೆ ಮನೆಯನ್ನು ಕಟ್ಟಿಕೊಳ್ಳಬೇಕಾಗುತ್ತದೆ. ನಗರ ಪ್ರದೇಶಗಳಿಗೆ ಎರಡು ಲಕ್ಷ ರೂಪಾಯಿಗಳಿದೆ. ಸೂರಿಲ್ಲದಿರುವ ಜನರಿಗೆ ಒಂದು ಮನೆಗೆ 45,000 ರೂಪಾಯಿಗಳ ಸಬ್ಸಿಡಿಯನ್ನು ಕೊಡುವ ವ್ಯವಸ್ಥೆಯನ್ನು ಮಾಡಿದ್ದೇವೆ. So, these are the programmes. ನಾನು ಪ್ರಮಾಣ ವಚನವನ್ನು ಸ್ವೀಕರಿಸಿದ ದಿನವೇ ಮಾಡಿದ ಕಾರಣವೇನೆಂದರೆ ನಮ್ಮ manifesto ಗೆ ಚಾಲನೆ ಕೊಡಬೇಕೆಂಬ ಕಾರಣಕ್ಕೋಸ್ಕರ ಈ ಎಲ್ಲಾ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದು ಈಗ ಆದೇಶಗಳು ಕೂಡ ಆಗಿವೆ ಅಕ್ಕಿ ಕೊಡುವ ಕಾರ್ಯಕ್ರಮವೊಂದನ್ನು ಬಿಟ್ಟು, ಇದೂ ಕೂಡ ಜುಲೈ ಒಂದರಿಂದ ಪ್ರಾರಂಭವಾಗುತ್ತದೆ. ಉಳಿದ ಎಲ್ಲಾ ಕಾರ್ಯಕ್ರಮಗಳು ಜಾರಿಗೆ ಬಂದಿವೆ. ಅಕ್ಕಿ ಕೊಡುವುದು ಸೇರಿಸಿದಂತೆ ಇವೆಲ್ಲಾ ಸುಮಾರು 5–6 ಸಾವಿರ ಕೋಟಿ ರೂಪಾಯಿಗಳ ಕಾರ್ಯಕ್ರಮವಾಗಿದ್ದು, ಎಲ್ಲಾ ವರ್ಗದ ಜನರಿಗೆ ಸಹಾಯವಾಗುತ್ತಿದೆ. ಇದನ್ನು ನಮ್ಮ ಸರ್ಕಾರ ಮಾಡಿದೆ, ಈ ಮೂಲಕ ನಮ್ಮ ಸರ್ಕಾರ ನ್ಯಾಯದಿಂದ, ಅವಕಾಶದಿಂದ ವಂಚಿತರಾಗಿರುವ ಬಡವರಿಗೆ, ದುರ್ಬಲ ವರ್ಗದವರಿಗೆ ನಮ್ಮ ಬದ್ಧತೆಯನ್ನು ತೋರಿಸುವಂತಹ ಕೆಲಸಗಳನ್ನು ನಾವು ಮಾಡಿದ್ದೇವೆಯೇ ಹೊರತು ಇದರಲ್ಲಿ ಯಾವುದೇ ತರಾತುರಿಯಿಲ್ಲ ಅಥವಾ ಇದು ಯಾವುದೇ ಮುಂದಾಲೋಚನೆಯಿಲ್ಲದೆ ಮಾಡಿರುವ ಕಾರ್ಯಕ್ರಮವಲ್ಲ. ಹಣಕಾಸಿನ ಲೆಕ್ಕಾಚಾರವನ್ನು ಮಾಡಿಯೇ ಇವೆಲ್ಲವನ್ನು ಮಾಡಿದ್ದೇವೆ. ಇದಕ್ಕೆ ನಾವು ನೂರಕ್ಕೆ ನೂರರಷ್ಟು ಬದ್ಧರಾಗಿದ್ದೇವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಕುಮಾರಸ್ವಾಮಿಯವರು ನಮ್ಮ Leader of the opposition, ಅವರು ಪ್ರಾಮುಖ್ಯವಾದಂತಹ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ದಿನಾಂಕ: 5–2–2007ರ ಅಂತಿಮ ವರದಿಯಲ್ಲಿ ಕಾವೇರಿ ಟ್ರಿಬ್ಯೂನಲ್ verdict ಏನು ಬಂದಿದೆ ಆ ಕಾಲದಲ್ಲಿ ಕುಮಾರಸ್ವಾಮಿ ಯವರು ಮಾನ್ಯ

ಮುಖ್ಯಮಂತ್ರಿಗಳಾಗಿದ್ದರೆಂದು ಅನಿಸುತ್ತದೆ. ಯಡಿಯೂರಪ್ಪ ನವರು ಮಾನ್ಯ ಹಣಕಾಸಿನ ಮಂತ್ರಿಗಳಾಗಿದ್ದರೆ. ಆಗ verdict ಬಂದಿದ್ದು ಆ ಸಂದರ್ಭದಲ್ಲಿ Assembly ಯಲ್ಲಿ ಇದರ ಬಗ್ಗೆ ದೊಡ್ಡ ಚರ್ಚೆಯೇ ಆಯಿತು. ಅದರಿಂದ ಕರ್ನಾಟಕ ರಾಜ್ಯಕ್ಕೆ ದೊಡ್ಡ ಅನ್ಯಾಯವಾಗುತ್ತದೆ. ಕಾವೇರಿ ಬೇಸಿನ್‌ನ ರೈತರಿಗೆ ಈ ಒಂದು ತೀರ್ಪು ಮರಣ ಶಾಸನವಾಗುತ್ತದೆಂದು ಚರ್ಚೆ ಮಾಡಿದರು. ಆದರೆ ಅದನ್ನು ಈಗ ಕುಮಾರಸ್ವಾಮಿಯವರು ಬಹಳ ದೀರ್ಘವಾಗಿ ಚರ್ಚೆ ಮಾಡಿದ್ದಾರೆ. ನಾನು ಅದನ್ನು ದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ matter is pending before the Supreme Court. ಟ್ರಿಬ್ಯೂನಲ್ ಮುಂದೆ ಕೂಡ Review Petition ಇದೆ. ನಮ್ಮ Original Suit ಕೂಡ Supreme Court ಮುಂದಿದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ನಾವು ಹೇಳಿರುವಂತಹದ್ದು long pending extensions, renovation and modernization of the project under the Cauvery basin will be taken up for the approval of the Government of India ಎಂದು ಹೇಳಿದ್ದೇವೆ. ಏಕೆ ಇದನ್ನು ಹೇಳಿದ್ದೇವೆಂದರೆ; Supreme Court ಆದೇಶದ ಹಿನ್ನೆಲೆಯಲ್ಲಿ ಈ ಪದವನ್ನು ನಾವು ಬಳಸಿದ್ದೇವೆ ಮತ್ತು ಈ ವಿಷಯವನ್ನು ಪ್ರಸ್ತಾಪಿಸಿದ್ದೇವೆ. ಏಕೆಂದರೆ ಕುಮಾರಸ್ವಾಮಿಯವರು ಬಹುಶಃ ಎರಡು ಗಂಟೆಗಳ ಕಾಲ ಇದರ ಮೇಲೆಯೇ, ಕುಡಿಯುವ ನೀರಿಗೆ ಮತ್ತು ನಮ್ಮ ರೈತರಿಗೆ ಯಾವ ರೀತಿ ಅನ್ಯಾಯ ವಾಗುತ್ತದೆಯೆಂಬುದರ ಮೇಲೆಯೇ ಭಾಷಣ ಮಾಡಿದರು. ನೀವು ಹೇಳಿರುವುದೆಲ್ಲಾ ಸತ್ಯ. ಯಾರ್ಯಾರ ಕಾಲದಲ್ಲಿ ಏನೇನು ಆಯಿತೆಂದು ಹೇಳಿದ್ದಾರೆ ಆದರೆ Supreme Court ಏನು ಹೇಳಿದ್ದಾರೆಂದು ಕುಮಾರಸ್ವಾಮಿಯವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. The Hon'ble Supreme Court in its direction on 04.02.2013 while directing the publication of the Cauvery A ward i.e. Order and decision dated: 05.02.2007 passed by the Tribunal has specifically clarified that it is needless to say that publication of the final decision i.e. Cauvery Water Dispute Tribunal in

Official Gazette shall be without prejudice to the pending proceedings. ಈ ಹಿನ್ನೆಲೆಯಲ್ಲಿ ಮಾಡಿರುವುದು. ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. Notification ಮಾಡುವುದಕ್ಕೆ ಮುಂಚಿತವಾಗಿ ಆದೇಶವನ್ನು ಕೊಡುವ ಸಂದರ್ಭದಲ್ಲಿ Supreme Court ನವರು ಇದನ್ನು ಹೇಳಿದ್ದಾರೆ. ನಮ್ಮ ವಕೀಲರುಗಳು ಅಲ್ಲಿ ಇದನ್ನು ಪ್ರಸ್ತಾಪ ಮಾಡಿದಾಗ pending case ಮತ್ತು ಟ್ರಿಬ್ಯೂನಲ್ ಮುಂದೆ ಇರುವಂತದ್ದು ಏನು ಎಂದು ಹೇಳಿದಾಗ ಇದನ್ನು ಹೇಳಿದ್ದಾರೆ. ಇದನ್ನು ನಾವು ಸಂಪೂರ್ಣವಾಗಿ ಒಪ್ಪಿಕೊಂಡಿದ್ದೇವೆಂದು ಅರ್ಥ ಅಲ್ಲ, subject to without prejudice to the pending proceedings. ಇಂದು Supreme Court ನವರೇ ಹೇಳಿರುವುದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ನೀವು ಅಲ್ಲಿ in conformity ಎಂಬ ಪದವನ್ನು ಬಳಸಿದ್ದೀರಲ್ಲಾ?

ಶ್ರೀ ಸಿದ್ದರಾಮಯ್ಯ, ಮಾನ್ಯ ಮುಖ್ಯಮಂತ್ರಿಗಳು :in conformity ಅಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಕಾವೇರಿ ಐತೀರ್ಪಿನ ಬಗ್ಗೆ ನೀವು ಹೇಳಿರುವುದಿಲ್ಲ.

ಶ್ರೀ ಸಿದ್ದರಾಮಯ್ಯ: ಈಗ ಅದನ್ನು ಹೇಳುತ್ತೇನೆ.

ಶ್ರೀ ಹೆಚ್‌ಡಿ. ಕುಮಾರಸ್ವಾಮಿ : ಕಾವೇರಿ ಐತೀರ್ಪಿನ ಅನುಸಾರವಾಗಿ ಎಂದು ಹೇಲಿದ್ದೀರಿ. ನಮಗೇನೂ ಇಲ್ಲ, ನಾವು ಅದಕ್ಕಂತೂ ಭಾಗಿಯಾಗುವುದಿಲ್ಲ. ನೀವು ಅದನ್ನು ಇಟ್ಟುಕೊಳ್ಳುವುದಿದ್ದರೆ ಇಟ್ಟುಕೊಳ್ಳಿ.

ಶ್ರೀ ವೈ.ಎಸ್.ವಿ. ದತ್ತ : ಮಾನ್ಯ ಅಧ್ಯಕ್ಷರೆ, ಇಲ್ಲಿ ನಾವು ಅದನ್ನೇ ಹೇಳುತ್ತಿರುವುದು. Without prejudice ಎಂದು ಸರ್ವೋಚ್ಚ ನ್ಯಾಯಾಲಯವು ಹೇಳಿರುವ ಆ ಒಂದು ವಾಕ್ಯ ಸೇರಿಸಿದ್ದರೆ ಸರಿಯಿರುತ್ತಿತ್ತು ಎನ್ನುವುದನ್ನೇ ಹೇಳುತ್ತಿರುವುದು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ರೇವಣ್ಣ, ಇಂಗ್ಲೀಷ್‌ನಲ್ಲಿ ಓದಲೇ, ಕನ್ನಡದಲ್ಲಿ ಓದಲೇ?

ಶ್ರೀ ಹೆಚ್.ಡಿ. ರೇವಣ್ಣ : ಎರಡರಲ್ಲೂ ಓದಿ ಸರ್.

ಶ್ರೀ ಸಿದ್ದರಾಮಯ್ಯ : ಎರಡೂ ಓದಲಾ? ಕಾವೇರಿ ಐತೀರ್ಪಿಗೆ ಅನುಸಾರವಾಗಿ ಕಾವೇರಿ ಜಲಾನಯನದ ಬಾಕಿ ಇರುವ ವಿಸ್ತರಣಾ, ನವೀಕರಣ ಮತ್ತು ಆಧುನೀಕರಣ ಯೋಜನೆಗಳಿಗೆ ಭಾರತ ಸರ್ಕಾರದ ಅನುಮೋದನೆಯನ್ನು ಕೋರಲಾಗುವುದು. ಅಂದರೆ ಈಗಾಗಲೇ ಸುಪ್ರೀಂ ಕೋರ್ಟಿನವರು ಹೇಳಿರುವುದರಿಂದ without prejudice to the pending proceedings ಎಂದು ಹೇಳಿರುವುದರಿಂದ we are admitting it is not final. ಅದಕ್ಕಾಗಿಯೇ ನಾರಿಮನ್ ಅವರಿಂದಲೂ ಕೂಡ opinion ನ್ನು ತೆಗೆದುಕೊಂಡಿದ್ದೇವೆ. ಅವರು ಹೇಳುವುದೇನೆಂದರೆ The Notification Dated: 19.02.2013 publishing the Canvery Award has extracted the above passage of the Order of the Supreme Court dated: 04.02.2013. Therefore, there is no scope to understand that the Cauvery Award i.e the Order and Decision published on 19.02.2013 is final. That is very very clear. ಈ opinion ನ್ನು ನಾರಿಮನ್ ಅವರಿಂದಲೂ ತೆಗೆದುಕೊಂಡು, ಅದರಿಂದ ನಮಗೆ ಏನೂ ತೊಂದರೆಯಾಗುವುದಿಲ್ಲ ಬಾಧಕವಾಗುವುದಿಲ್ಲ. ಎಂದ ಮೇಲೆ . . . .

ಶ್ರೀ ಹೆಚ್.ಸಿ.ಬಾಲಕೃಷ್ಣ : ಮೊದಲೇ opinion ನ್ನು ತೆಗೆದುಕೊಂಡಿದ್ದೀರಾ? ಈಗ ತೆಗೆದುಕೊಂಡಿರುವುದೇ?

ಶ್ರೀ ಸಿದ್ದರಾಮಯ್ಯ: ಮೊದಲೇ ತೆಗೆದುಕೊಂಡಿದ್ದು. ಕ್ಯಾಬಿನೆಟ್ ಮುಂದೆ ಬರುವಾಗಲೇ ತೆಗೆದುಕೊಂಡಿದ್ದು ಏಕೆ ಅನುಮಾನವೇ?

ಶ್ರೀ ಹೆಚ್.ಸಿ.ಬಾಲಕೃಷ್ಣ : ನಾವು ಹೇಳಿದ ಮೇಲೆ ಏನಾದರೂ ತೆಗೆದುಕೊಂಡಿದ್ದೀರಾ ಎಂದು ಕೇಳಿದೆವು.

ಶ್ರೀ ಸಿದ್ದರಾಮಯ್ಯ : ಆದ್ದರಿಂದ ಕರ್ನಾಟಕದ ಕಾವೇರಿ ಬೇಸಿನ್‌ನಲ್ಲಿರುವ ರೈತರ ಹಿತವನ್ನು ಕಾಪಾಡುವುದಕ್ಕೆ, ಏಕೆಂದರೆ ನಮಗೆ ಕಾವೇರಿ ಮತ್ತು ಕೃಷ್ಣಾ ಎರಡೂ ಜೀವನದಿಗಳು, ಇಲ್ಲಿರುವಂತಹ ರೈತರ ಹಿತವನ್ನು ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿ. ಆದಕಾರಣ ಕಾವೇರಿ ನೆಲ-ಜಲದ ಬಗ್ಗೆ ಇಲ್ಲಿಯವರೆಗೆ ರಾಜಕಾರಣ ಮಾಡಿಕೊಂಡು ಬಂದಿಲ್ಲ.

ರಾಜಕೀಯ ಮಾಡಲೂ ಬಾರದು ಎನ್ನುವ ಕಾರಣಕ್ಕಾಗಿ. ನಮ್ಮೆಲ್ಲರ ಹಿತ ಏನೆಂದರೆ . .

ಶ್ರೀ ಹೆಚ್.ಸಿ.ಬಾಲಕೃಷ್ಣ : ಕೇಂದ್ರ ಸರ್ಕಾರದವರು?

ಶ್ರೀ ಸಿದ್ದರಾಮಯ್ಯ : ಕೇಂದ್ರ ಸರ್ಕಾರದವರು ಏನು ಮಾಡಿದರು?

ಶ್ರೀ ಹೆಚ್.ಸಿ.ಬಾಲಕೃಷ್ಣ : ರಾಜಕೀಯ ಮಾಡಿಲ್ಲವೇ?

ಶ್ರೀ ಸಿದ್ದರಾಮಯ್ಯ : ಎಲ್ಲಿ ಮಾಡಿದ್ದಾರೆ? ಕೇಂದ್ರ ಸರ್ಕಾರದವರು ಸುಪ್ರೀಂ ಕೋರ್ಟ್‌ನವರು ಹೇಳಿದ ಮೇಲೆ ನೋಟಿಫಿಕೇಷನ್ ಮಾಡಿದ್ದು. ಇದು 5.2.2007 ರಲ್ಲಿ ಆಗಿರುವುದು. Direction ಕೊಟ್ಟಿದ್ದು ಯಾವಾಗ? That is 4.2.2013, ಹೆಚ್ಚು ಕಡಿಮೆ ಏಳು ವರ್ಷಗಳು.

ಶ್ರೀ ಹೆಚ್.ಡಿ. ರೇವಣ್ಣ : ಸುಪ್ರೀಂ ಕೋರ್ಟಿನಲ್ಲಿ ಎರಡು Writ Petitions pending ಇವೆ ಅಲ್ಲವೇ?

ಶ್ರೀ ಸಿದ್ದರಾಮಯ್ಯ : ಅದನ್ನೆ ಹೇಳುತ್ತಿರುವುದು, ಸುಪ್ರೀಂ ಕೋರ್ಟಿನವರು ಕೇಂದ್ರಸರ್ಕಾರಕ್ಕೆ direction ಕೊಟ್ಟಿರುವುದು 4.2.2013 ರಲ್ಲಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಸುಪ್ರೀಂ ಕೋರ್ಟಿನದು ಆಯಿತು. ಇವತ್ತು ನಮ್ಮ ರಾಜ್ಯದ ಅಧಿಕಾರಿಗಳು ಹೋಗಿದ್ದಾರೆ ಅಲ್ಲವೇ?

ಶ್ರೀ ಸಿದ್ದರಾಮಯ್ಯ : ಹೌದು, ಹೋಗಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಇತ್ತೀಚೆಗೆ ಗೈಡ್‌ಲೈನ್ಸ್‌ನ್ನು ರಚನೆ ಮಾಡುವುದಕ್ಕೆ ಹೋಗಿದ್ದೀರಲ್ಲಾ, ಅದನ್ನು ಸುಪ್ರೀಂ ಕೋರ್ಟ್ ಮಾಡಬೇಕೆಂದು ಹೇಳಿರಲಿಲ್ಲ. Central Government Water Resources Secretary ಮತ್ತು ನಾಲ್ಕು ರಾಜ್ಯದ ಮುಖ್ಯ ಕಾರ್ಯದರ್ಶಿಗಳನ್ನೊಳಗೊಂಡ Supervisory committee ಮಾಡಿ ಎಂದು ಹೇಳಿದ್ದರು. ಮೇ 31ನೇ ತಾರೀಖಿನಂದು ಸಭೆ ಕರೆದು ನಮ್ಮ ಮುಖ್ಯಕಾರ್ಯದರ್ಶಿಗಳು ಅಲ್ಲಿಗೆ ಹೋಗಿ ಮಾತನಾಡಿ ಮಧ್ಯಾಹ್ನ ಬರುವಷ್ಟರಲ್ಲಿ Supervisory committee ಗೈಡ್‌ಲೈನ್ಸ್ ಎಲ್ಲವನ್ನೂ ಮಾಧ್ಯಮಗಳಿಗೆ ಬಿಡುಗಡೆ ಮಾಡಿದ್ದರು. ಸೂಪರ್‌ವೈಸರಿ ಕಮಿಟಿಯಲ್ಲಿ ಗೈಡ್‌ಲೈನ್ಸ್ ಮಾಡಿಯೆಂದು ಸುಪ್ರೀಂ ಕೋರ್ಟ್ ಹೇಳಿರಲಿಲ್ಲ, ಅದರಿಂದ ನಾವು ಒಂದೊಂದು ಹೆಜ್ಜೆಯನ್ನು ಇಡಬೇಕಾದರೂ ಪ್ರತಿಯೊಂದನ್ನು ಲೆಕ್ಕಾಚಾರ ಮಾಡಿ ಇಡಿ ಎಂದು ನಿಮಗೆ ಎಚ್ಚರಿಕೆ

ಕೊಟ್ಟಿದ್ದೇವೆ, ಅಷ್ಟೆ ಇದರಲ್ಲಿ ರಾಜಕೀಯದ ಪ್ರಶ್ನೆ ಇಲ್ಲ. ನೀವು ರಾಜ್ಯಪಾಲರ ಮುಖಾಂತರ ಹೇಳಿಸಿರುವ ಭಾಷಣದಲ್ಲಿ ನಮಗೇನು ಅಂದರೆ ಕಾವೇರಿ ಜಲಾನಯದ ಪ್ರದೇಶದ ಜನತೆಗೆ ಅನಾನುಕೂಲವಾಗುವುದಿಲ್ಲವೆಂಬುದನ್ನು ನೀವು ನಾರಿಮನ್ ಅವರಿಂದ ತಿಳಿದುಕೊಂಡಿದ್ದೇವೆಂದು ಹೇಳಿದ್ದೀರಿ. ರಾಜ್ಯಪಾಲರ ಭಾಷಣ ನಂತರ ಇನ್ನೊಬ್ಬರು ದೆಹಲಿಯಲ್ಲಿರುವ ವಕೀಲರ ಜೊತೆ ಚರ್ಚೆ ಮಾಡಿದಾಗ ಈ ಪದವನ್ನು ಬಳಸಿದ್ದರೆ disastrous ಎನ್ನುವ ಮಾತನ್ನು ನಮಗೆ ಹೇಳಿದರು. ನನಗೆ ಈ ಬಗ್ಗೆ ಗೊತ್ತಿಲ್ಲ. Actually ಎಚ್ಚರಿಕೆಯಿಂದ ಈ ವಿಷಯದಲ್ಲಿ ತೀರ್ಮಾನ ಮಾಡಿಕೊಳ್ಳಿ ಎಂದು ಹೇಳಿದ್ದೇವೆ. ನಮ್ಮ ಗಮನಕ್ಕೆ ಬಂದಿರುವುದನ್ನು ಹೇಳಿದ್ದೇವೆ. ಉಳಿದದ್ದು ನಿಮಗೆ ಸೇರಿರುವಂತಹದ್ದು.

ಶ್ರೀ ಸಿದ್ದರಾಮಯ್ಯ : ನಿಮ್ಮ ಒಂದು ಎಚ್ಚರಿಕೆಯನ್ನು ಗಮನದಲ್ಲಿಟ್ಟುಕೊಂಡು . . . .

ಶ್ರೀ ಹೆಚ್.ಡಿ. ರೇವಣ್ಣ : ಕಳೆದ ಸಾರಿ Judgement ನಲ್ಲಿ ಒಂದು ಮಾತನ್ನು ಹೇಳಿದ್ದರು. ಆಗ ಮಾನ್ಯ ಸಚಿವರಾದ ಟಿ.ಬಿ.ಜಯಚಂದ್ರ ಅವರು ಉಪನಾಯಕರಾಗಿದ್ದು, ಮಾನ್ಯ ಮುಖ್ಯಮಂತ್ರಿಗಳು ಸಭಾ ನಾಯಕರಾಗಿದ್ದು, ವಿರೋಧ ಪಕ್ಷದ ನಾಯಕರಾಗಿದ್ದಿರಿ ಅವತ್ತು ಒಂದು ಮಾತನ್ನು ಹೇಳಿದ್ದು, ಇದೇ ನಾರಿಮನ್ ಅವರು ಸುಪ್ರೀಂ ಕೋರ್ಟಿನಲ್ಲಿ ಇದನ್ನು ಅವರೇ ಒಪ್ಪಿಕೊಂಡು ಹೇಳಿದ್ದಾರೆಂದು ಹೇಳಿ ಆ Order quote ಮಾಡಿದಿರಿ ಸುಪ್ರೀಂ ಕೋರ್ಟಿನ ನ್ಯಾಯಾದೀಶರು ಆರ್ಡರ್ ಮಾಡುವಾಗ ಕರ್ನಾಟಕ ಸರ್ಕಾರ ಒಪ್ಪಿಕೊಂಡೇ ನಾವು ಇದನ್ನು ಮಾಡಿದೆಯೆಂಬ ಒಂದು ಭಾವನೆಯನ್ನು ವ್ಯಕ್ತ ಪಡಿಸಿದ್ದೀರಲ್ಲವೇ? ತಾವು ಇಬ್ಬರೂ ವ್ಯಕ್ತಪಡಿಸಿರುವುದರಿಂದ ದಯಮಾಡಿ ಅದನ್ನು ಹೇಳಿ. ನಿಮ್ಮಿಬ್ಬರ ಮಧ್ಯದಲ್ಲಿ ನಾವು suffer ಆಗಬೇಕಾಗುತ್ತದೆ. ಒಂದು ಕಡೆ ಕಾಂಗ್ರೆಸ್, ಒಂದು ಕಡೆ ಬಿಜೆಪಿ, ಎರಡೂ ರಾಷ್ಟ್ರೀಯ ಪಕ್ಷಗಳೇ. ಇದರಿಂದ ಕಾವೇರಿ ಬೇಸಿನ್ ಜನ ಸಫರ್ ಆಗುವ ಪರಿಸ್ಥಿತಿ ಬಂದಿದೆ. ಆದ್ದರಿಂದ, ನೀವಿಬ್ಬರೂ ಸೇರಿ ದಯ ಮಾಡಿ ಏನು ಎನ್ನುವುದನ್ನು ಒಂದು clarification ಕೊಡಬೇಕು. ಏಕೆಂದರೆ ಅಂದು ಉಪನಾಯಕರಾಗಿದ್ದವರು ಇಂದು Law Minister ಆಗಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು

ಸಭಾನಾಯಕರು, ವಿರೋಧ ಪಕ್ಷದ ನಾಯಕರಾಗಿದ್ದರು. ಅವತ್ತು ಸಭೆಯಲ್ಲಿ ಏನು ಹೇಳಿದ್ದಾರೆಂಬ ರೆಕಾರ್ಡ್‌ನ್ನು ಮಾನ್ಯ ಅಧ್ಯಕ್ಷರು ತೆಗೆಸಿ, ಅದಕ್ಕೆ final ಆಗಿ ಇಂದು ಇತಿಶ್ರೀ ಹಾಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಎಚ್ಚರಿಕೆಯಿಂದ ಹೆಜ್ಜೆಯಿಡಬೇಕೆನ್ನುವ ಬಗ್ಗೆ ಎರಡು ಮಾತಿಲ್ಲ. ನಮ್ಮ ರೈತರಿಗೆ ನಮ್ಮಿಂದ, ನಮ್ಮ ತಪ್ಪುಗಳಿಂದ ಯಾವುದೇ ರೀತಿಯಲ್ಲಿ ತೊಂದರೆಯಾಗಬಾರದು, ಅವರಿಗೆ ಅನ್ಯಾಯವಾಗಬಾರದು ಎನ್ನುವ ಮಾತುಗಳನ್ನು ನಾನು ಒಪ್ಪಿಕೊಳ್ಳುತ್ತೇನೆ. ಯಾವುದೇ ಕಾರಣಕ್ಕೂ ನಮ್ಮ ಸರ್ಕಾರ ಅದನ್ನು ಮಾಡುವುದಕ್ಕೆ ಹೋಗುವುದಿಲ್ಲ. ನಾವು ರೈತರ ಹಿತವನ್ನು ಕಾಪಾಡುವುದಕ್ಕೆ ಸಂಪೂರ್ಣವಾಗಿ ಬದ್ಧರಾಗಿದ್ದೇವೆ. ಇದರ ಬಗ್ಗೆ ಯಾರೂ ಕೂಡ ಸಂಶಯ ಇಟ್ಟುಕೊಳ್ಳುವ ಅಗತ್ಯವಿಲ್ಲ. ನೀವೆಷ್ಟು ಬದ್ಧರಾಗಿದ್ದೀರೋ ನಿಮ್ಮಷ್ಟೇ ನಾವೂ ಕೂಡ ಬದ್ಧರಾಗಿದ್ದೇವೆ.

ಶ್ರೀ ಹೆಚ್.ಡಿ. ರೇವಣ್ಣ : ಸಂತೋಷ ಸರ್.

ಶ್ರೀ ಸಿದ್ದರಾಮಯ್ಯ : ಅದುದರಿಂದ ಮಾನ್ಯ ಅಧ್ಯಕ್ಷರೆ, ಈ ವಾಕ್ಯಗಳನ್ನು ಮಾನ್ಯ ರಾಜ್ಯಪಾಲರ ಭಾಷಣದಿಂದ ಡ್ರಾಪ್ ಮಾಡುವ ಅಗತ್ಯವಿಲ್ಲ. ಇದರಿಂದ ರಾಜ್ಯದ ಹಿತಕ್ಕೆ ಯಾವುದೇ ರೀತಿಯ ಅನಾನುಕೂಲವಾಗುವುದಿಲ್ಲ. ಯಾವುದೇ ಬಾಧಕವಾಗುವುದಿಲ್ಲ ಎನ್ನುವುದನ್ನು ಸ್ಪಷ್ಟಪಡಿಸಿ, ಇದನ್ನು ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮತ್ತು ಸದನದ ಗಮನಕ್ಕೆ ತರುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಈ verdict ನಿಂದ ನಮಗೆ ಅನ್ಯಾಯವಾದರೆ, ನಾಳೆ ದಿವಸ ನಾವು ಭಾಗಿ ಯಾಗುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ಹೇಳಿದ್ದಾರಲ್ಲವೇ?

ಶ್ರೀ ಸಿದ್ದರಾಮಯ್ಯ : ಹೇಳಿದೆಯೆಲ್ಲಾ ರೇವಣ್ಣ ಅವರೆ? ಇಷ್ಟಾದರೂ ನೀವು convince ಆಗಲಿಲ್ಲ ಎಂದರೆ ಏನು ಮಾಡುವುದು? ಸುಪ್ರೀಂ ಕೋರ್ಟಿನವರು ಹೇಳಿದ್ದಾರೆಂದರೂ ಕೂಡ ನೀವು convince ಆಗಿಲ್ಲ ಎಂದರೆ ಹೇಗೆ ರೇವಣ್ಣನವರೇ?

ಶ್ರೀ ಹೆಚ್.ಡಿ. ರೇವಣ್ಣ : ಕಾವೇರಿ ಗುತ್ತಿಗೆ ಅಲ್ಲ, ಕೃಷ್ಣಾ ಗುತ್ತಿಗೆಗೆ ತೆಗೆದುಕೊಂಡು 40 ವರ್ಷಗಳ ಕಾಲ ಕಾಂಗ್ರೆಸ್ ಏನು ಮಾಡಿತು ಎಂಬುದನ್ನು

ಬಿಚ್ಚಿಟ್ಟು ಹೇಳಬೇಕೆಂದರೆ ಹೇಳುತ್ತೇನೆ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಲಿಲ್ಲ. ಆಗ ದೇವೇಗೌಡರೇ ಬರಬೇಕಾಗಿತ್ತು. ಕೃಷ್ಣಾ ಬೇಸಿನ್ ಮಾಡುವುದಕ್ಕೆ ದೇವೇಗೌಡರೇ ಬರಬೇಕಾಗಿತ್ತು. ಬಿ.ಎಂ.ಪಾಟೀಲರು ಎಂದು ಅವರ ತಂದೆಯಿದ್ದರು, ಅವರಿಗೆ ಗೊತ್ತು, ನರೇಂದ್ರಬಾಬು ಅವರೇ, ನೀವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಕೃಷ್ಣ ಬೇಸಿನ್ ಏನು, ಕಾವೇರಿ ಬೇಸಿನ್ ಏನು, ಲಾಲ್‌ಬಹದ್ದೂರ್ ಶಾಸ್ತ್ರಿಯವರನ್ನು ಕರೆದುಕೊಂಡು ಬಂದು foundation ಹಾಕಿ 40 ವರ್ಷ ಏನಾಗಿತ್ತು ಎಂಬುದು ನರೇಂದ್ರ ಸ್ವಾಮಿಯವರಿಗೆ ಏನು ಗೊತ್ತು? ಅವರಿಗೆ ಸುಮ್ಮನೆ ಕುಳಿತುಕೊಳ್ಳಿ ಎಂದು ಹೇಳಿ.

(ಗೊಂದಲ)

ಅಧ್ಯಕ್ಷರು : ಆಯಿತು, ಆಯಿತು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಯಾರ್‍ಯಾರ ಕಾಲದಲ್ಲಿ ಏನಾಗಿತ್ತು ಎಂಬುದು ತಿಳಿದುಕೊಳ್ಳಿ.

(ಗೊಂದಲ)

ಶ್ರೀ ಎಂ.ಬಿ.ಪಾಟೀಲ್ : ನಿನ್ನೆ ಕೂಡ ನಾರಿಮನ್ ಅವರ ಹತ್ತಿರ ಸಂಜೆ 5 ಗಂಟೆಯಲ್ಲಿ ಚರ್ಚೆ ಮಾಡಿಕೊಂಡು ಬಂದಿದ್ದೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಕಾವೇರಿ ಅವಾರ್ಡ್ ಅದಾಗ . . . . . details ಕೊಡಲಾ?

(ಗೊಂದಲ)

ಅಧ್ಯಕ್ಷರು : ನೀವು ನೀವೇ ಮಾತನಾಡಿಕೊಂಡರೆ ಹೇಗೆ?

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ : ಕಾವೇರಿ ಬಗ್ಗೆ ನಿಮಗೇನು ಗೊತ್ತಿದೆ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ನರೇದ್ರ ಸ್ವಾಮಿಯವರಿಗೆ ಕಾವೇರಿ ನದಿಯಿಂದ ಮರಳು ತೆಗೆಯುವುದೊಂದು ಗೊತ್ತಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸನ್ಮಾನ್ಯ ಸಭಾಧ್ಯಕ್ಷರೆ, ಯಾರು ಎಷ್ಟೇ ಚರ್ಚೆ ಮಾಡಿದರೂ 192.50 ಟಿ.ಎಂ.ಸಿ. ಯಿಂದ ಹಿಂದೆಯೂ ಬರುವುದಕ್ಕೆ ಆಗುವುದಿಲ್ಲ. ಮುಂದೆಯೂ ಹೋಗುವುದಕ್ಕೆ ಆಗುವುದಿಲ್ಲ. 1991ನೇ ಇಸವಿಯಲ್ಲಿ interim ನಲ್ಲಿ ನಾವು ಬರೆದು ಕೊಟ್ಟಿದ್ದೇವೆ. ಜೂನ್‌ನಲ್ಲಿ 10 ಟಿ.ಎಂ.ಸಿ. ಜುಲೈನಲ್ಲಿ 34 ಟಿ.ಎಂ.ಸಿ., ಆಗಸ್ಟ್‌ನಲ್ಲಿ 50 ಟಿ.ಎಂ.ಸಿ., ಸೆಪ್ಟೆಂಬರ್‌ನಲ್ಲಿ 22 ಟಿ.ಎಂ.ಸಿ. ಹೀಗೆ 192.50 ಟಿ.ಎಂ.ಸಿ. ಬರೆದು ಕೊಟ್ಟಿದ್ದೇವೆ. ಆದ್ದರಿಂದ ಇದನ್ನು ಚರ್ಚೆ ಮಾಡಿ ನಾವು ಸುಪ್ರೀಂ ಕೋರ್ಟ್‌ನಲ್ಲಿ ಏನೋ ಮಾಡುತ್ತೇವೆಂದರೆ ಯಾರು ಎಷ್ಟೇ ಚರ್ಚೆ ಮಾಡಿದರೂ ನೀರು ಇಲ್ಲ. ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಎಲ್ಲಾ ಪಕ್ಷಗಳಿಗೂ ಏನಾದರೂ ಇದ್ದರೆ, ಹೊಸ ದಿಕ್ಕು ಯಾವುದಾದರೂ ಇದ್ದರೆ ತಾವು ದಯವಿಟ್ಟು ಅದರ ಬಗ್ಗೆ ಮಾತನಾಡುವುದು ಒಳ್ಳೆಯದೇ ಹೊರತು ಯಾವ ಕಾಲದಲ್ಲೂ ಯಾರೂ ಕಾವೇರಿಗೆ ದ್ರೋಹ ಮಾಡಬೇಕೆಂದು ಏನೂಮಾಡಿಲ್ಲ ಆಯಾಯ ಕಾಲಕ್ಕೆ ಅವರು ಮಾಡಿದ್ದಾರೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ, ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇದೆ, ತಾವು ಇದ್ದೀರಿ. ಎಲ್ಲರೂ ಸೇರಿ ಏನಾದರೂ ಮಾಡಬೇಕೆಂದಿದ್ದರೆ ಹೊಸ ದಿಕ್ಕಿಗೆ ಆಲೋಚನೆ ಮಾಡೋಣ. ಖಿವಾಲಿ ತರಹ ಒಬ್ಬರನ್ನೊಬ್ಬರು ಟೀಕೆ ಮಾಡುವುದನ್ನು ಬಿಟ್ಟು ಏನಾದರೂ ಹೊಸ ದಿಕ್ಕಿಗೆ ಆಲೋಚನೆ ಮಾಡೋಣ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, clarification ಕೇಳುವುದಾದರೆ ಆಮೇಲೆ ಕೇಳಲಿ.

ಅಧ್ಯಕ್ಷರು : ತಾವು yield ಆಗುವುದಕ್ಕೆ ಹೋಗಬೇಡಿ.

ಶ್ರೀ ಸಿದ್ದರಾಮಯ್ಯ : ನಾನು yield ಆಗುವುದಕ್ಕೆ ಹೋಗುವುದಿಲ್ಲ. ಮಾನ್ಯ ಪುಟ್ಟಣ್ಣಯ್ಯ ನವರು ಅಪರೂಪಕ್ಕೆ ಮಾತನಾಡುತ್ತಿದ್ದಾರೆಂದು ನಾನು ಕುಳಿತುಕೊಂಡೆ. ಮುಖ್ಯ ಕಾರ್ಯದರ್ಶಿಗಳು Supervisory Committeeಗೆ ಹೋಗಿದ್ದಾರೆ. ನಮ್ಮ objection, ನಿಲುವುಗಳನ್ನು ಮಂಡಿಸುವಂಥದ್ದನ್ನು ಮಾಡಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಏನೇನು ಅಲ್ಲಿ

ವಿರೋಧ ಮಾಡಬೇಕು, ಆ ರೀತಿಯಲ್ಲಿ All-Party Meeting ಕರೆದು ಚರ್ಚೆ ಮಾಡಿ ಅವರ ಅಭಿಪ್ರಾಯಗಳನ್ನು ತೆಗೆದುಕೊಂಡು ಮಾಡಿದ್ದೇವೆ. ನಾವು ಅವರ ಅಜೆಂಡಾಗಳನ್ನು ಒಪ್ಪಿಕೊಳ್ಳುವುದಕ್ಕೆ ಹೋಗಿಲ್ಲ. ಎಲ್ಲವನ್ನೂ ವಿರೋಧ ಮಾಡಿದ್ದೇವೆ. ನಮ್ಮ ನಿಲುವು ಏನೆಂಬುದನ್ನು ಬಹಳ ಸ್ಪಷ್ಟವಾಗಿ Supervisory Committee ಮುಂದೆ ಹೇಳಿದ್ದೇವೆ. ಒಂದು ವೇಳೆ ನಮ್ಮ ನಿಲುವನ್ನು ಅವರು ಒಪ್ಪದೇ ಹೋದರೆ ಮತ್ತೆ ನಾವು ಸುಪ್ರೀಂ ಕೋರ್ಟ್ ಮುಂದೆ ಹೋಗಿ ನಮ್ಮ ಕೇಸ್ ಅನ್ನು ಬಲವಾಗಿ ಸಮರ್ಥನೆ ಮಾಡತಕ್ಕಂಥದ್ದು, ವಾದ ಮಾಡತಕ್ಕಂಥದ್ದು ಇದ್ದೇ ಇರುತ್ತದೆ. ನಾವು ಯಾವುದೇ ಕಾರಣಕ್ಕೂ ಹೋರಾಟ ಮಾಡುವುದರಲ್ಲಿ ಹಿಂದೆ ಬೀಳುವುದಿಲ್ಲ. ಎಲ್ಲಾ ಪಕ್ಷದವರನ್ನು ಕೂಡ ವಿಶ್ವಾಸಕ್ಕೆ ತೆಗೆದುಕೊಂಡೇ ಅದನ್ನು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಲು ಬಯಸುತ್ತಿದ್ದೇನೆ. ಈ ಬಗ್ಗೆ ಸಂಶಯವಾಗಲಿ, ಆತಂಕವಾಗಲಿ ಇಟ್ಟುಕೊಳ್ಳುವ ಅಗತ್ಯವಿಲ್ಲ ಎಂಬ ಮಾತುಗಳನ್ನು ಈ ಸಂದರ್ಭದಲ್ಲಿ ನಾನು ಬಹಳ ಸ್ಪಷ್ಟವಾಘಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಅನೇಕ ಜನ ಮಾನ್ಯ ಸದಸ್ಯರು ಕುಡಿಯುವ ನೀರಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಕುಡಿಯುವ ನೀರಿನ ಸಮಸ್ಯೆ ಇರುವುದು ನಿಜ. ಕರ್ನಾಟಕದಲ್ಲಿ ಎರಡು ವರ್ಷ ಬರಗಾಲವಾಯಿತು. ಸುಮಾರು 176 ತಾಲ್ಲೂಕುಗಳಲ್ಲಿ 157 ತಾಲ್ಲೂಕುಗಳು ಬರಗಾಲಕ್ಕೆ ತುತ್ತಾದವು. ಎರಡು ವರ್ಷ ಸತತವಾಗಿ ಬರ ಬಂತು. ಬಹುಶಃ 1971ನೇ ಇಸವಿಯಿಂದ ಇವತ್ತಿನವರೆಗೆ ಇಷ್ಟೊಂದು ಬರಗಾಲ ಕರ್ನಾಟಕದಲ್ಲಿ ಯಾವ ಕಾಲದಲ್ಲೂ ಕೂಡ ಬಂದಿರಲಿಲ್ಲ. ಅಂಥ ಬರ ಬಂತು. ಹಿಂದಿನ ಸರ್ಕಾರ 2 ವರ್ಷಗಳ ಕಾಲ ಸರಿಯಾದ ರೀತಿಯಲ್ಲಿ ನಿರ್ವಹಣೆಯನ್ನು ಮಾಡಲಿಲ್ಲವೆಂದು ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತುಕೊಂಡು ನಾಲ್ಕು ಬಾರಿ ಕುಡಿಯುವ ನೀರಿನ ಬಗ್ಗೆಬರಗಾಲದ ಬಗ್ಗೆ ಚರ್ಚೆ ಆಯಿತು. ಕುಡಿಯುವ ನೀರಿಗೆ ದುಡ್ಡು ಕೊಡಬೇಕು, ದನಕರುಗಳಿಗೆ ಮೇವು ಕೊಡಬೇಕೆಂದು ನಾವು ಒತ್ತಾಯ ಮಾಡಿದ್ದೇವೆ. ಕೆರೆಗಳಲ್ಲಿ ನೀರಿಲ್ಲ, ವಿದ್ಯುಚ್ಛಕ್ತಿ ಇಲ್ಲ, ಇವುಗಳನ್ನು ಕೊಡಬೇಕೆಂದು ಅಲ್ಲಿ ಕುಳಿತು ಕೊಂಡು ನಾಲ್ಕು ಬಾರಿ ಸದನದಲ್ಲಿ ಚರ್ಚೆ ಮಾಡಿದೆವು. ನಾನು ಅಧಿಕಾರಕ್ಕೆ ಬಂದ ತಕ್ಷಣವೇ ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಬಗ್ಗೆ ಅಧಿಕಾರಿಗಳ ಜೊತೆ ಸಭೆ ಮಾಡಿದೆ. ಹಳ್ಳಿಗಾಡಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಚರ್ಚೆ ಮಾಡಿದೆ. ಈಗ ಎಲ್ಲಾ ಜಿಲ್ಲಾಧಿಕಾರಿಗಳ ಹತ್ತಿರ ಹಣ

ಇದೆ. CEO ಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದೇವೆ. ನಗರ ಪ್ರದೇಶಗಳಿಗೆ 40 ಕೋಟಿ ರೂಪಾಯಿಗಳು, CEO ಗಳಿಗೆ 38 ಕೋಟಿ ರೋಪಾಯಿಗಳನ್ನು ತಕ್ಷಣವೇ ಬಿಡುಗಡೆ ಮಾಡಿದ್ದೇವೆ. ಮಾನ್ಯ ಸದಸ್ಯರು ಕೆಲವರು ಹೇಳಿದರು. ಆದರೆ, ಹೊಸ ಬೋರ್‌ವೆಲ್‌ಗಳನ್ನು ತೋಡಿಸುವುದಕ್ಕೆಹಣವಿಲ್ಲ ಎನ್ನತಕ್ಕಂಥದ್ದನ್ನು circular ಮೂಲಕ ಸ್ಪಷ್ಟವಾಗಿ ಕೊಟ್ಟಿದ್ದೇವೆ. ಎಲ್ಲೆಲ್ಲಿ ಹೊಸ ಬೋರ್‌ವೆಲ್‌ಗಳನ್ನು ತೋಡಿಸುವ ಅಗತ್ಯವಿದೆ, ಅಲ್ಲಿ ಹೊಸ ಬೋರ್‌ವೆಲ್‌ಗಳನ್ನು ಕೊರೆಸಬೇಕೆಂದು CEO ಗಳಿಗೆ ಹೇಳಲಾಗಿದೆ. ಎಲೆಕ್ಷನ್ ಸಂದರ್ಭದಲ್ಲಿ code of conduct ಇದ್ದುದರಿಂದ Task-force committee ಗಳಿಗೆ Assistant Commissioner ಅಧ್ಯಕ್ಷರುಗಳಾಗಿದ್ದರು. M.L.A. ಗಳೇ Task-force committee ಅಧ್ಯಕ್ಷರುಗಳು ಎಂದು ಸ್ಪಷ್ಟವಾಗಿ ನಾವು ಆದೇಶ ಕೊಟ್ಟಿದ್ದೇವೆ. ಅವರು ಎಲ್ಲಿ ನೀರಿನ ಸಮಸ್ಯೆ ಇದೆ, ಎಲ್ಲಿ ಹೊಸ ಬೋರ್‌ವೆಲ್‌ಗಳನ್ನು ಹಾಕಬೇಕಾಗುತ್ತದೆಂದು Task-force committeeಯವರು ಶಿಫಾರಸ್ಸು ಮಾಡಿದರೆ D.C. ಹಾಗೂ C.E.O.ಗಳು ಮಾಡಿ ಕೊಡಬೇಕು. ಇಬ್ಬರೂ ಹೊಂದಾಣಿಕೆಯಿಂದ ಮಾಡಬೇಕೆಂಬ ಆದೇಶವನ್ನು ಹೊರಡಿಸಿದ್ದೇವೆ. ಒಂದು ವೇಳೆ ಹಣ ಸಾಲದೆ ಹೋದರೆ ನೀವು ಸರ್ಕಾರಕ್ಕೆ ಪತ್ರ ಬರೆಯಬೇಕು. ಆಗ ನಾವು ಹಣ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದೇವೆ. C.E.O. ಗಳು ಹಣ ಬೇಕು ಎಂದರೆ ಹಣ ಕೊಡುತ್ತೇವೆ. ಈಗ ಅವರ ಹತ್ತಿರ ಹಣ ಇದೆ. ಕಳೆದ ತಿಂಗಳು 25ನೇ ತಾರೀಖಿನಂದು ಒಂದೊಂದು ಜಿಲ್ಲಾ ಪಂಚಾಯಿತಿ ಡಿವಿಷನ್‌ಗಳಿಗೆ ಒಂದೊಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಒಂದು ಡಿವಿಷನ್‌ಗೆ ನಾಲ್ಕು ತಾಲ್ಲೂಕುಗಳು ಬರುತ್ತವೆ. ಒಂದು ತಾಲ್ಲೂಕಿಗೆ 25 ಲಕ್ಷ ಬರುತ್ತದೆ. 100 ಬೋರ್‌ವೆಲ್ ಕೊರೆಸಿದ್ದೇವೆ.

ಅಧ್ಯಕ್ಷರು : ಖರ್ಚು ಮಾಡಿ, Task-force committee ಯಿಂದ ಕಳುಹಿಸಿಕೊಡಿ.

ಶ್ರೀ ಸಿದ್ದರಾಮಯ್ಯ : ನಿಮಗೆ ಹಣ ಬೇಕಾದರೆ C.E.O. ಮುಖಾಂತರ ಪತ್ರ ಬರೆದರೆ ನಾವು ಹಣ ಬಿಡುಗಡೆ ಮಾಡುತ್ತೇವೆ. ಕುಡಿಯುವ ನೀರಿನ ವಿಷಯದಲ್ಲಿ ಯಾವುದೇ ಕಾರಣಕ್ಕೆ ಹಣದ ತೊಂದರೆ ಆಗುವುದಿಲ್ಲ. D.C.ಗಳ ಹತ್ತಿರ P.D Account ನಲ್ಲಿ 341 ಕೋಟಿ ರೂಪಾಯಿ ಹಣ ಇದೆ. P.D Account ಅಂದರೆ ಏನು ರೇವಣ್ಣ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಜಿಲ್ಲಾಧಿಕಾರಿಗಳ P.D Account ನಲ್ಲಿ ಹಣ ಇದೆ. ಹಣವನ್ನು ರಿಲೀಸ್ ಮಾಡಬೇಕು. Payment ಕೊಡಲಿಲ್ಲವೆಂದರೆ ಬೋರ್‌ವೆಲ್‌ಗಳನ್ನು ಕೊರೆಯುವುದಿಲ್ಲ. ಬೋರ್‌ವೆಲ್ ಕೊರೆಯುವವರಿಗೆ ಹಣ ಕೊಡಬೇಕು. ಆದರೆ ಹಣವನ್ನು ರಿಲೀಸ್ ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ರೇವಣ್ಣನವರೆ, ಸುತ್ತೋಲೆ ಕೂಡ ಹೋಗಿದೆ. ನಾವು ಕೊಟ್ಟಿರತಕ್ಕಂಥ ಸುತ್ತೋಲೆಯಲ್ಲಿ "ಈ ಅನುದಾನದಿಂದ ಪ್ರತಿ ಪಂಚಾಯತ್ ರಾಜ್ ಜಿಲ್ಲಾ ವಿಭಾಗಕ್ಕೆ ತಲಾ ಒಂದು ಕೋಟಿ ರೂ. ಎಂದು ಒಟ್ಟು 38 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಈ ಅನುದಾನದಿಂದ ಸಾರ್ವಜನಿಕ ಹಿತಾಸಕ್ತಿ ಮೇರೆಗೆ ತುರ್ತು ಕುಡಿಯುವ ನೀರಿನ ವ್ಯವಸ್ಥೆಗಾಗಿ ಸ್ಥಳೀಯ, ವಾಸ್ತವಿಕ ಅಗತ್ಯತೆಗೆ ಆಧರಿಸಿ ಶಾಸಕರ ಅಧ್ಯಕ್ಷತೆಯಲ್ಲಿರುವ Task-force ಸಮಿತಿ ಶಿಫಾರಸ್ಸಿನಂತೆ ಹೊಸ ಬೋರ್‌ವೆಲ್ ಅಥವಾ ಕೊಳವೆ ಬಾವಿಗಳನ್ನು ಕೊರೆಯಲು ತಕ್ಷಣ ಕ್ರಮ ವಹಿಸಬೇಕು" ಬಹಳ ಸ್ಪಷ್ಟವಾಗಿದೆ. Very very clear. ಕುಡಿಯುವ ನೀರಿನ ತೊಂದರೆ ಬಂದರೆ ಅದಕ್ಕೆ D.C. ಹಾಗೂ CEO ಗಳು ಜವಾಬ್ದಾರಿ ಎಂದು ಹೇಳಿದ್ದೇವೆ. They will be held responsible ಎಂದು ಕೂಡ ಹೇಳಿದ್ದೇವೆ. "ಹೆಚ್ಚುವರಿ ಅನುದಾನದ ಅವಶ್ಯಕತೆ ಇದ್ದಲ್ಲಿ ತಕ್ಕಣ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕು. ಉಳಿದಂತೆ ಉಲ್ಲೇಖಿಸಿದ ಮಾರ್ಗಸೂಚಿಯನ್ನು ಪಾಲಿಸಬೇಕು" ಎಂದು ಇದೆ. ಆದ್ದರಿಂದ ಮಾನ್ಯ ರೇವಣ್ಣನವರೆ ದುಡ್ಡಿನ ಸಮಸ್ಯೆ ಇಲ್ಲ. ಎಲ್ಲಾ ಮಾನ್ಯ ಶಾಸಕರು ತಾವು Task-force ಸಮಿತಿ ಸಭೆಗಳನ್ನು ಮಾಡಿ, ಶಿಫಾರಸ್ಸುಗಳನ್ನು ಕಳುಹಿಸಿಕೊಡಿ. ಆ ಶಿಫಾರಸ್ಸಿನ

ಅನುಗುಣಕ್ಕೆ ತಕ್ಕಂತೆ ಬೋರ್‌ವೆಲ್‌ಗಳನ್ನು ತೋಡಿಸುವುದು, ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವಂಥದ್ದನ್ನು ಮಾಡುತ್ತೇವೆ.

ಬಹಳ ಜನ ಪಂಪುಸೆಟ್ಟುಗಳ ಬಗ್ಗೆ ಮಾತನಾಡಿದರು. ಮಾನ್ಯ ಮಾಜಿ ಮಂತ್ರಿಗಳಾದ ನಮ್ಮ ಗೋವಿಂದ ಕಾರಜೋಳರವರು ಹೇಳಿದರು.

ಅಧ್ಯಕ್ಷರು : ಇಲ್ಲಿ ಕೇಳ್ರಿ.

ಶ್ರೀ ಸಿದ್ದರಾಮಯ್ಯ : ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿಯ ಬಗ್ಗೆ ಹೇಳಿದ್ದರಲ್ಲ, ನಿಮಗೆ ಜ್ಞಾಪಕ ಮಾಡೋಣವೆಂದು, ಹಿಂದಿನ ಸರ್ಕಾರದವರು ಗಂಗಾ ಕಲ್ಯಾಣ ಸ್ಕೀಂಗಳನ್ನೆಲ್ಲಾ ನಿಲ್ಲಿಸಿದ್ದರು.

ಶ್ರೀ ಎನ್.ಚಲುವರಾಯಸ್ವಾಮಿ : ಗೋವಿಂದ ಕಾರಜೋಳರವರಲ್ಲ,

ಶ್ರೀ ಸಿದ್ದರಾಮಯ್ಯ : ನಿನ್ನೆ ಹೇಳಿದ್ದರು ಪಾಪ! ಅದಕ್ಕೆ ನಾವು ಇಲ್ಲಿ ಬಂದು ಕುಳಿತಿದ್ದೇವೆ ಎಂದು ಹೇಳಿದ್ದರು.

ಶ್ರೀ ಗೋವಿಂದ ಎಂ.ಕಾರಜೋಳ : ಸನ್ಮಾನ್ಯ ಮುಖ್ಯಮಂತ್ರಿಗಳಿಗೆ clear ಮಾಡುತ್ತೇನೆ. ಗಂಗಾ ಕಲ್ಯಾಣ. . . .

ಶ್ರೀ ಸಿದ್ದರಾಮಯ್ಯ : ನಾನು ಅವರಿಗೆ ಹೇಳಲಿಲ್ಲ.

ಅಧ್ಯಕ್ಷರು : ಅವರು ಹೇಳುತ್ತಾರೆ.

ಶ್ರೀ ಸಿದ್ದರಾಮಯ್ಯ : ನೀವು ಹೇಳಿದ್ದನ್ನು ನಾನು repeat ಮಾಡುತ್ತಿದ್ದೇನೆ. ನಿಮ್ಮ ಕಾಲದಲ್ಲಿ ಮಾಡಲಿಲ್ಲವೆಂದು ಅವರು ಯಾರೋ ಹೇಳಿದರು. ಪಾಪ! ನೀವು ಬಹಳ ಚೆನ್ನಾಗಿ ಹೇಳಿದಿರಿ. ಅದಕ್ಕೆ ನಾವು ಈ ಕಡೆ ಇಲ್ಲಿ ಬಂದು ಕುಳಿತಿದ್ದೇವೆ. ಈಗ ನೀವು ಮಾಡಿ ಎಂದು ನೀವು ಹೇಳಿದಿರಿ. ಅಲ್ಲವೇ? ಚಲುವರಾಯಸ್ವಾಮಿ ಅವರು ಹೇಳಿದ್ದನ್ನು ನಾನು repeat ಮಾಡುತ್ತಿದ್ದೇನೆ.

ಶ್ರೀ ಎನ್.ಚಲುವರಾಯಸ್ವಾಮಿ : ಹೌದು, ಅವರು ಹೇಳಿದಾಗ ನಾನೂಇದ್ದೆ.

ಶ್ರೀ ಸಿದ್ದರಾಮಯ್ಯ : ಅವರು ಹೇಳಿದ್ದನ್ನು ನಾನು repeat ಮಾಡುತ್ತಿದ್ದೇನೆ. ಆದ್ದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಇಲಾಖೆ, ಹಿಂದುಳಿದವರು, ಅಲ್ಪಸಂಖ್ಯಾತರು ಎಲ್ಲಾ ಸೇರಿ ಸುಮಾರು 31,000 ಗಂಗಾ ಕಲ್ಯಾಣ schemeನ ಬೋರ್‌ವೆಲ್‌ಗಳಿಗೆ electrification ಆಗಿಲ್ಲ.

ಕಳೆದ ಸುಮಾರು 2 ವರ್ಷ, 3 ವರ್ಷಗಳಿಂದ ಹಾಗೇ ನಿಂತು ಹೋಗಿವೆ. ಅದಕ್ಕಾಗಿ ನಾನು ನಿನ್ನೆ. . . .

ಶ್ರೀ ಬಿ.ಎಸ್.ಯಡಿಯೂರಪ್ಪ : ರಾಜ್ಯದ ಜನತೆಗೆ ತಪ್ಪು ಮಾಹಿತಿ ಹೋಗುವುದು ಬೇಡ.

ಶ್ರೀ ಸಿದ್ದರಾಮಯ್ಯ : 31,000 ತಪ್ಪು ಅನ್ನುತ್ತಿದ್ದೀರಾ? Figure dispute ಮಾಡುತ್ತಿದ್ದೀರಾ? ಪದೇ ಪದೇ ಮಾತನಾಡುವಾಗ ಎದ್ದು ನಿಂತರೆ ನಮಗೆ ತಾಪತ್ರಯವಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ಅದಕ್ಕೆ ನಾನು ಹೇಳುತ್ತಿದ್ದೇನೆ, ಕಳೆದ 4-5 ವರ್ಷಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಲ್ಲಿ ಪ್ರತಿ ವರ್ಷ ಎಷ್ಟು ಬೋರ್‌ವೆಲ್‌ಗಳನ್ನು ಕೊರೆಸಿದ್ದೆವು? ಎಷ್ಟು ವಿದ್ಯುದ್ದೀಕರಣ ಆಯಿತು? ಎಷ್ಟು ಬಾಕಿಯಿದೆ? 31,000 ಬಾಕಿಯಿದೆ ಎಂದು ಹೇಳುತ್ತಿದ್ದಾರೆ. ಕಳೆದ 5 ವರ್ಷಗಳಲ್ಲಿ ಯಾವ ಪ್ರಮಾಣದಲ್ಲಿ ಗಂಗಾ ಕಲ್ಯಾಣ ಬೋರ್‌ವೆಲ್ ನಾವು ತೆಗೆಸಿದ್ದೇವೆ. ಹಿಂದಿನ 10 ವರ್ಷಗಳ figuresಗೆ ಹೋಲಿಕೆ ಮಾಡಿದರೆ, ಇಷ್ಟು ದೊಡ್ಡ ಪ್ರಮಾಣದಲ್ಲಿ ಹಿಂದೆ ಕೊರೆದಿರಲಿಲ್ಲ. ಅಷ್ಟು ದೊಡ್ಡ ಪ್ರಮಾಣದಲ್ಲಿ ನಾವು ಕೊರೆಸಿದ್ದೆವು, ಅಷ್ಟು ದೊಡ್ಡ ಪ್ರಮಾಣದಲ್ಲಿ electrification ಮಾಡಿದ್ದೇವೆ. ಮತ್ತೆ 31,000 ಬಾಕಿಯದೆ, ಅದನ್ನು ಮುಂದೆ ಬರುವ ದಿವಸಗಳಲ್ಲಿ ಮಾಡೋಣ. ಅಂಕಿ-ಅಂಶಗಳನ್ನು ನೋಡಿದಾಗ ಯಾವ ದೊಡ್ಡ ಪ್ರಮಾಣದಲ್ಲಿ ಗಂಗಾ ಕಲ್ಯಾಣ ಯೋಜನೆಯನ್ನು ನಾವು ಜಾರಿಗೆ ತಂದಿದ್ದೇವೆ ಎನ್ನುವುದು ನಿಮಗೆ, ದೊಡ್ಡ ಪ್ರಮಾಣದಲ್ಲಿ ಬಡವರಿಗೋಸ್ಕರ ಈ ಯೋಜನೆ ಮಾಡಿದ್ದು ಎನ್ನುವುದು ನಿಮಗೆ ಗೊತ್ತಾಗುತ್ತದೆಂದು 4-5 ವರ್ಷಗಳ ಅಂಕಿ-ಅಂಶಗಳನ್ನು ತೆಗೆದು ನೋಡಿ ಎಂದು ನಿಮಗೆ ನಾನು ಹೇಳಿದೆ ಅಷ್ಟೇ.

ಶ್ರೀ ಸಿ.ಬಿ.ಸುರೇಶ್ ಬಾಬು : ಅವರು ತಾರತಮ್ಯ ಮಾಡಿದರು. ಅವರ ಎಂ.ಎಲ್.ಎ.ಗಳಿಗೆ ಜಾಸ್ತಿ ಕೊಟ್ಟರು. ನೀವು ದಯಮಾಡಿ ಆ ರೀತಿ ಮಾಡಬೇಡಿ. ಎಲ್ಲರಿಗೂ ಗಂಗಾ ಕಲ್ಯಾಣ ಯೋಜನೆಯಡಿ ಸಮಾನವಾಗಿ ಕೊಡಿ.

ಅಧ್ಯಕ್ಷರು : ಆಯಿತು, ಆಯಿತು, ನೀವು ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಗಂಗಾ ಕಲ್ಯಾಣ ಯೋಜನೆ ನಿಮ್ಮ ಕಾಲದಲ್ಲಿ ಆಗಿದ್ದಲ್ಲ ಮಾನ್ಯ ಯಡಿಯೂರಪ್ಪನವರೇ, ಬಹಳ ಹಿಂದೆಯೇ ಗಂಗಾ ಕಲ್ಯಾಣ

ಆಗಿದ್ದು, ಅದನ್ನು ನಿವು ಮುಂದುವರೆಸಿದಿರಿ, ಈಗ ನಾವು ಮುಂದುವರೆಸುತ್ತಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಗಂಗಾ ಕಲ್ಯಾಣ ಯೋಜನೆಯಡಿ ಜಾಸ್ತಿ ಬೋರ್‌ವೆಲ್‌ಗಳನ್ನು ಕೊರೆದು ಕಳೆದ 5 ವರ್ಷಗಳಲ್ಲಿ ನಮ್ಮ ಕಾಲದಲ್ಲಿ ಮಾಡಿದ್ದೇವೆ. ಅಂಕಿ–ಅಂಶಗಳನ್ನು ನೋಡಿ ಎಂದು ಹೇಳಿದೆ.

ಶ್ರೀ ಎನ್. ಚಲುವರಾಯಸ್ವಾಮಿ : ಸ್ವಾಮಿ 60,000 ರೂಪಾಯಿ ಇದ್ದದ್ದನ್ನು, ಎಷ್ಟೋ connection ತೆಗೆದುಕೊಳ್ಳುವುದಕ್ಕಾಗದೇ difference cost ಕಟ್ಟುವುದಕ್ಕಾಗದೇ ತೊಂದರೆಯಾದಾಗ 1 ಲಕ್ಷ ರೂಪಾಯಿ ಮಾಡಿದ್ದು ನಮ್ಮ ಸರ್ಕಾರದಲ್ಲಿ, ನಾವು ನೀವು ಇಬ್ಬರೂ ಇದ್ದೆವು. ಆದರೆ ನಿನ್ನೆ ಮುಖ್ಯಮಂತ್ರಿಯವರಿಗೆ . .. . .

ಅಧ್ಯಕ್ಷರು : ಹೌದು, ಹೌದು, ತಾವು ಕುಳಿತುಕೊಳ್ಳಿ.

ಶ್ರೀ ಎನ್.ಚಲುವರಾಯಸ್ವಾಮಿ : ಕಾರಜೋಳರವರು ನೇರವಾಗಿ ಅವರು ಅವರ ತಪ್ಪನ್ನು ಒಪ್ಪಿಕೊಂಡರು. ಅದಕ್ಕೋಸ್ಕರ ಮುಖ್ಯಮಂತ್ರಿಯವರು ಇವತ್ತು ಹೇಳುತ್ತಿದ್ದಾರೆ.

ಶ್ರೀ ಗೋವಿಂದ ಎಂ.ಕಾರಜೋಳ : ತಪ್ಪಲ್ಲರೀ, electrification ಆಗಿಲ್ಲ ಎಂದು ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ : ಕಾರಜೋಳರವರಿಗೆ ಎಷ್ಟು ಬಾಕಿ ಎಂದು correct ಆಗಿ ಗೊತ್ತಿರಲಿಲ್ಲ. ಅದಕ್ಕೆ correct ಆಗಿ ಹೇಳುತ್ತಿದ್ದೇನೆ. 31,000 ಬಾಕಿಯಿದೆ, 2013–14ನೇ ಸಾಲಿಗೆ ಎಲ್ಲಾ ಗಂಗಾ ಕಲ್ಯಾಣ ಯೋಜನೆಯಡಿ ಯಾವ್ಯಾವುದು ಉಳಿದು ಹೋಗಿವೆ, ಅವುಗಳೆಲ್ಲದಕ್ಕೂ ಕೂಡಾ correct ಕೊಡುತ್ತೇವೆ. ಇಷ್ಟಕ್ಕೂ ಸಹ ಎಷ್ಟಾದರೂ ತೊಂದರೆಯಾಗಲಿ, correct ಕೊಡುವ ಕೆಲಸವನ್ನು ಮಾಡುತ್ತೇವೆ. ಅದನ್ನು ಹೇಳುವುದಕ್ಕೋಸ್ಕರ ಹೇಳುತ್ತಿದ್ದೇನೆ ಕಾರಜೋಳರವರೇ, ಆಗಬಹುದಲ್ಲವೇ? ಆಮೇಲೆ ಟ್ರಾನ್ಸ್‌ಫಾರ್ಮರ್‌ಗಳಿಲ್ಲವೆಂದು ಹೇಳುತ್ತಾರೆ. ಅದಕ್ಕೆ ನಾನು ನಿನ್ನೆ ಹೇಳಿದ್ದೇನೆ.. . . . .

ಶ್ರೀ ಗೋವಿಂದ ಎಂ.ಕಾರಜೋಳ : ಸರ್, ಅದು ಬೇಗನೆ ಆಗಬೇಕು. ಏಕೆಂದರೆ, ...

ಅಧ್ಯಕ್ಷರು : Time ಆಗುತ್ತಿದೆ ರೀ, ಆಮೇಲೆ ಬೇಕಾದರೆ ಕೇಳುವಿರಂತೆ.

ಶ್ರೀ ಗೋವಿಂದ ಎಂ.ಕಾರಜೋಳ : ಸರ್, electrification ಬೇಗ ಆಗಬೇಕಷ್ಟೇ.

ಶ್ರೀ ಸಿದ್ದರಾಮಯ್ಯ : ಹೇಳುತ್ತೇನೆ. ಮಾಡಿಸೋಣ. ಈ ರೀತಿ ಎದ್ದು ಬಿಟ್ಟರೆ ಹೇಗೆ ಉತ್ತರ ಕೊಡುವುದು?

ಅಧ್ಯಕ್ಷರು : ರುದ್ರೇಶ್ ಗೌಡರೇ, ಕುಳಿತುಕೊಳ್ಳಿ. ಈಗ ಆಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : ನನ್ನ reply complete ಆಗಿಲ್ಲ. ನೀವು ಮಧ್ಯ ಮಧ್ಯ ಈ ರೀತಿ ಎಲ್ಲಾ ಎದ್ದು ಬಿಟ್ಟರೆ disturb ಆಗುತ್ತೇನೆ.

ಶ್ರೀ ಮಾನಪ್ಪ ಡಿ.ವಜ್ಜಲ್ : 2 ವರ್ಷಗಳಿಂದ ಬೋರ್‌ವೆಲ್ ಮಂಜೂರು ಆಗಿರುವುದನ್ನು ಕೊರೆದಿಲ್ಲ.

ಶ್ರೀ ಅಪ್ಪಾಜಿ ಎಸ್.ನಾಡಗೌಡ: ಒಂದೇ ಒಂದು clarification ಹೇಳುತ್ತೇನೆ. ಏನಾಗಿದೆಯೆಂದರೆ, estimate ಮೀರಿತೆಂದರೆ electrification ಆಗುತ್ತಿಲ್ಲ. ಯಾರು beneficiary ಗಳಿದ್ದಾರೆ, ಅವರು ಕೈಯಿಂದ ಹಣ ಕಟ್ಟಬೇಕು. ಅವರು ಬಡವರಿದ್ದಾರೆ, ಅವರಿಗೆ ಸಾಧ್ಯವಾಗುತ್ತಿಲ್ಲ. ಅವರಿಗೆ ಸುಮಾರು 1 ಲಕ್ಷ 2 ಲಕ್ಷ ಪುನಃ additional estimate ಮಾಡಿ ಸಹ ಕೆ.ಇ.ಬಿ.ಯವರು line ಮಾಡುವುದಕ್ಕೆ ಕಳುಹಿಸಿ ಕೊಡುತ್ತಾರೆ. ಅದಕ್ಕೆ ಬಹಳ ಕಡೆ ಸಮಸ್ಯೆಯಾಗಿದೆ, ಇದು ಒಂದು. ಆಮೇಲೆ ಇದನ್ನೆಲ್ಲಾ contractorsಗೆ entrust ಮಾಡಿದ್ದಾರೆ. Contractors ಗಳಿಗೆ entrust ಮಾಡಿರುವುದರಿಂದ ಬಹಳ ಕಡೆ ಅವರು ವಿಫಲರಾಗಿದ್ದಾರೆ. ಅವರು ಬಹಳ ಕಡೆ work execute ಮಾಡುತ್ತಿಲ್ಲ. ದಯವಿಟ್ಟು ಇದು ಶೀಘ್ರದಲ್ಲಿ ಆಗುವುದಕ್ಕೆ ಈ 2 ಅಂಶಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಈಗ, ಅವರು ಪಾಲಿಸಿಯನ್ನು ಹೇಳುತ್ತಿದ್ದಾರೆ. ಈ detailsನ್ನು ಇಲಾಖೆ ಜೊತೆ discussion ಮಾಡಿದಾಗ ಹೇಳಿದರೆ the concerned minister will answer.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, 31,000ವನ್ನೂ ಕೂಡಾ ಈ ವರ್ಷವೇ ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಎರಡನೆಯದಾಗಿ, ಟ್ರಾನ್ಸ್‌ಫಾರ್ಮರ್‌ಗಳಿಂದ ಬಹಳ ತೊಂದರೆಯಾಗಿರುವು ನಿಜ. ಅವುಗಳನ್ನು

exchange ಮಾಡುವುದರಲ್ಲಿ ಬಹಳ ವಿಳಂಬವಾಗುತ್ತಿದೆ. ಪದೇ ಪದೇ ಸುಟ್ಟು ಹೋಗುತ್ತಿವೆ. ಏಕೆಂದರೆ, ಪಂಪುಸೆಟ್ಟುಗಳು, ಕೆಲವರು unlawful ಆಗಿ ಮಾಡಿಕೊಂಡಿರುತ್ತಾರೆ, ಲೋಡ್ ಜಾಸ್ತಿಯಾಗುತ್ತದೆ. Over-load ಆಗುವುದರಿಂದ ಆಗಿಂದಾಗ್ಗೆ ಅವುಗಳೆಲ್ಲಾ ಸುಟ್ಟು ಹೋಗುತ್ತಿರುತ್ತವೆ. ಅದಕ್ಕೆ ಟ್ರಾನ್ಸ್‌ಫಾರ್ಮರ್‌ಗಳನ್ನು ಸಿಗಬೇಕೆಂದು ಎಲ್ಲಾ ತಾಲ್ಲೂಕು head-quarters ಮಟ್ಟದಲ್ಲಿ ಒಂದಷ್ಟು ಟ್ರಾನ್ಸ್‌ಫಾರ್ಮರ್ ಬ್ಯಾಂಕ್ ತರಹ ಮಾಡಿ, ಅಲ್ಲಿ stock ಇಡುವಂಥದ್ದು, ಕೊಂಡುಕೊಳ್ಳುವುದಕ್ಕೆ ನಿಧಾನವಾಗುತ್ತದೆಂದು ನಾನು Transparency Actಗೆ exemption ಕೊಟ್ಟಿದ್ದೇನೆ. ಟೆಂಡರ್ ಕರೆದು peocess ಆಗಿ ಬಹಳ ನಿಧಾನವಾಗುತ್ತದೆಂದು, ಸರ್ಕಾರಕ್ಕೆ ಸಮಯ ಬೇಕಾಗುವುದರಿಂದ, ಅದಕ್ಕೆ Transparency Act ನಿಂದ exemption ಕೊಟ್ಟಿದ್ದೇನೆ. ಸರ್ಕಾರದ ಸಂಸ್ಥೆಯಿಂದ ಕವಿಕಾದಿಂದ ತೆಗೆದುಕೊಳ್ಳುವುದು, ಅಲ್ಲಿ ಕೊಟ್ಟಿದ್ದೇವೆ. ಆದ್ದರಿಂದ ಟ್ರಾನ್ಸ್‌ಫಾರ್ಮರ್ ಗಳನ್ನು ಕೂಡಲೇ ಅವರಿಂದ ತೆಗೆದುಕೊಳ್ಳಬೇಕು ಮತ್ತು stock ಇಟ್ಟುಕೊಳ್ಳಬೇಕು. ಎಲ್ಲಿ ಕೆಟ್ಟು ಹೋಗುತ್ತವೆ, ಅಲ್ಲಿ ಕೂಡಲೇ ಬದಲಾವಣೆ ಮಾಡಬೇಕು. ಮತ್ತೊಂದು repairing centres, ಈ ಸೆಂಟರ್‌ಗಳು ಇಡೀ ರಾಜ್ಯದಲ್ಲಿ 72 ಮಾತ್ರ ಇವೆ. ಈಗ ಸದ್ಯಕ್ಕೆ ನಾನು 72 ರಿಂದ 100 ಸೆಂಟರ್ ಗಳನ್ನು ಮಾಡುವುದಕ್ಕೆ ಎಲ್ಲೆಲ್ಲಿ ಒತ್ತಡವಿದೆ, ಅಲ್ಲಿ ಮಾಡುವುದಕ್ಕೆ ಆದೇಶ ಕೊಟ್ಟಿದ್ದೇನೆ. ಅದರಿಂದ ಈ ಸಮಸ್ಯೆ ಟ್ರಾನ್ಸ್‌ಫಾರ್ಮರ್‌ಗಳು, ಕುಡಿಯುವ ನೀರಿನದ್ದು, ಮತ್ತೆ ಕುಡಿಯುವ ನೀರಿಗೆ priority ಮೇಲೆ ಮಾಡಬೇಕೆಂದು ಆದೇಶ ಕೊಟ್ಟಿದ್ದೇನೆ. Power ಉತ್ಪಾದನೆ ಬಗ್ಗೆ ಆಮೇಲೆ ಮಾತನಾಡುತ್ತೇನೆ. ಈಗ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವ ಕೆಲಸ ಮಾಡೋಣ. ನೀರಾವರಿ ಬಗ್ಗೆ ನಾವು ನಮ್ಮ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೇವೆ. ಇನ್ನು 5 ವರ್ಷಗಳಲ್ಲಿ ಯಾವ ಯಾವ pending project ಗಳಿವೆ. ಆ ಎಲ್ಲಾ ಬಾಕಿ ಯೋಜನೆಗಳನ್ನು ಮುಗಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಅದಕ್ಕಾಗಿ ಎಷ್ಟು ದುಡ್ಡಾದರೂ ಖರ್ಚಾಗಲಿ, ಪ್ರತಿ ವರ್ಷ ಸುಮಾರು 10,000 ಕೋಟಿ ರೂಪಾಯಿ ಖರ್ಚು ಮಾಡಬೇಕು. ಉಳಿದಿರುವ ಎಲ್ಲಾ pending project ಗಳಿರಬಹುದು, Upper Krishna ಇರಬಹುದು, ನಮ್ಮಲ್ಲಿ modernization, extension work, ಕಾವೇರಿ

ಇರಬಹುದು, ಕರ್ನಾಟಕ ನೀರಾವರಿ ನಿಗಮದಲ್ಲಿ ಇರಬಹುದು, ಇವೆಲ್ಲವನೂ ಸಹ ಮುಗಿಸಬೇಕೆಂದು ತೀರ್ಮಾನ ಮಾಡಿದ್ದೇವೆ. 5 ವರ್ಷಗಳಲ್ಲಿ ಅದನ್ನು ಮಾಡುತ್ತೇವೆ, submerge ಆಗುವಂಥವು, rehabilitation work ಆಗುವಂಥವು, Upper Krishna ದಲ್ಲಿ ಬರುವಂಥ ಈಗ177 ಟಿಎಂಸಿ. ನೀರು, ಏನು ಬ್ರಿಜೇಶ್ ಕುಮಾರ್ ರವರ ಆಯೋಗದಿಂದ ನಮಗೆ 177 ಟಿ.ಎಂ.ಸಿ. ನೀರು 2ನೇ ಟ್ರಿಬ್ಯುನಲ್‌ನಲ್ಲಿ ಸಿಕ್ಕಿದೆ, ಅದೆಲ್ಲವನೂ ಬಳಸಿಕೊಳ್ಳುವುದಕ್ಕೆ. ಅನುಕೂಲವಾಗುತ್ತದೆ.

ಅಧ್ಯಕ್ಷರು : ಆಮೇಲೆ ಕೇಳ್ರಿ, ಅವರು complete ಮಾಡಲಿ.

ಶ್ರೀ ಬಿ.ಆರ್.ಯಾವಗಲ್ : ಮಹದಾಯಿ ಯೋಜನೆಯದ್ದು . . . .

ಶ್ರೀ ಸಿದ್ದರಾಮಯ್ಯ : ಮಹದಾಯಿ ಯೋಜನೆಯದ್ದು stay ಇದೆ. ಆದ್ದರಿಂದ ಕೇಂದ್ರ ಸರ್ಕಾರದ ಜೊತೆ ಮಾತನಾಡಿ, stay vacate ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎನ್.ಹೆಚ್.ಕೋನೆರೆಡ್ಡಿ : ಸರ್, tribunal ಆಗಿದೆ. ಅದರ ಮೇಲೆ interim Order ತೆಗೆದುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇವೆ.

ಅಧ್ಯಕ್ಷರು: ಆಯಿತು.

ಶ್ರೀ ಸಿದ್ದರಾಮಯ್ಯ : ಆಯಿತು, ಕುಳಿತುಕೊಳ್ಳಿ ಕೋನರೆಡ್ಡಿಯವರೇ. . .

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಈ ಸಾರಿ ಸ್ವಲ್ಪ ಮಳೆ ಚೆನ್ನಾಗಿ ಆಗುತ್ತಿದೆ. 176 ತಾಲ್ಲೂಕುಗಳಲ್ಲಿ ಸುಮಾರು 160 ತಾಲ್ಲೂಕಿನಲ್ಲಿ ಮಳೆ ಬಿದ್ದಿದೆ. ಇನ್ನೂ ಬೇಕು. ಆದರೆ, ಜಲಾಶಯಗಳಿಗೆ ನೀರು ಬಂದಿಲ್ಲ. ಬಹುಶಃ ಇಷ್ಟೊಂದು ಜಲಾಶಯಗಳು ಬತ್ತಿ ಹೋದದ್ದು ಯಾವ ಕಾಲದಲ್ಲಿಯೂ ಕೂಡಾ ಇಲ್ಲ. ಎರಡು ವರ್ಷ ಮಳೆ ಇಲ್ಲದೆ ಬರಗಾಲ ಬಂದದ್ದರಿಂದ ಜಲಾಶಯಗಳು ಬತ್ತಿ ಹೋಗಿವೆ. ಬೋಪಯ್ಯರವರು ಇದ್ದಾರೆ. ಮಳೆ ಬರಲಿ ಎಂದು ಪೂಜೆ ಮಾಡಿಸಿ, ನಿಮ್ಮದೇ ಭಾಗಮಂಡಲ.

ಶ್ರೀ ಕೆ.ಜಿ.ಬೋಪಯ್ಯ : ರಸ್ತೆಗೆ ದುಡ್ಡು ಕೊಡಿ. ಪೂಜೆ ಮಾಡಿಸುತ್ತೇವೆ.

ಶ್ರೀ ಸಿದ್ದರಾಮಯ್ಯ : ಇಲ್ಲದಿದ್ದರೆ ಪೂಜೆ ಮಾಡಿಸುವುದಿಲ್ಲವೇನು? ದುಡ್ಡು ಕೊಡೋಣ. ಪೂಜೆ ಮಾಡುವುದಕ್ಕೆ condition ಹಾಕಬೇಡಿ. ಹಾಗೆ ಮಾಡಿದರೆ ದೇವರು ಒಪ್ಪುವುದಿಲ್ಲ.

ಶ್ರೀ ಕೆ.ಜಿ.ಬೋಪಯ್ಯ : ನೀವು ರಸ್ತೆಗೆ ದುಡ್ಡು ಕೊಟ್ಟರೆ ಮಳೆ ಬರುತ್ತದೆ.

ಶ್ರೀ ಸಿದ್ದರಾಮಯ್ಯ : ಹಾಗೆಲ್ಲಾ condition ನಲ್ಲಿ ಪೂಜೆ ಮಾಡಲು ಹೋಗಬೇಡಿ.

ಶ್ರೀ ಕೆ.ಜಿ.ಬೋಪಯ್ಯ : condition ನಲ್ಲಿಯೇ ಪೂಜೆ ಮಾಡುವುದು.

ಶ್ರೀ ಸಿದ್ದರಾಮಯ್ಯ : ಯಾಕೋ ನೀವು ನಮ್ಮ ವಿರುದ್ಧ ಇದ್ದ ಹಾಗೆ ಕಾಣುತ್ತಿದೆ.

ಶ್ರೀ ಕೆ.ಜಿ.ಬೋಪಯ್ಯ : ನಾವು ನೀರು ಕೊಡುತ್ತೇವೆ. ನಮ್ಮ ರಸ್ತೆಗಳನ್ನು ಸ್ವಲ್ಪ ನೋಡಿ. ಪೂಜೆ ಮಾಡೋಣ.

ಶ್ರೀ ಸಿದ್ದರಾಮಯ್ಯ : ನೋಡಿ ಕಂಡೀಷನ್ ಹಾಕಿ ಪೂಜೆ ಮಾಡುತ್ತಾರಂತೆ. ನೀವು ಪೂಜೆ ಮಾಡಲೇಬೇಡಿಯಪ್ಪ. ನಾವೇ ಬಂದು ಮಾಡುತ್ತೇವೆ.

ಶ್ರೀ ಕೆ.ಜಿ.ಬೋಪಯ್ಯ : ನೀವು ಪೂಜೆ ಮಾಡಿದರೆ ಆಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಸುಮ್ಮನೆ ತಮಾಷೆಗೆ ಹೇಳಿದೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ : ಈಗ ನಾವು ಪೂಜೆ ಮಾಡಿ ಮಳೆ ಬರುವ ಹಾಗೆ ಮಾಡುತ್ತೇವೆ. ನಮ್ಮ Catchment area ದುರಸ್ತಿ ಸ್ಥಿತಿಯಲ್ಲಿರುವ ರಸ್ತೆಗಳ ರಿಪೇರಿಗೆ ಪ್ರತಿ ವರ್ಷ ಇಷ್ಟು ಹಣ ಕೊಡುತ್ತೇವೆಂದು ಘೋಷಣೆ ಮಾಡಿ. 50 ಕೋಟಿ 100 ಕೋಟಿ ರೂ. ಕೊಡುತ್ತೇವೆಂದು ಹೇಳಿದರೆ ನಾವು ಪೂಜೆ ಮಾಡುತ್ತೇವೆ.

ಶ್ರೀ ಸಿದ್ದರಾಮಯ್ಯ : ನಾನು ಬಂದ ತಕ್ಷಣವೇ ಮಾನ್ಯ ಅಧ್ಯಕ್ಷರೆ, ಕೃಷ್ಣಾ ನದಿಯಲ್ಲಿ ನೀರು ಇರಲಿಲ್ಲ. ಮಹಾರಾಷ್ಟ್ರ ಮುಖ್ಯಮಂತ್ರಿಗಳೊಡನೆ ಮಾತನಾಡಿ, ಪತ್ರ ಬರೆದು ನೀರಾವರಿ ಮಂತ್ರಿಗಳನ್ನು ಕಳುಹಿಸಿ, ಅವರ ಜೊತೆಯಲ್ಲಿ ಸಿದ್ದು ನ್ಯಾಮಗೌಡ ಜೆ.ಟಿ.ಪಾಟೀಲ್ ಎಲ್ಲಾ ಹೋಗಿದ್ದರು. ಹುಕ್ಕೇರಿಯವರೂ ಕೂಡಾ ಹೋಗಿದ್ದರು. ಎಲ್ಲಾ ಮಾಡಿ ಈಗ ಒಂದೂವರೆ ಟಿ.ಎಂ.ಸಿ. ನೀರು ಬಿಟ್ಟಿದ್ದರಿಂದ ಆ ಭಾಗದ ಜನರಿಗೆ ಕುಡಿಯುವ ನೀರಿಗೆ, ದನಕರುಗಳಿಗೆ ಅನುಕೂಲವಾಗಿದೆ. ನಾನು ಈ ಸಂದರ್ಭದಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು

ಹೇಳಲಿಚ್ಛಿಸುತ್ತೇನೆ. ಅವರು ಒಂದೂವರೆ ಟಿ.ಎಂ.ಸಿ. ನೀರು ಬಿಟ್ಟು ಕೊಟ್ಟರು. ಇನ್ನು ನೀರಾವರಿ ಯೋಜನೆಗಳು ಯಾವ್ಯಾವುದು ಉಳಿದಿದೆ, whether it is Cauvery basin or Krishna basin. ಈ basin ನಲ್ಲಿರುವಂತಹ ಎಲ್ಲಾ ಯೋಜನೆಗಳನ್ನು ಎತ್ತಿನ ಹೊಳೆಯೂ ಕೂಡಾ. ಅದನ್ನೂ ಮಾಡೋಣ. ಚರ್ಚೆಯಾಗಿದೆಯಲ್ಲ. ಗೊತ್ತದೆ. ಶ್ರೀನಿವಾಸ್ ಕುಳಿತುಕೊಳ್ಳಿ. ಮಾನ್ಯ ಅಧ್ಯಕ್ಷರೆ, ಎತ್ತಿನ ಹೊಳೆಯದನ್ನೂ ಕೂಡಾ ಮಾಡೋಣ. ಡಾ: ಪರಮಶಿವಯ್ಯ ರವರ ವರದಿ, ಇನ್ನೊಂದು Upper Bhadra ಇವೆಲ್ಲಾ ಕೂಡಾ ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ನೀರಾವರಿ ಯೋಜನೆಗಳು. ಯಾವ್ಯಾವುದನ್ನು ಈಗ ಪ್ರಸ್ತಾಪ ಮಾಡಿದ್ದೇವೆ, ಯಾವ್ಯಾವುದು pending ಇದೆ, ಯಾವುದು ಪ್ರಾರಂಭವಾಗಿದೆ. ಇನ್ನೂ ಆಗಬೇಕಾಗಿದೆ, ಇವೆಲ್ಲವನ್ನೂ ಕೂಡಾ 5 ವರ್ಷಗಳಲ್ಲಿ ಪ್ರಾಮಾಣಿಕವಾಗಿ ಮುಗಿಸಲು . . .

ಶ್ರೀ ಮಾನಪ್ಪ ಡಿ.ವಜ್ಜಲ್ : ನಂದವಾಡಗಿಯಲ್ಲಿ ಒಂದೂವರೆ ವರ್ಷದ ಹಿಂದೆ ಬಜೆಟ್‌ನಲ್ಲಿ ಘೋಷಣೆ ಆಗಿದೆ. ಇದುವರೆಗೂ ಪ್ರಾರಂಭವಾಗಿಲ್ಲ.

ಅಧ್ಯಕ್ಷರು : ಹೇಳುತ್ತಾರೆ.

ಶ್ರೀ ಸಿದ್ದರಾಮಯ್ಯ : ಈಗ ಎಲ್ಲವನ್ನೂ ನಾನು detail ಆಗಿ ಹೇಳುತ್ತಿಲ್ಲ.

ಅಧ್ಯಕ್ಷರು : ಐದು ವರ್ಷದಲ್ಲಿ ಎಲ್ಲವನೂ ಪೂರ್ತಿ ಮಾಡುತ್ತೇವೆ ಎಂದರೆ ಅರ್ಥ ಎಲ್ಲಾ ಒಂದೇ.

ಶ್ರೀ ಸಿದ್ದರಾಮಯ್ಯ : ಒಟ್ಟಾರೆಯಾಗಿ ಹೇಳುತ್ತಿದ್ದೇನೆ. ಐದು ವರ್ಷದಲ್ಲಿ ಕನಿಷ್ಟ 10 ಸಾವಿರದಷ್ಟು ಕೋಟಿ ಹಣವನ್ನು ಖರ್ಚು ಮಾಡಿ ನೀರಾವರಿಗೆ ಅದನ್ನು ಮುಗಿಸುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತೇವೆಂಬ ಮಾತನ್ನು ಹೇಳಲಿಚ್ಛಿಸುತ್ತೇನೆ. ವಿದ್ಯುಚ್ಛಕ್ತಿ ಸಮಸ್ಯೆ ಈಗ ಕರ್ನಾಟಕದಲ್ಲಿ ಬಹಳ ಇದೆ. ಕೆಲವು projects ಈಗಾಗಲೇ pipeline ನಲ್ಲಿವೆ. ಅವೆಲ್ಲಾ ಬರಬೇಕಾದರೆ 2016-17 ನೇ ಇಸವಿ ಆಗುತ್ತದೆ. ಅಲ್ಲಿರುವರೆಗೆ ಹೇಗೆ manage ಮಾಡಬೇಕೆಂಬುದು. ನಾನು ಬಂದ ತಕ್ಷಣ ಅದಕ್ಕೆ ಹಗಲು ಹೊತ್ತು 4 ಗಂಟೆ ವಿದ್ಯುತ್‌ಅನ್ನು 3 ಫೇಸ್ ನಲ್ಲಿ ಮತ್ತು ರಾತ್ರಿ 2 ಗಂಟೆ ಕೊಡಿ ಎಂದು ಹೇಳಿದ್ದೇನೆ. ಇದನ್ನು ಹೆಚ್ಚಿಸಲು ಪ್ರಯತ್ನ ಮಾಡುತ್ತಿದ್ದೇವೆ. ಏಕೆಂದರೆ,

ಹಳ್ಳಿಗಾಡಿನಲ್ಲಿ ವಿದ್ಯುತ್ ಇಲ್ಲದೆ ಪಂಪ್‌ಸೆಟ್‌ಗಳು ಓಡದೆ ಕುಡಿಯುವ ನೀರಿಗೆ ತೊಂದರೆಯಾಗಿ ಬಹಳ ಜನರು ಕಷ್ಟಕ್ಕೆ ಸಿಕ್ಕಿಕೊಂಡಿದ್ದಾರೆ. ಅದಕ್ಕಾಗಿ ಇದನ್ನು ಹೆಚ್ಚು ಮಾಡಲು ಏನು ಮಾಡಬೇಕೆಂಬ ಪ್ರಯತ್ನವನ್ನು ಈ ಸಂದರ್ಭದಲ್ಲಿ ಸದನಕ್ಕೆ ಹೇಳಲಿಚ್ಚಿಸುತ್ತೇನೆ. ಅದನ್ನು ಮಾಡುತ್ತೇವೆ. ಏಕೆಂದರೆ, ಕಳೆದ 5 ವರ್ಷಗಳಲ್ಲಿ ಒಂದೇ ಒಂದು ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಕೂಡಾ ಆಗಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಏನು ಹೇಳುತ್ತೀರಿ?

ಶ್ರೀ ಸಿದ್ದರಾಮಯ್ಯ : ಎಲ್ಲಿ ಮಾಡಿದ್ದೀರಿ ಯಾವುದು ಮಾಡಿದ್ದೀರಿ ಎಂದು ಹೇಳಿ ಸ್ವಲ್ಪ.

ಶ್ರೀ ಬಿ.ಎಸ್.ಯಡಿಯೂರಪ್ಪ : 4,750 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆಯನ್ನು 4–5 ವರ್ಷದಲ್ಲಿ ಮಾಡಿಲ್ಲವೆಂದರೆ ಇವತ್ತಿನಿಂದ ನಾನು ಸದನದ ಒಳಗೆ ಬರುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಬೇಡ. ಅದು ಏಕೆ ಅಂತಹ ನಿರ್ಧಾರ ತೆಗೆದುಕೊಳ್ಳುತ್ತೀರಿ? ಒಂದು ಕೆಲಸ ಮಾಡಿ. ಯಾವ್ಯಾವುದು ಎಂದು ಹೇಳಿ ಯಡಿಯೂರಪ್ಪನವರೆ. ಎಲ್ಲೆಲ್ಲಿ ಮಾಡಿದ್ದೀರಿ?

ಶ್ರೀ ಬಿ.ಎಸ್.ಯಡಿಯೂರಪ್ಪ : ನಮ್ಮ 5 ವರ್ಷದ ಅವಧಿಯಲ್ಲಿ, ನಮ್ಮ period ನಲ್ಲಿ.

ಶ್ರೀ ಸಿದ್ದರಾಮಯ್ಯ : ಅಲ್ಲ. ನಿಮ್ಮ ಅವಧಿಯಲ್ಲಿಯೇ ಯಾವುದು ಆಗಿದೆ ಎಂದು ಹೇಳಿ. ನಮಗೂ ಗೊತ್ತಾಗಬೇಕಲ್ಲ? ನನಗೆ ಗೊತ್ತಿಲ್ಲ.

ಅಧ್ಯಕ್ಷರು : ನಂತರ ಹೇಳುತ್ತಾರೆ ಬಿಡಿ. ಸುಮ್ಮನೆ ಏಕೆ ?

ಶ್ರೀ ಜಗದೀಶ್ ಶೆಟ್ಟರ್ : ನಮ್ಮ ಬಳಿ ಮಾಹಿತಿ ಇದೆ. ಹೇಳು ಎಂದರೆ ಹೇಳುತ್ತೇವೆ. ನಾವು ಅದಕ್ಕೂ ತಯಾರಿದ್ದೇವೆ. ನಾನು ಆಗಿನಿಂದಲೂ ಏನಾದರೂ specific ಆಗಿ ಹೇಳಿ ಎಂದು ಹೇಳುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : ಸಾರ್ವಜನಿಕ ವಲಯದಲ್ಲಿ ಎಷ್ಟು ಎಂದು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ಸುಮ್ಮನೆ 5 ವರ್ಷದಲ್ಲಿ ಏನೂ ಆಗಿಲ್ಲ ಎಂದರೆ.

ಶ್ರೀ ಸಿದ್ದರಾಮಯ್ಯ : ಸಾರ್ವಜನಿಕ ವಲಯದಲ್ಲಿ ಎಷ್ಟು ಎಂದು ಹೇಳಿ.

(ಗೊಂದಲ)

ಅಧ್ಯಕ್ಷರು : clarification ಬೇಕಾದರೆ ನಂತರ ಕೇಳಿರಿ.

ಶ್ರೀ ಜಗದೀಶ್ ಶೆಟ್ಟರ್ : ಅಂಕಿ ಸಂಖ್ಯೆ ಸರಿಯಾಗಿರಬೇಕಲ್ಲ? ನಿಮ್ಮ ಸರ್ಕಾರದ ನೀರಾವರಿ ಬಗ್ಗೆ ಹೇಳಿ. ನೀವು 5 ವರ್ಷ ಏನು ಮಾಡುತ್ತೀರಾ ಎಂದು ಹೇಳಿ.

ಅಧ್ಯಕ್ಷರು : ಅವರು ಪೂರ್ತಿ ಹೇಳುವವರೆಗೆ ಕೇಳ್ರಿ.

ಶ್ರೀ ಸಿದ್ದರಾಮಯ್ಯ : ಜಗದೀಶ್ ಶೆಟ್ಟರ್ ರವರೆ, ಏಕೆ ಹೀಗೆ ಮೈ ಮೇಲೆ ಬೀಳುತ್ತೀರಿ?

ಶ್ರೀ ಹೆಚ್.ಸಿ.ಬಾಲಕೃಷ್ಣ : ಮುಖ್ಯಮಂತ್ರಿಗಳು ಈ challenge ಅನ್ನು ಸ್ವೀಕಾರ ಮಾಡಬೇಕು.

ಶ್ರೀ ಸಿದ್ದರಾಮಯ್ಯ : ಈಗ Economic Survey ತರಿಸುತ್ತಿದ್ದೇನೆ. ಅದರಲ್ಲಿ ಸಾರ್ವಜನಿಕ ವಲಯದಲ್ಲಿ ನೀವು 4,750 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಿದ್ದೇವೆ ಎಂದು ಹೇಳಿದರೆ,

ಶ್ರೀ ಜಗದೀಶ್ ಶೆಟ್ಟರ್ : ಒಟ್ಟು ನಮ್ಮ ಅವಧಿಯಲ್ಲಿ .. .

ಶ್ರೀ ಬಿ.ಎಸ್.ಯಡಿಯೂರಪ್ಪ : ಒಟ್ಟಾರೆ ನನ್ನ ಅವಧಿಯಲ್ಲಿ, ಹಿಂದೆ ಇದ್ದಂತಹ ವಿದ್ಯುತ್ ಜೊತೆಗೆ ಯೂನಿಟ್‌ಗೆ ಸುಮಾರು 4,750, –5,000 ಮೆಗಾ ವ್ಯಾಟ್ ವಿದ್ಯುತ್ ಸೇರಿಸಿದ್ದೇವೆ ಒಟ್ಟು ಇಲ್ಲವೆಂದರೆ ನೀವು ಹೇಳಿದ ಹಾಗೆ ಕೇಳುತ್ತೇವೆ.

ಅಧ್ಯಕ್ಷರು : ಎಲ್ಲಿಂದ ಬಂತು ಹಾಗಾದರೆ? ಯಾವ ಹೊಸ ಪ್ರಾಜೆಕ್ಟ್ ಆಗಿದೆ?

ಶ್ರೀ ಸಿದ್ದರಾಮಯ್ಯ : ಖಾಸಗಿಯದನ್ನು ಹೇಳುತ್ತಿದ್ದಾರೆ ಅವರು.

(ಗೊಂದಲ)

ಅಧ್ಯಕ್ಷರು : ಮಾತನಾಡಿ, ರೇವಣ್ಣ, ವಿದ್ಯುತ್‌ದು ಇದು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಸಿದ್ದರಾಮಣ್ಣನವರು ಹೇಳಿದ್ದು ನೂರಕ್ಕೆ ನೂರು ಸತ್ಯ ಸರ್, ನೂರಕ್ಕೆ ನೂರು ಸತ್ಯ ಎಂದು ಹೇಳುತ್ತಿದ್ದೇನೆ. ಐದು ವರ್ಷದಲ್ಲಿ ಯಾವುದೂ ಹೊಸದಾಗಿ ಮಾಡಿಲ್ಲ. ನಾನು, ಸಿದ್ದರಾಮಣ್ಣನವರು ಇದ್ದಾಗ ನಾಗಾರ್ಜುನದಲ್ಲಿ 1250 ಮೆಗಾ ವ್ಯಾಟ್ ಖಾಸಗಿಯಲ್ಲಿ ಮಾಡಿದ್ದು ಒಂದು. ಅದನ್ನು ಬಿಟ್ಟರೆ ಬಳ್ಳಾರಿ ಮೊದಲನೇ ಹಂತ

500, ಬಳ್ಳಾರಿ 2ನೇ ಹಂತ 500 ಮತ್ತು ವರಾಹಿ 280, ರಾಯಚೂರು eighth ಯೂನಿಟ್ 350 ಇದಿಷ್ಟು ನಮ್ಮ ಕಾಲದಲ್ಲಿ ಆಗಿದ್ದು, ನಂತರ ಆಗಿಲ್ಲವೆಂದು ಘಂಟಾಘೋಷವಾಗಿ ಹೇಳುತ್ತೇನೆ. ಸಭೆಗೆ facts and figures ಬೇಕಾದರೆ ಕೆ.ಪಿ.ಸಿ.ಎಲ್. ನಿಂದ ಮಾಹಿತಿ ತರಿಸಿ. ಪಾಪ! ಯಡಿಯೂರಪ್ಪನವರಿಗೆ ತಪ್ಪು ಮಾಹಿತಿ ಕೊಟ್ಟಿದ್ದಾರೆ. ಅವರು ಬೇಜಾರು ಮಾಡಿಕೊಳ್ಳುವುದು ಬೇಡ.

ಅಧ್ಯಕ್ಷರು : ಆಯಿತು. ನೀವು ಹೇಳಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಯಡಿಯೂರಪ್ಪನವರೆ, ಇದರ ಬಗ್ಗೆ ಏನೂ ಮಾತನಾಡುವುದಕ್ಕೆ ಹೋಗಬೇಡಿ. ಏಕೆಂದರೆ, ನಾನು ಬಹಳ ಸ್ಪಷ್ಟವಾಗಿ ಬಜೆಟ್ ಮೇಲೆ ಭಾಷಣ ಮಾಡುವಾಗ ಸರ್ಕಾರವೇ ಕೊಟ್ಟ Economic Survey ಯಿಂದ ಬಹಳ ಸ್ಪಷ್ಟವಾಗಿ ತೋರಿಸಿ ಹೇಳಿದ್ದೇನೆ. ಜಗದೀಶ್ ಶೆಟ್ಟರ್ ರವರು ಬಜೆಟ್ ಮಂಡಿಸುವ ಸಂದರ್ಭದಲ್ಲಿ ಹೇಳಿದ್ದೇನೆ. Economic Survey ನೀವು ಹೇಳುವುದು ಖಾಸಗಿಯದು. ನಿಮ್ಮ ಕಾಲದಲ್ಲಿ ಖಾಸಗಿಯಲ್ಲಿ wind power, thermal power ಯಾವ್ಯಾವುದೋ ಇತ್ತು, ಅದನ್ನು ಮಾಡಿದ್ದೇವೆಂದು ಹೇಳಿದ್ದೀರೇ ಹೊರತು ಸರ್ಕಾರದ ವತಿಯಿಂದ, ಕೆ.ಪಿ.ಸಿ.ಎಲ್ ನಿಂದ ಅಲ್ಲ. ಸ್ವಲ್ಪ ಆ ಪವರ್‌ದು ತೆಗೆಯಿರಿ. ಕೆ.ಪಿ.ಸಿ.ಎಲ್. ನಿಂದ ನೀವು ಒಂದೇ ಒಂದು ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಖಾಸಗಿಯಿಂದ ಮಾಡಿದ್ದು ಆಗುವುದಿಲ್ಲವೇನು?

ಶ್ರೀ ಸಿದ್ದರಾಮಯ್ಯ : ಇಲ್ಲಿ ಏನು ಬಂತು? ದುಡ್ಡು ಕೊಟ್ಟು ತೆಗೆದುಕೊಳ್ಳಬೇಕು ಖಾಸಗಿ ಯವರಿಂದ. ನೀವು ಏಕೆ ಮಾಡಲಿಲ್ಲ ಸರ್ಕಾರದಿಂದ ಏಕೆ ಮಾಡಲಿಲ್ಲ ಎಷ್ಟು ದುಡ್ಡು? ತೆಗೆದುಕೊಳ್ಳಬೇಕಲ್ಲ ಈಗ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವು pipeline ನಲ್ಲಿವೆ.

ಶ್ರೀ ಸಿದ್ದರಾಮಯ್ಯ : ಮತ್ತೇ ನಾನು ಅದನ್ನೇ ಹೇಳಿದ್ದು, pipeline ನಲ್ಲಿವೆ. ನೀವು ಒಂದನ್ನೂ ಮಾಡಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಹುಶಃ, ರಾಜ್ಯದ ಇತಿಹಾಸದಲ್ಲಿಯೇ ನಮ್ಮ ರಾಜ್ಯ ಬಿಟ್ಟು ಹೊರ ರಾಜ್ಯವಾದ ಛತ್ತೀಸ್‌ಗಢಕ್ಕೆ ಹೋಗಿ ಸುಮಾರು 500

ಕೋಟಿ ರೂ.ಗಳನ್ನು ಖರ್ಚು ಮಾಡಿ, ಭೂಮಿ ಖರೀದಿಸಿ ವಿದ್ಯುತ್ ಉತ್ಪಾದನೆ ಮಾಡಲು ಪ್ರಾರಂಭಿಸಿದೆವು. ಅದಕ್ಕೆ ನೀವು ಕಲ್ಲಿದ್ದಲನ್ನೂ ಕೊಡಲಿಲ್ಲ. ಇದನ್ನು ನೀವು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಎಕನಾಮಿಕ್ ಸರ್ವೆಯನ್ನು ಓದಿ ಹೇಳುತ್ತೇನೆ. ಖಾಸಗಿಯಿಂದ ಎಷ್ಟು ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆಯಾಯಿತು? ಸರ್ಕಾರದಿಂದ ನೀವು ಎಷ್ಟು ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಮಾಡಿದ್ದೀರಿ? ಎಂಬುದನ್ನೆಲ್ಲಾ ಹೇಳುತ್ತೇನೆ. ಖಾಸಗಿಯವರು ವಿದ್ಯುತ್ ಉತ್ಪಾದನೆ ಮಾಡಿದರೆ ನೀವು ಮಾಡಿದಂತಾಗುತ್ತದೆಯೇ? ನಿಮ್ಮ ಸರ್ಕಾರವಿದ್ದಾಗ ನೀವು ಒಂದೇ ಒಂದು ಮೆಗಾವ್ಯಾಟ್‌ನಷ್ಟೂ ವಿದ್ಯುತ್ ಉತ್ಪಾದನೆ ಮಾಡಲಿಲ್ಲ. ಬಳ್ಳಾರಿಯಲ್ಲಿ ವಿದ್ಯುತ್ ಉತ್ಪಾದನೆ ಮಾದಲೇ ಪ್ರಾರಂಭವಾಗಿತ್ತು. ಅದೇ ರೀತಿ ರಾಯಚೂರಿನಲ್ಲೂ eight unit ಮೊದಲೇ ಆಗಿತ್ತು. ಮೊದಲೇ ಆಗಿರುವುದನ್ನೆಲ್ಲ ನಿಮ್ಮ ಲೆಕ್ಕಕ್ಕೆ ತೆಗೆದುಕೊಂಡರೆ ಹೇಗೆ?

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಬಿ.ಆರ್. ಯಾವಗಲ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

ಆದುದರಿಂದ, ನಾನು ಈ ಕುರಿತಾದ ಜಿಜ್ಞಾಸೆಗೆ ಹೋಗುವುದಿಲ್ಲ. ನಿಮ್ಮ ಕಾಲದಲ್ಲಿ ವಿದ್ಯುತ್ ಉತ್ಪಾದನೆ ಆಗಿಲ್ಲವೆನ್ನುವುದು ಸತ್ಯ. 1 ಮೆಗಾವ್ಯಾಟ್‌ನಷ್ಟು ವಿದ್ಯುತ್ ಉತ್ಪಾದನೆ ಮಾಡಲಿಲ್ಲ. ಛತ್ತೀಸ್‌ಗಢ, ಕೂಡಗಿ, ಯರಮರಸ್ ಇರಬಹುದು, ಪೈಪ್‌ಲೈನ್‌ನಲ್ಲಿರುವ ಇವೆಲ್ಲವೂ ಆಗಬೇಕಾಗುತ್ತದೆ. 2012 ಅಕ್ಟೋಬರ್‌ವರೆಗೆ ವಿದ್ಯುತ್ ಉತ್ಪಾದನೆ ಎಷ್ಟಾಗಿದೆ ಎಂಬುದನ್ನು ನಾನು ಓದಿ ಹೇಳುತ್ತೇನೆ. ಜಲ ವಿದ್ಯುತ್‌ಗೆ ಸಂಬಂಧಿಸಿದಂತೆ 2008–09ರಲ್ಲಿ 3637 ಮೆಗಾವ್ಯಾಟ್, ನೀವು(ಬಿ.ಎಸ್.ಯಡಿಯೂರಪ್ಪ) ಅದೇ ವರ್ಷ ಅಧಿಕಾರಕ್ಕೆ ಬಂದಿದ್ದು ಮತ್ತು ಮುಖ್ಯಮಂತ್ರಿಯಾದದ್ದು. 2009–10ರಲ್ಲಿ 3037 ಮೆಗಾವ್ಯಾಟ್, 2010–11ರಲ್ಲಿ 3652 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗಿದೆ. ಅಂದರೆ, 15 ಮೆಗಾವ್ಯಾಟ್‌ಗಳಷ್ಟು ಹೆಚ್ಚಾಗಿದೆ. ಅನಂತರ, 2011–12ರಲ್ಲಿ 3656 ಮೆಗಾವ್ಯಾಟ್, 2012–13ರಲ್ಲಿ 3556 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗಿದೆ. ವಿದ್ಯುತ್ ಉತ್ಪಾದನಾ ಪ್ರಮಾಣ ಹೆಚ್ಚಾಗಲಿಲ್ಲ. ಇನ್ನು ಪವನಶಕ್ತಿ ಉತ್ಪಾದನೆ ಕುರಿತು ಹೇಳುವುದಾದರೆ, 2008–09ರಲ್ಲಿ 5 ಮೆಗಾವ್ಯಾಟ್, 2012–13ರಲ್ಲೂ 5 ಮೆಗಾವ್ಯಾಟ್ ಅಷ್ಟೇ ಇದೆ. ಶಾಖೋತ್ಪನ್ನದಲ್ಲಿ

2008–09ರಲ್ಲಿ 1970 ಮೆಗಾವ್ಯಾಟ್, 2009–10ರಲ್ಲಿ 1970 ಮೆಗಾವ್ಯಾಟ್, 2010–11ರಲ್ಲಿ 2220 ಮೆಗಾವ್ಯಾಟ್. ಪ್ರಸಕ್ತ ವರ್ಷದಲ್ಲಿ 500 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗಿದೆ. ಇದು ಯಾವುದೆಂದರೆ ಬಳ್ಳಾರಿಯದು. ಇದು ನೀವೇ ಕೊಟ್ಟಿರುವ ಎಕನಾಮಿಕ್ ಸರ್ವೆಯಲ್ಲಿರುವ ಅಂಕಿ–ಅಂಶಗಳು. ಅನಂತರ, ಡೀಸೆಲ್ ವಿದ್ಯುತ್ ಘಟಕಗಳ ಮೂಲಕ 128, 108, 108, 108, 108 ಇಷ್ಟು ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ವರ್ಷದಿಂದ ವರ್ಷಕ್ಕೆ ಉತ್ಪಾದನೆಯಾಗಿದೆ. 2008–09ರಲ್ಲಿ 5740 ಮೆಗಾವ್ಯಾಟ್‌ಗಳಿದ್ದುದು ನಂತರ 5776 ಮೆಗಾವ್ಯಾಟ್‌ಗಳಷ್ಟಾಯಿತು. ಹಿಂದಿನ ವರ್ಷಗಳಲ್ಲಿ 5991, 6523, 500 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗಿದೆ. 700 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಉತ್ಪಾದನೆ ಸೇರಿದ್ದು ಬಿಟ್ಟರೆ ಮತ್ತು ಹಳೆಯದೆಲ್ಲವನ್ನೂ ಹೊರತುಪಡಿಸಿದರೆ ಹೊಸದಾಗಿ ಎಲ್ಲಿ ವಿದ್ಯುತ್ ಉತ್ಪಾದಿಸಿದ್ದೀರಿ? ಇದನ್ನು ನಾನು ಬೇಕೆಂದು ಹೇಳಿದ್ದೇನೆಯೇ? ನಾನು ಎಕನಾಮಿಕ್ ಸರ್ವೆಯನ್ನು ಓದಿ ಹೇಳಿದ್ದು. ಇದನ್ನು ಜಗದೀಶ್ ಶೆಟ್ಟರ್‌ರವರೇ ಓದಿಕೊಳ್ಳಲಿ. ಇದನ್ನೆಲ್ಲಾ ನೀವೇ ಬರೆದುಕೊಟ್ಟಿರುವುದು. ನನ್ನ ಸ್ಟೇಟ್‌ಮೆಂಟ್ ಏನೆಂದರೆ, ಸರ್ಕಾರ ಹೊಸದಾಗಿ ವಿದ್ಯುತ್ ಉತ್ಪಾದನೆ ಮಾಡಲಿಲ್ಲವೆಂದು ಹೇಳಿದ್ದೇನೆಯೇ ಹೊರತು I am not mincing the words. ನೀವು ಕಳೆದ ಐದು ವರ್ಷಗಳಲ್ಲಿ ಸರ್ಕಾರದ ವತಿಯಿಂದ, ಕೆ.ಪಿ.ಸಿ.ಎಲ್. ವತಿಯಿಂದ 1 ಮೆಗಾವ್ಯಾಟ್‌ನಷ್ಟೂ ವಿದ್ಯುತ್ ಉತ್ಪಾದನೆ ಮಾಡಲಿಲ್ಲ. That is my statement. That is the report in the Economic Survey. It is not a question of interpretation. It is a proved fact, need not be proved. ಸುಮ್ಮನೆ ಇದೆಲ್ಲಾ ಯಾಕೆ? ಇರುವುದನ್ನು ಒಪ್ಪಿಕೊಳ್ಳಬೇಕು. ನಮಗೆ ವಿದ್ಯುತ್ ಉತ್ಪಾದನೆ ಮಾಡುವುದಕ್ಕಾಗಿಲ್ಲವೆಂದು ಹೇಳಬೇಕು, ಅಷ್ಟೇ. ಆ ಪರಿಸ್ಥಿತಿಯಿಂದ ನಾವು ಇಂದು ಈ ಪರಿಸ್ಥಿತಿಗೆ ಬಂದು ತಲುಪಿದ್ದೇವೆ. ನೀವು ಕೋಟಿಗಟ್ಟಲೆ ವಿದ್ಯುತ್ ಖರೀದಿಸಿದ್ದೀರಿ, ನಾನು ಇಲ್ಲವೆಂದು ಹೇಳುವುದಿಲ್ಲ. ತಾವು ಹೆಚ್ಚು ಹಣ ಕೊಟ್ಟು ವಿದ್ಯುತ್ ಖರೀದಿಸಿದ್ದೀರಿ. ಅದೆಲ್ಲವನ್ನೂ ಈಗ ಪ್ರಸ್ತಾಪಿಸಲು ಹೋಗುವುದಿಲ್ಲ. ಯಾವುದು ಫ್ಯಾಕ್ಟ್ ಇದೆಯೋ, ಅಷ್ಟು ಮಾತ್ರ ಹೇಳಿದ್ದೇನೆ. ರಾಜ್ಯದಲ್ಲಿ ವಿದ್ಯುತ್ ಕೊರತೆ ಇರಬೇಕಾದರೆ, ಇದೂ ಕೂಡ ಕಾರಣ ಎಂಬುದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಅದಕ್ಕೋಸ್ಕರ, ಎನಾಮಿಕ್ ಸರ್ವೆ ಕುರಿತಂತೆ ಬಜೆಟ್ ಮೇಲೆ ಮಾತನಾಡುವಾಗ ಈ ವಿಷಯವನ್ನು ಜಗದೀಶ್ ಶೆಟ್ಟರ್ ಅವರಿಗೆ ಹೇಳಿದ್ದೆ. ಅದನ್ನು ಜ್ಞಾಪಕವಿರಿಸಿಕೊಂಡು ಈಗ ಹೇಳಿದ್ದಾನೆ. ಎಕನಾಮಿಕ್ ಸರ್ವೆ ಕಳೆದ ವರ್ಷದ್ದು. ಇದು ಹಳೆಯದಲ್ಲ. ಈ ವರ್ಷದ ಪ್ರಾರಂಭದಲ್ಲಿ ನೀವು ಬಜೆಟ್‌ನಲ್ಲಿ ಮಂಡಿಸಿರುವ ಎಕನಾಮಿಕ್ ಸರ್ವೆ ಇದಾಗಿದೆ. ಆದುದರಿಂದ ವಿದ್ಯುತ್ ಸಮಸ್ಯೆ ಬಗೆಹರಿಸಲು ನಮ್ಮ ಸರ್ಕಾರ ಇನ್ನು ಮುಂದೆ ಪ್ರಾಮಾಣಿಕ ಪ್ರಯತ್ನ ಮಾಡುತ್ತದೆಂಬ ಮಾತುಗಳನ್ನು ಹೇಳಬಯಸುತ್ತೇನೆ. ಏಕೆಂದರೆ, ಪ್ರಸ್ತುತ ರಾಜ್ಯಕ್ಕೆ ಸುಮಾರು 12,000 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ಬೇಕಾಗುತ್ತದೆ. ಕೂಡಗಿ, ಯರಮರಸ್, ಛತ್ತೀಸಗಢ ಇವೆಲ್ಲವೂ ಸೇರಿ ಪೈಪ್‌ಲೈನ್ ನಲ್ಲಿರುವುದಲ್ಲವೂ ಅದಲ್ಲಿ, ನಮಗೆ ಸಾಕಾಗುವಷ್ಟು ವಿದ್ಯುತ್ ಸಿಗಬಹುದು.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪನವರು ಪೀಠವನ್ನು ಅಲಂಕರಿಸಿದರು.)

ನಾನು ಏಕೆ ಈ ವಿಷಯವನ್ನು ಪ್ರಸ್ತಾಪಿಸಿದೆ ಎಂದರೆ, ನೀವು ಸಣ್ಣ ಸಣ್ಣ ಥರ್ಮಲ್ ಯೂನಿಟ್, ಹೈಡೆಲ್ ಪ್ರಾಜೆಕ್ಟ್‌ಗಳನ್ನಾದರೂ ಪ್ರಾರಂಭಿಸಿ ವಿದ್ಯುತ್ ಉತ್ಪಾದಿಸಿದ್ದರೆ ಅನುಕೂಲವಾಗುತ್ತಿತ್ತು. ಆ ಪ್ರಯತ್ನಗಳನ್ನು ಇವರು ಮಾಡಲಿಲ್ಲ. ಹಾಗಾಗಿ, ಇವತ್ತು ವಿದ್ಯುತ್ ವಲಯದಲ್ಲಿ ಇಷ್ಟೊಂದು ಸಮಸ್ಯೆ ಎದುರಿಸಬೇಕಾಗಿದೆ. ದುಬಾರಿ ಹಣ ಕೊಟ್ಟು ವಿದ್ಯುತ್ ಖರೀದಿಸಬೇಕಾದ ಪರಿಸ್ಥಿತಿ ಬಂದಿದೆ.

ಅಧ್ಯಕ್ಷರು : ಖಾಸಗಿ ವಿದ್ಯುತ್ ಉತ್ಪಾದಕರಿಗೆ ಹೈಕೋರ್ಟ್ ಸ್ಟೇ ನೀಡಿದ್ದು, ಸ್ಟೇ ವೆಕೇಶನ್‌ಗೆ ಅವರು ಮುಂದಾಗಿಲ್ಲವೆಂದು ಹೇಳುತ್ತಿದ್ದಾರೆ. ಆದುದರಿಂದ, ಸ್ಟೇ ವೆಕೇಶನ್ ಬಗ್ಗೆ ತಾವು ಸ್ವಲ್ಪ ಗಮನಹರಿಸಬೇಕು.

ಶ್ರೀ ಸಿದ್ದರಾಮಯ್ಯ : ಅದರ ಬಗ್ಗೆ ಕಾನೂನು ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಮಾತನಾಡುತ್ತೇನೆ. ಅನಂತರ, ಮಾನ್ಯ ಯಡಿಯೂರಪ್ಪನವರು ಇನ್ನೊಂದು ಮಾತನ್ನು ಹೇಳಿದ್ದಾರೆ. 'ಸಿದ್ದರಾಮಯ್ಯನವರು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು' ಎಂದು ಹೇಳಿದ್ದಾರೆ. ಸದನದ ಹೊರಗಡೆ ನಾನು ಒಂದು ಸ್ಟೇಟ್‌ಮೆಂಟ್ ಮಾಡಿದ್ದೆ. ಅದೇನೆಂದರೆ, 'ಹಿಂದಿನ ಸರ್ಕಾರದಲ್ಲಿ ಅನೇಕ ಚರ್ಚ್‌ಗಳ ಮೇಲೆ ದಾಳಿಗಳಾಗಿ, ಕೋಮು ಗಲಭೆಗಳಾಗಿ, ಹೋಮ್ ಸ್ಟೇ ಗಲಾಟೆಗಳು, ರೇವ್ ಪಾರ್ಟಿ

ಗಲಾಟೆಗಳು, ಕ್ಲಬ್ ಮೇಲಿನ ದಾಳಿ, ಇನ್ನಿತರ ಘಟನೆಗಳಾದಾಗ, ಅಲ್ಪಸಂಖ್ಯಾತರಲ್ಲಿ ಒಂದು ರೀತಿಯ ಆತಂಕ ಮೂಡಿದ್ದು, ಅವರಿಗೆ sense of security ಬರಬೇಕೆನ್ನುವುದು ನಮ್ಮ ಉದ್ದೇಶವಾಗಿತ್ತು. ಹಾಗಾಗಿ, ಕೆ.ಜೆ.ಜಾರ್ಜ್ ಅವರನ್ನು ಗೃಹ ಮಂತ್ರಿಯನ್ನಾಗಿ ಮಾಡಿದ್ದೇವೆ' ಎಂದು ಹೇಳಿರುವುದಾಗಿ ತಿಳಿಸಿದ್ದಾರೆ. George is not confined to only minority people. George is a Home Minister for the entire State. ಅವರು ರಾಜ್ಯದ 6 ಕೋಟಿ ಜನರಿಗೆ ಗೃಹ ಮಂತ್ರಿಯಾಗಿದ್ದಾರೆ. ಹೀಗಿರುವಾಗ, ಇದರಲ್ಲಿ ಕ್ರಿಶ್ಚಿಯನ್, ಹಿಂದೂಗಳೆಂದು ಹೇಳಿ ಪರಸ್ಪರ ಅವರುಗಳನ್ನು ಏಕೆ ಎತ್ತಿ ಕಟ್ಟುತ್ತಿದ್ದೀರಿ? ಬಹುಸಂಖ್ಯಾತರು, ಅಲ್ಪಸಂಖ್ಯಾತರು ಎಂದು ಏಕೆ ಎತ್ತಿ ಕಟ್ಟಲು ಹೋಗುತ್ತಿದ್ದೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ತಪ್ಪು ಗ್ರಹಿಕೆ. ನನ್ನದು ಇಷ್ಟೇ. ಜಾರ್ಜ್ ಅವರನ್ನು ಗೃಹ ಮಂತ್ರಿಗಳನ್ನಾಗಿ ಮಾಡಿ ತಾವು ಒಳ್ಳೆಯ ಕೆಲಸ ಮಾಡಿದ್ದೀರಿ. ಇದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ನಿಮ್ಮ ಪಕ್ಷದ ಕಚೇರಿ ಸಭೆಯಲ್ಲಿ 'ಅಲ್ಪಸಂಖ್ಯಾತರಲ್ಲಿ ಅಭದ್ರತೆ ಇತ್ತು. ಅವರಿಗೆ ಸರ್ಕಾರದಲ್ಲಿ ವಿಶ್ವಾಸವಿರಲಿಲ್ಲ. ಆದುದರಿಂದ, ಅವರಲ್ಲಿ ವಿಶ್ವಾಸ ತುಂಬುವುದಕ್ಕೋಸ್ಕರ ಅಲ್ಪಸಂಖ್ಯಾತ ಕೋಮಿಗೆ ಸೇರಿರುವ ಒಬ್ಬ ವ್ಯಕ್ತಿಯನ್ನು ಗೃಹ ಮಂತ್ರಿಯನ್ನಾಗಿ ಮಾಡಿದದೇವೆ' ಎಂದು ನೀವು ಹೇಳಿರುವ ಮಾತಿಗೆ ನಾನು ಆಕ್ಷೇಪಣೆ ವ್ಯಕ್ತಪಡಿಸಿದ್ದೇನೆಯೇ ಹೊರತು ಬೇರೆ ಅಲ್ಲ. ಜಾರ್ಜ್ ಅವರನ್ನು ಗೃಹ ಮಂತ್ರಿಯನ್ನಾಗಿ ಮಾಡಿದರೆ, ಅವರು ರಾಜ್ಯದ ಆರು ಕೋಟಿ ಜನರ ಪರವಾಗಿದ್ದಾರೆ. 'ಅಲ್ಪಸಂಖ್ಯಾತರಲ್ಲಿ ಅಭದ್ರತೆ ಇತ್ತು, ಅದನ್ನು ಸರಿಪಡಿಸುವುದಕ್ಕೋಸ್ಕರ ಅಲ್ಪಸಂಖ್ಯಾತ ಕೋಮಿಗೆ ಸೇರಿದ ಒಬ್ಬರನ್ನು ಗ್ರಹ ಮಂತ್ರಿಯನ್ನಾಗಿ ಮಾಡಿದ್ದೇವೆ' ಎಂದು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಮೊದಲ ಬಾರಿಗೆ ನೀವು ಈ ರೀತಿ ಹೇಳಿದ್ದೀರಿ. ಮುಖ್ಯಮಂತ್ರಿಯಾಗಿ ನಿಮ್ಮ ಬಾಯಿಂದ ಇಂತಹ ಮಾತುಗಳು ಬರಬಾರದಾಗಿತ್ತು' ಎಂದಷ್ಟೇ ಹೇಳಿದ್ದೇನೆಯೇ ವಿನಾ ಅಲ್ಪಸಂಖ್ಯಾತ ಕೋಮಿಗೆ ಸೇರಿರುವವರನ್ನು ಗೃಹ ಮಂತ್ರಿಯನ್ನಾಗಿ ಮಾಡಿದ್ದು ತಪ್ಪು ಎಂದು ನಾನು ಎಲ್ಲಿಯೂ ಹೇಳಿಲ್ಲ. ಅವರನ್ನು ಗೃಹ ಮಂತ್ರಿಯನ್ನಾಗಿ ನೇಮಿಸಿರುವುದನ್ನು ನಾನು ಯಾವತ್ತೂ ಸ್ವಾಗತಿಸುತ್ತೇನೆ. 'ಅಲ್ಪಸಂಖ್ಯಾತರನ್ನು ತೃಪ್ತಿಪಡಿಸುವುದ-

ಕ್ಕೋಸ್ಕರ ಮತ್ತು ಬಹುಸಂಖ್ಯಾತರಿಗೆ ನೋವುಂಟು ಮಾಡುವಂತೆ ನೀವು ಹೇಳಿರುವುದನ್ನು ವಾಪಸ್ಸು ತೆಗೆದುಕೊಳ್ಳಬೇಕು' ಎಂದು ನಾನು ಹೇಳಿರುವುದು ದಾಖಲೆಯಲ್ಲಿದೆ, ಪತ್ರಿಕೆಗಳಲ್ಲೂ ವರದಿಯಾಗಿದೆ. ತಾವು ಅದನ್ನು ತೆಗೆದು ನೋಡಿ ಓದಿ.

ಶ್ರೀ ಜಗದೀಶ್ ಶೆಟ್ಟರ್ :– ಆ ರೀತಿಯ ಹೇಳಿಕೆಯನ್ನು ತಾವು ಕೊಟ್ಟಿದ್ದರಿಂದಾಗಿ ಆ comment ಮಾಡಬೇಕಾಯಿತು.

ಶ್ರೀ ಸಿದ್ದರಾಮಯ್ಯ :– ಮಾನ್ಯ ಜಗದೀಶ್ ಶೆಟ್ಟರ್‌ರವರೆ, ದಯವಿಟ್ಟು ನಾನು ಹೇಳುವುದನ್ನು ಕೇಳಿ. I am repeating what I said. I am not going back from my words. ನಾನು ಹೇಳುವುದನ್ನು ಕೇಳಿ. ಅವರಲ್ಲಿ ಆತಂಕ ಇರಬಾರದು. ಈ ಕಾರಣಗಳಿಂದ, moral policing, ಯಾರ್‍ರಿ? ಆ moral policing ಎಂದರೆ. ಕಾನೂನು ಕೈಗೆತ್ತಿಕೊಳ್ಳುವುದು moral policing ಆಗುತ್ತದೆಯೇ? Home stay ಮೇಲೆ ದಾಳಿ ಮಾಡುವುದು moral policing ಆಗುತ್ತದೆಯೇ? Club ಗಳ ಮೇಲೆ ದಾಳಿ moral policing ಆಗುತ್ತದೆಯೇ? Church ಗಳ ಮೇಲೆ ಅಥವಾ ಮಹಿಳೆಯರ ಮೇಲೆ ದೌರ್ಜನ ಮಾಡುವುದು moral policing ಆಗುತ್ತದೆಯೇ? ಉಡುಪಿಯಲ್ಲಿ ರೇವ್ ಪಾರ್ಟಿ ಆಯಿತು. ಇಂತಹ ಕಾರಣಗಳಿಗೋಸ್ಕರ ಅಲ್ಪಸಂಖ್ಯಾತ ವರ್ಗದ ಜನರಲ್ಲಿ ಒಂದು ಆತಂಕದ ವಾತಾವರಣವಿತ್ತು. ಅವರಿಗೆ ಒಂದು sense of security ಇದರಿಂದ ಬರುತ್ತದೆಂದು ನಾನು ಹೇಳಿದ್ದೇನೆ. There is nothing wrong in that.

ಶ್ರೀ ಜಗದೀಶ್ ಶೆಟ್ಟರ್ : ಅಲ್ಪಸಂಖ್ಯಾತರಿಗಾಗಿ Home Minister ಮಾಡಿದ್ದೀರಿ ಎಂದು ವರದಿಯಾಗಿತ್ತು.

ಶ್ರೀ ಸಿದ್ದರಾಮಯ್ಯ :– ನೀವು ನನ್ನ ಬಾಯಿಯಲ್ಲಿ ತುರುವುದಕ್ಕೆ ಏಕೆ ಹೋಗುತ್ತೇರಿ? ಅವುಗಳನ್ನೆಲ್ಲಾ ನೀವು ಬಾಯಿಯಲ್ಲೇ ಹಾಕಿಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ : ನಿಮ್ಮ ಬಾಯಿಯಲ್ಲಿ ಬಂದಿದ್ದನ್ನೇ ನಾವು ಹೇಳುತ್ತಿದ್ದೇವೆ. Now he is very clear.

ಶ್ರೀ ಸಿದ್ದರಾಮಯ್ಯ :– I am making it very very clear.

ಅಧ್ಯಕ್ಷರು :– ಆಯಿತು, Ok.

ಶ್ರೀ ಸಿದ್ದರಾಮಯ್ಯ :– ಈಗ ನೀವು KJP ಗೆ ಬಂದ ಮೇಲಾದರೂ ಬದಲಾವಣೆ ಆಗಬೇಕೋ? ಬೇಡವೋ? ಮಾನ್ಯ ಯಡಿಯೂರಪ್ಪನವರೆ, ನೀವು ಏಕೋ ಅವರ ಹತ್ತಿರ ಹತ್ತಿರ ಹೋಗುತ್ತಿದ್ದೀರಲ್ಲಾ?

ಶ್ರೀ ಬಿ.ಎಸ್. ಯಡಿಯೂರಪ್ಪ :– ನಾನು BJP ಯಲ್ಲಿ–ಇದ್ದಾಗಲೂ ಅದೇ ನಿಲುವು, KJPಗೆ ಬಂದ ಮೇಲೆಯೂ ಅದೇ ನಿಲುವು ಹೊಂದಿದ್ದೇನೆ. BJPಯಲ್ಲಿ ಇದ್ದಾಗಲೂ, KJPಗೆ ಬಂದ ಮೇಲೂ, ಅಲ್ಪಸಂಖ್ಯಾತರ ಬಗ್ಗೆ ಮತ್ತು ದಿನ ದಲಿತರ ಬಗ್ಗೆ ನನಗೆ ಇದ್ದಂತಹ ಚಿಂತನೆಯಲ್ಲಿ ಏನೂ ವ್ಯತ್ಯಾಸವಿಲ್ಲ. ನಾನು ಅಂಬೇಡ್ಕರ್ ವಿಚಾರಕ್ಕೆ, ಜಯಪ್ರಕಾಶ್ ನಾರಾಯಣರವರ ವಿಚಾರಕ್ಕೆ, ಗಾಂಧಿ ವಿಚಾರಕ್ಕೆ .....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :– ಏನಿದು? ಏಕ್ರೀ ಕೂಗುತ್ತಿದ್ದೀರಾ? ಮಹಾತ್ಮ ಗಾಂಧಿಯವರನ್ನು ಕಾಂಗ್ರೆಸ್‌ನವರೇನು ಗುತ್ತಿಗೆ ತೆಗೆದುಕೊಂಡಿದ್ದೀರಾ?

ಅಧ್ಯಕ್ಷರು :– ಈ ಕಡೆಗೆ ನೋಡಿ ಮಾತನಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ :– ದಯಮಾಡಿ ಕೇಳಿ. ಇನ್ನೂ ಬಂದು ಒಂದು ತಿಂಗಳಾಗಿಲ್ಲ. ನಾನು ಗೌರವದಿಂದ ಎದ್ದು ನಿಂತುಕೊಂಡು ಮಾತನಾಡಬೇಕಾದರೆ, ಈ ರೀತಿ ಮಾಡಿದರೆ ಹೇಗೆ? ನೋಡಿ ಸ್ವಾಮಿ, ನನ್ನ ವಿಚಾರದಲ್ಲಿ ಎಂದಿಗೂ ಬದಲಾವಣೆಯಾಗಿಲ್ಲ. ನಾನು BJPಯಲ್ಲಿ ಇರಲಿ, KJPಯಲ್ಲಿ ಇರಲಿ, ಮತ್ತೊಂದು ಕಡೆ ಇರಲಿ, ಆದರೆ ಈ ನಾಡಿನಲ್ಲಿ ಇರುವಂತಹ ದೀನ ದಲಿತರ ಬಗ್ಗೆ, ಅಲ್ಪಸಂಖ್ಯಾತರ ಬಗ್ಗೆ ನಾನು ಯಾವತ್ತೂ ಎರಡು ಮಾತನಾಡಿಲ್ಲ. ಅವರ ರಕ್ಷಣೆ ಮಾಡಿಕೊಂಡೇ ಬಂದಿದ್ದೇನೆ. ನಾನು ಮುಖ್ಯಮಂತ್ರಿ ಆದಾಗಿನಿಂದ ಇವತ್ತಿನವರೆಗೂ, ಅಧಿಕಾರದಲ್ಲಿ ಇರಲಿ ಅಥವಾ ಇಲ್ಲದಿರಲಿ, ದೀನ ದಲಿತರು ಮತ್ತು ಅಲ್ಪಸಂಖ್ಯಾತರು ಇರಬಹುದು, ಶೋಷಿತ ವರ್ಗದವರು ಇರಬಹುದು, ಇವರ ಪರವಾಗಿ ನಾನು ನಿಂತುಕೊಂಡು ಬಂದಿದ್ದಕ್ಕೋಸ್ಕರವೇ ಅವತ್ತು ಬಿಜೆಪಿ ಅಧಿಕಾರಕ್ಕೆ ಬರುವುದಕ್ಕೆ ಸಾಧ್ಯವಾಯಿತು. ಈ ಪ್ರೀತಿ, ವಿಶ್ವಾಸ ಉಳಿದಿದ್ದರೆ, ಬಡಬಗ್ಗರಿಗೆ ಕಾರ್ಯಕ್ರಮಗಳನ್ನು ಕೊಟ್ಟಿದ್ದರೆ......

ಅಧ್ಯಕ್ಷರು :– ಮತ್ತೆ ಭಾಷಣ ಮಾಡಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಲೀಟರ್‌ಗೆ 2 ರೂ.ಗಳ ಪ್ರೋತ್ಸಾಹ ಧನ ಇದ್ದದ್ದನ್ನು 4 ರೂ.ಗಳಿಗೆ ಏರಿಸುತ್ತೇನೆಂದು ನೀವು ಹೇಳಿದಿರಿ. ಅದನ್ನು ಪ್ರಾರಂಭ ಮಾಡಿದವನು ಯಾರು? ಅದು ಯಡಿಯೂರಪ್ಪ.

ಅಧ್ಯಕ್ಷರು :– ಮತ್ತೆ ಭಾಷಣ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಆದ್ದರಿಂದ, ಈ ದೀನ ದಲಿತರ ಬಗ್ಗೆ ಮತ್ತು ಅಲ್ಪಸಂಖ್ಯಾತರ ಬಗ್ಗೆ ನನ್ನ ನಿಲುವಿನಲ್ಲಿ ಆಗಲೂ ಬದಲಾವಣೆ ಇಲ್ಲ, ಈಗಲೂ ಬದಲಾವಣೆ ಇಲ್ಲ, ಮುಂದೆಯೂ ಬದಲಾವಣೆ ಇರುವುದಿಲ್ಲ. ಅವರಿಗೆ ರಕ್ಷಣೆ ಕೊಡಬೇಕಾಗಿರುವುದು democracy ಯಲ್ಲಿ ನಮ್ಮ ಕರ್ತವ್ಯ. ಅದನ್ನು ನಾವು ಮಾಡಿಕೊಂಡು ಬಂದಿದ್ದೇವೆ. ಅದಕ್ಕೆ ಅವರೆಲ್ಲಾ ಓಹೋ! ಎಂದು ಕೂಗಿದರೆ ನಾನೇನು ಹೇಳಬೇಕು ಹೇಳಿ.

ಶ್ರೀ ಸಿದ್ದರಾಮಯ್ಯ :– ಮಾನ್ಯ ಅಧ್ಯಕ್ಷರೆ, ಆದ್ದರಿಂದ ನಾನು ಆ ಸದ್ಭಾವನೆಯಿಂದ ಆ ಮಾತನ್ನು ಹೇಳಿದ್ದೇನೆ. ನಾನು ಏನು ಹೇಳಿದ್ದೇನೆ ಎನ್ನುವುದನ್ನು ಈಗ repeat ಮಾಡಿದ್ದೇನೆ. What I said on that day, ನಮ್ಮ ಪಾರ್ಟಿ ಆಫೀಸ್ ಹತ್ತಿರ, ವಕೀಲರು ಅಭಿನಂದಿಸಿ ಸನ್ಮಾನ ಮಾಡಲಿಕ್ಕೆಂದು ಬಂದಿದ್ದರು, ಆ ಸಂದರ್ಭದಲ್ಲಿ ಹೇಳಿದಂತಹ ಪದ ಇದು. ಮಾನ್ಯ ಜಾರ್ಜ್‌ರವರು ಕೇವಲ minorities ಗೆ ಮಾತ್ರವೇ ಮಂತ್ರಿಗಳೆಂದು ನಾನು ಎಂದೂ ಹೇಳಿಲ್ಲ. ಇಡೀ ರಾಜ್ಯದ 6 ಕೋಟಿ 11 ಲಕ್ಷ ಜನ, ಕರ್ನಾಟಕದ ಎಲ್ಲರಿಗೂ ಕೂಡ ಅವರು Home Minister ಆಗಿದ್ದಾರೆ. ನಮಗೆ minorities ಅಲ್ಪಸಂಖ್ಯಾತರು, ಬಹುಸಂಖ್ಯಾತರು ಎಂದು ವಿಂಗಡಣೆ ಮಾಡತಕ್ಕ ಪ್ರಶ್ನೆಯೇ ಇಲ್ಲ. ಎಲ್ಲರ ರಕ್ಷಣೆಯಾಗಬೇಕು. ಅವರು ಯಾರೇ ಆಗಿರಲಿ. ಅವರು ಯಾವುದೇ ಧರ್ಮಕ್ಕೆ ಸೇರಿರಲಿ, ಯಾವುದೇ ಜಾತಿಗೆ ಸೇರಿರಲಿ, ಯಾವುದೇ ಭಾಷೆಗೆ ಸೇರಿರಲಿ. ಎಲ್ಲರನ್ನೂ ಕೂಡ ಸಮಾನವಾಗಿ ಕಾಣಬೇಕು. ಎಲ್ಲರಿಗೂ ಸಮಾನವಾದಂತಹ ರಕ್ಷಣೆ ಕೊಡಬೇಕು. ಎಲ್ಲರನ್ನೂ ಸಮಾನವಾಗಿ ಗೌರವಿಸಬೇಕು. We are committed to it. ಅದರ ಬಗ್ಗೆ ಎರಡನೇ ಮಾತಿಲ್ಲ. ಆದ್ದರಿಂದ, ನೀವು ಆ ತರಹ ತಪ್ಪು ತಿಳಿದುಕೊಂಡಿದ್ದರೆ, ತಪ್ಪು ತಿಳುವಳಿಕೆಗೆ ಬಂದಿದ್ದರೆ, ಅದು ಸರಿಯಾದುದಲ್ಲ ಎನ್ನುವುದನ್ನು ಸ್ಪಷ್ಟವಾಗಿ ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತಿದ್ದೇನೆ. ಬಡವರಿಗೆ ರಕ್ಷಣೆ ಕೊಡಬೇಕೆನ್ನುವುದು ನಮ್ಮ ಸರ್ಕಾರದ ಮುಖ್ಯ ಉದ್ದೇಶವಾಗಿದೆ. ಈ

ರಾಜ್ಯವನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಸಬೇಕು. ನಾನು ಮುಂದಿನ ತಿಂಗಳು ಬಜೆಟ್ ಅನ್ನು ಮಂಡಿಸುತ್ತಿದ್ದೇನೆ. ಬಜೆಟ್ ಮಂಡಿಸುವಾಗ, ನಾವು manifesto ದಲ್ಲಿ ಹೇಳಿರತಕ್ಕ ಅನೇಕ ಭರವಸೆಗಳನ್ನು ಜಾರಿಗೆ ಕೊಡತಕ್ಕಂಥ ಪ್ರಯತ್ನವನ್ನು ಮಾಡುತ್ತೇವೆ. ಬಡವರಿಗೆ, ದಲಿತರಿಗೆ, ಹಿಂದುಳಿದವರಿಗೆ, ಮಹಿಳೆಯರಿಗೆ, ಯಾರ್‍ಯಾರು ಸಾಮಾಜಿಕ ನ್ಯಾಯದಿಂದ ವಂಚಿತರಾಗಿದ್ದಾರೋ ಮತ್ತು ಎಲ್ಲಾ ಜಾತಿಯಲ್ಲಿ ಇರತಕ್ಕಂಥ ಬಡವರಿಗೆಲ್ಲರಿಗೂ ನ್ಯಾಯ ಒದಗಿಸುತ್ತೇವೆ. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು, ಎಲ್ಲರಿಗೂ ನ್ಯಾಯ ಸಿಗಬೇಕು. ಅವಕಾಶದಿಂದ ವಂಚಿತರಾಗಿರತಕ್ಕ ಜನರಿಗೆ ಅವಕಾಶಗಳು ಸಿಗಬೇಕು. ಅವರೂ ಕೂಡ ಮುಖ್ಯವಾಹಿನಿಗೆ ಬರಬೇಕು. ಅವರೆಲ್ಲರಿಗೂ ಕೂಡ ರಕ್ಷಣೆ ಸಿಗಬೇಕೆನ್ನುವುದು ನಮ್ಮ ಉದ್ದೇಶ. ಆ ದಿಕ್ಕಿನಲ್ಲಿ ನಮ್ಮ ಸರ್ಕಾರ ಕೆಲಸ ಮಾಡುತ್ತದೆ. ನಾವು ಈ ರಾಜ್ಯವನ್ನು ಅಭಿವೃದ್ಧಿ ಪಥದತ್ತ ತೆಗೆದುಕೊಂಡು ಹೋಗಲಿಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ. ಈ ರಾಜ್ಯವನ್ನು ಇಡೀ ದೇಶದಲೇ ಮಾದರಿ ರಾಜ್ಯವನ್ನಾಗಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಇದರ ಬಗ್ಗೆ ಯಾವುದೇ ಸಂಶಯ ಇಟ್ಟುಕೊಳ್ಳಬೇಕಾದಂತಹ ಅಗತ್ಯವಿಲ್ಲ. ರೈತರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರು, ಎಲ್ಲಾ ಜಾತಿಯ ಬಡವರು, ಎಲ್ಲರಿಗೂ ನ್ಯಾಯ ಕೊಡತಕ್ಕಂಥ ಪ್ರಯತ್ನವನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತುಗಳನ್ನು ಹೇಳುತ್ತೇನೆ. ಈ ರಾಜ್ಯದಲ್ಲಿ ಒಂದು ಒಳ್ಳೆಯ ವಾತಾವರಣವನ್ನು ನಿರ್ಮಾಣ ಮಾಡಬೇಕು. ಕಾನೂನಿನ ಸುವ್ಯವಸ್ಥೆ ಕಾಪಾಡಬೇಕು. Investment ಸ್ನೇಹಿ, ಆ ಒಂದು ವಾತಾವರಣವನ್ನು ನಿರ್ಮಾಣ ಮಾಡಬೇಕೆಂಬ ಜವಾಬ್ದಾರಿ ನಮ್ಮ ಮೇಲಿದೆ. ಏಕೆಂದರೆ, investment ರಾಜ್ಯಕ್ಕೆ ಬರಬೇಕಾಗುತ್ತದೆ. ಅದು ಕೈಗಾರಿಕೆ ಇರಬಹುದು ಅಥವಾ agriculture ಇರಬಹುದು, service sector ಇರಬಹುದು, ಯಾವುದೇ sectorಗೆ investment ಬರಬೇಕಾಗುತ್ತದೆ. ಇದೆಲ್ಲವನ್ನೂ ಕೂಡ ಮಾಡಲಿಕ್ಕೆ ಒಂದು investment ಸ್ನೇಹಿ ವಾತಾವರಣವನ್ನು ಕರ್ನಾಟಕದಲ್ಲಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನತಕ್ಕಂಥ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಬಹಳ ಜನ ಮಾನ್ಯ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿದ್ದಾರೆ, ಸಲಹೆಗಳನ್ನು ಕೊಟ್ಟಿದ್ದಾರೆ. ಅವರ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ. ಕೆಲವರು ಅಭಿನಂದನೆಗಳನ್ನು ಹೇಳಿದ್ದಾರೆ.

ನನಗೆ ಒಳ್ಳೆಯದಾಗಲಿ ಎಂದು ಶುಭ ಕೋರಿದ್ದಾರೆ. ಅವರೆಲ್ಲರಿಗೂ ಕೂಡ ಕೃತಜ್ಞತೆಗಳನ್ನು ಹೇಳುತ್ತೇನೆ. ನಿಮ್ಮೆಲ್ಲರ ಸಹಕಾರದಿಂದ Assembly ಇವತ್ತು ಚೆನ್ನಾಗಿ ನಡೆದಿದೆ. ಕೆಲವು ವರ್ಷಗಳ ನಂತರ Assembly ಇವತ್ತು ಬಹಳ ಚೆನ್ನಾಗಿ ನಡೆದಿದೆ. ಕೆಲವು ವರ್ಷಗಳ ನಂತರ Assembly ಇವತ್ತು ಬಹಳ ಚೆನ್ನಾಗಿ ನಡೆದಿದೆ. ಇದೇ ರೀತಿ ಮುಂದೆಯೂ ಕೂಡ, ನಿಮ್ಮೆಲ್ಲರ ಸಹಕಾರದಿಂದ ನಡೆಯಲಿ. ಎಲ್ಲಾ ಶಾಸಕರು, ವಿರೋಧ ಪಕ್ಷದ ನಾಯಕರು, ಎಲ್ಲಾ floor leaders ಸಹಕಾರವನ್ನು ಕೋರುತ್ತೇನೆ. ಎಲ್ಲಾ ಶಾಸಕರ ಸಹಕಾರವನ್ನು ಕೋರುತ್ತೇನೆ. ನಾವು ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಕೆಲಸ ಮಾಡುವಾಗ, ನಾವೆಲ್ಲರೂ ಈ ರಾಜ್ಯದ ಪರವಾಗಿ ಕೆಲಸ ಮಾಡೋಣ. ನಾನು ಆಗಲೇ ಹೇಳಿದಂತೆ ವರ್ಷಕ್ಕೆ 60 ದಿವಸಗಳ ಕಾಲ ಅಧಿವೇಶನವನ್ನು ನಡೆಸೋಣ. ಪ್ರಜಾಪ್ರಭುತ್ವ ಯಶಸ್ವಿ ಆಗತಕ್ಕಂಥ ದಿಕ್ಕಿನಲ್ಲಿ ಹೆಜ್ಜೆ ಇಡೋಣ. ಈ ರಾಜ್ಯದ ಅಭಿವೃದ್ಧಿಯತ್ತ ಹೆಜ್ಜೆ ಹಾಕೋಣ ಎಂದು ಹೇಳಿ, ನೀವೆಲ್ಲರೂ ಕೂಡ ಈ ರಾಜ್ಯಪಾಲರ ವಂದನಾ ನಿರ್ಣಯಕ್ಕೆ ಬೆಂಬಲ ಸೂಚಿಸಬೇಕೆಂದು ಕೇಳಿಕೊಂಡು, ಮನವಿ ಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :- ಮಾನ್ಯ ರೇವಣ್ಣನವರೆ, ಸಂಕ್ಷಿಪ್ತವಾಗಿ ಸ್ಪಷ್ಟೀಕರಣ ಕೇಳಿ. ಮತ್ತೆ ಭಾಷಣ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚೇನೂ ಕೇಳುವುದಿಲ್ಲ. ನಾನು ಕೇವಲ 4–5 points ಬಗ್ಗೆ ಮಾತ್ರವೇ ಕೇಳುತ್ತೇನೆ.

ಅಧ್ಯಕ್ಷರು :- 4–5 ವಿಷಯಗಳಿವೆಯೇ?

ಶ್ರೀ ಹೆಚ್.ಡಿ. ರೇವಣ್ಣ : ಅವರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಇದನ್ನು ಪ್ರಸ್ತಾಪಿಸುತ್ತಿದ್ದೇನೆ. ಅವರಿಗೆ ಹೆಸರು ಬರುವುದು ಬೇಡ ಎನ್ನುವುದಾದರೆ ನಾನೇನೂ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಭಾಧ್ಯಕ್ಷರೆ, ಹಾಲಿನ ರೇಟ್ ಅನ್ನು 4 ರೂ.ಗಳಿಗೆ ಜಾಸ್ತಿ ಮಾಡಿದ್ದಾರೆ. ಅದರಿಂದ ನಮ್ಮದೇನೂ ತೊಂದರೆಯಿಲ್ಲ. ರೈತರಿಗೆ ಇನ್ನೂ 4 ರೂ.ಗಳನ್ನು ಕೊಡಿ, ನಮಗೆ ಸಂತೋಷವಾಗುತ್ತದೆ. ಆದರೆ ಇವತ್ತು 54 ಲಕ್ಷ ಲೀಟರ್‌ಗಳಷ್ಟು ಹಾಲು ಉತ್ಪಾದನೆಯಾಗುತ್ತಿದೆ. ಅದರಲ್ಲಿ 6 ಲಕ್ಷ ಲೀಟರ್‌ಗಳಷ್ಟು ಹಾಲನ್ನು ಶಾಲೆಗಳಿಗೆ ಕೊಟ್ಟರೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಹಾಲನ್ನೆಲ್ಲಾ ರೋಡಿಗೆ ಸುರಿಯಬೇಕಾಗುತ್ತದೆ. ಅದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನೊಂದು

ವಿಚಾರ ಹೇಳುವುದಾದರೆ, ಮಾನ್ಯ ಶಿಕ್ಷಣ ಇಲಾಖೆ ಮಂತ್ರಿಗಳು ಸದನದಲ್ಲಿ ಇಲ್ಲ. ಇವತ್ತು ಏನಾಗಿದೆ ಎಂದರೆ, ಶಿಕ್ಷಣ ಇಲಾಖೆ ...

ಅಧ್ಯಕ್ಷರು :– ದಯವಿಟ್ಟು ಮಾನ್ಯ ಸದಸ್ಯರುಗಳು ಕುಳಿತುಕೊಳ್ಳಿ. ಏಕೆ ಎದ್ದು ಹೋಗುತ್ತಿದ್ದೀರಾ? Please, ಎದ್ದು ಹೋಗಬೇಡಿ, ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಸಭಾಧ್ಯಕ್ಷರೆ, ಕೆಲವೊಂದು ಇಂಜಿಯರಿಗ್ ಕಾಲೇಜುಗಳು ಇರಬಹುದು, veterinary colleges ಇರಬಹುದು. ಅವುಗಳಿಗೆ ಮೂಲಭೂತ ಸೌಕರ್ಯಗಳಿಲ್ಲ. ಉದಾಹರಣೆಗೆ ಹೇಳುವುದಾದರೆ, ರಾಮನಗರದಲ್ಲಿ ಇಂಜಿನಿಯರಿಂಗ್ ಕಾಲೇಜ್‌ವೊಂದಿದೆ. ಅದರಲ್ಲಿ lab equipments ಮತ್ತು ಇನ್ನಿತರ ಏನೂ ಸೌಕರ್ಯಗಳಿಲ್ಲದ ಕಾರಣ, ಮಾನ್ಯ ಕುಮಾರಸ್ವಾಮಿಯವರು ಅದಕ್ಕಾಗಿ ತಮ್ಮ ಎಂ.ಪಿ. ಗ್ರಾಂಟ್‌ನಿಂದ ಎರಡೂವರೆ ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು :– ಏನು ವಿಷಯ ಎಂಬುದನ್ನು ನೇರವಾಗಿ ಹೇಳಿಬಿಡಿ.

ಶ್ರೀ ಹೆಚ್.ಡಿ. ರೇವಣ್ಣ :– ಇಂಜಿನೀಯರಿಗ್ ಕಾಲೇಜ್‌ಗಳು ಇರಬಹುದು, ಹಾಸನ ಅಥವಾ ಶಿವಮೊಗ್ಗದ veterinary colleges ಇರಬಹುದು, ಅವುಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲದೆ, ಅವುಗಳ ಬಾಗಿಲನ್ನೆಲ್ಲಾ ಮುಚ್ಚಬೇಕಾದಂತಹ ಪರಿಸ್ಥಿತಿ ಒದಗಿದೆ. ಅಲ್ಲಿ 98% ತೆಗೆದುಕೊಂಡಿರುವಂತಹ ಬಡವರ ಮಕ್ಕಳೇ ಓದುತ್ತಿದ್ದಾರೆ. ನಮ್ಮ ಹಿಂದಿನ ಕಾರ್ಯದರ್ಶಿಗಳು ಅಲ್ಲೇ ಕುಳಿತಿದ್ದಾರೆ..

ಅಧ್ಯಕ್ಷರು :– ಆಯಿತು, ಆ ಕಡೆ ನೋಡಬೇಡಿ. ಇಲ್ಲಿ ನೋಡಿಕೊಂಡು ಮಾತನಾಡಿ.

ಶ್ರೀ ಹೆಚ್.ಡಿ. ರೇವಣ್ಣ :– ದಯಮಾಡಿ ಕಾಲೇಜ್‌ಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಿ. ಇನ್ನು ಕೃಷಿ ಇಲಾಖೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಮಾನ್ಯ ಕೃಷಿ ಸಚಿವರು ಇಲ್ಲೇ ಇದ್ದಾರೆ. ಕೃಷಿ ಇಲಾಖೆಯಲ್ಲಿ recruitment ಆಗುತ್ತಿಲ್ಲ. ಕೆಲವು ಕಡೆಗಳಲ್ಲಿ ಗ್ರಾಮ ಸಹಾಯಕರಿಲ್ಲ. ಕೃಷಿ ಇಲಾಖೆಯಲ್ಲಿ more than 60% ಹುದ್ದೆ ಖಾಲಿ ಇದೆ. ತೋಟಗಾರಿಕೆ ಇಲಾಖೆಯಲ್ಲಿ ಸಹ ಖಾಲಿ ಹುದ್ದೆಗಳಿವೆ. ರೇಷ್ಮೆ ಇಲಾಖೆಗೆ ಸಂಪೂರ್ಣವಾಗಿ ಇವತ್ತು ನಾಶವಾಗಿದೆ. ಆದ್ದರಿಂದ, ಇಲ್ಲಿರುವ ಖಾಲಿ ಹುದ್ದೆಗಳನ್ನು ತುಂಬವ ಕಡೆಗೆ ಮಾನ್ಯ ಮುಖ್ಯಮಂತ್ರಿಗಳು ಒತ್ತು ಕೊಡಬೇಕೆಂದು ಕೋರುತ್ತೇನೆ. ಕೃಷಿ

ಇಲಾಖೆಯ ಖಾಲಿ ಹುದ್ದೆಗಳನ್ನು ತುಂಬಬೇಕು ಮತ್ತು ಹಳ್ಳಿ ಮಕ್ಕಳು ಓದುವಂತಹ ಶಿಕ್ಷಣ ಸಂಸ್ಥೆಗಳಿಗೆ priority ಮೇಲೆ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ prestige question ಮಾಡಿಕೊಳ್ಳಬೇಕಾಗಿಲ್ಲ. ಬೇಕೆಂದರೆ ಅವರೇ ತಿದ್ದುಪಡಿ ತರಲಿ. ಈ 'ಕಾವೇರಿ ಬೇಸಿನ್‌ನ ಐತೀರ್ಪಿಗೆ ಅನುಗಾಣವಾಗಿ' ಎಂಬ ಒಂದು word ಮಾನ್ಯ ರಾಜ್ಯಪಾಲರ ಭಾಷಣದಲ್ಲಿದೆ.

ನಾವು ಬೆಳಿಗ್ಗೆ ನಿಮ್ಮ ಹತ್ತಿರ ಬಂದು ಕಟ್ ಮೋಷನ್ ತರಬೇಕೆಂದು ಮನವಿ ಮಾಡಿದೆವು, ಮೂರು ದಿವಸ ಮುಂಚೆ ಕೊಡಬೇಕೆಂಬ ಭಾವನೆ ನೀವು ವ್ಯಕ್ತಪಡಿಸಿದಿರಿ. ಇದಕ್ಕೆ ಸಹಕಾರ ಕೊಟ್ಟರೆ ನಾವು ಆ ಭಾಗದಲ್ಲಿ ನಾಳೆ ದಿವಸ ಜನರಿಗೆ ಉತ್ತರ ಕೊಡುವುದಕ್ಕಾಗುವುದಿಲ್ಲ. ಏಕೆಂದರೆ ಮಾನ್ಯ ವಿರೋಧ ಪಕ್ಷದ ನಾಯಕರು ಸವಿಸ್ತಾರವಾಗಿ ಹೇಳಿದ್ದಾರೆ. ಮಾನ್ಯ ಸಭಾ ನಾಯಕರು ಈ ಸ್ಥಾನದಲ್ಲಿ ಇದ್ದಾಗ ಉಪ ನಾಯಕರು ಏನು ಹೇಳಿದ್ದಾರೆ, ನಾರಿಮನ್‌ರವರ ತಪ್ಪು ನಿರ್ಣಯದಿಂದ . . .

ಅಧ್ಯಕ್ಷರು : ನಾನು ಒಂದು ಸಲಹೆ ಕೊಡಲಾ?

ಶ್ರೀ ಹೆಚ್.ಡಿ. ರೇವಣ್ಣ : ಈ ಮಾತು ನಾನು ಹೇಳುತ್ತಿಲ್ಲ, ಅವರೇ ಹೇಳಿರುವುದು, ಬೇಕಾದರೆ records ತೆಗೆಸಿ ನೋಡಿ. ಒಪ್ಪಿಕೊಂಡರು ಎನ್ನುವ ಜಡ್ಜ್‌ಮೆಂಟ್ ಕಾಪಿಯನ್ನು ಅವತ್ತು ಓದಿ ಮಾನ್ಯ ಜಯಚಂದ್ರ ಸಾಹೇಬರು ಹೇಳಿದ್ದರು. ನಿಮ್ಮ ಲಾಯರ್ ರವರೇ ಒಪ್ಪಿಕೊಂಡಿದ್ದಾರೆಂಬ ಭಾವನೆ ವ್ಯಕ್ತಪಡಿಸಿದ್ದಾರೆ. ಆ ಪದವನ್ನು ಬೇಕಾದರೆ ತಾವು ತೆಗೆದು ನೋಡಿ. "ಕಾವೇರಿ ಬೇಸಿನ್‌ನ ಐತೀರ್ಪಿಗೆ ಅನುಸಾರ" ಇದೆ ಎನ್ನು ವುದಾದರೆ, ಇದುವರೆಗೆ ಕಾವೇರಿ ಬೇಸಿನ್‌ರನಲ್ಲಿ ವರ್ಕ್ ಮಾಡುವುದಕ್ಕೆ ಕೆಲಸ ಮಾಡುತ್ತಿದ್ದರಲ್ಲ, ಅವರ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದ್ದೀರಾ? ಸಚಿವ ಸಂಪುಟದ ಒಂದು ನಿರ್ಣಯ ಮಾಡಿ ಕಳುಹಿಸಿ ಕೊಟ್ಟರೆ ತಮಿಳು ನಾಡು ಸರ್ಕಾರಕ್ಕೆ ಇದು ಒಂದು ಅಸ್ತ್ರ ವಾಗುತ್ತದೆ ಎನ್ನುವುದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಇದಕ್ಕೆ ನಾವಂತೂ ಒಪ್ಪುವುದಿಲ್ಲ. ದಯ ಮಾಡಿ ಆ ಪದವನ್ನು ತೆಗೆಯಲಿ. ಅವರೇ ಬೇಕಾದರೆ ಮಂಡಿಸಲಿ. ಅವರಿಗೇ ಹೆಸರು ಬರಲಿ. ನಮ್ಮದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು : ಮಾನ್ಯ ಸದಸ್ಯರಿಗೆ ಒಂದು ಸಲಹೆ ಕೊಡಲಾ, ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ, ಮಾನ್ಯ ಮುಖ್ಯಮಂತ್ರಿಗಳೂ, ನೀವೂ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಕಾನೂನು ಸಚಿವರು ಒಂದು ದಿವಸ ಒಂದು ಅರ್ಧ ಗಂಟೆ ಕೂತು ಕೊಂಡು ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ : ಕುತುಕೊಂಡು ಅಲ್ಲ, ತೀರ್ಮಾನ ಮಾಡಿ ಆ ಮೇಲೆ ಕೂತುಕೊಂಡರೆ ಪ್ರಯೋಜನವಾಗುವುದಿಲ್ಲ.

ಅಧ್ಯಕ್ಷರು : ಯಾರೇನೂ ಪ್ರತಿಷ್ಠೆ ಮೇಲೆ ನಿಂತಿಲ್ಲ. ಸಮಸ್ಯೆ ಬಗೆಹರಿಯಬೇಕೆಂದು ಅವರಿಗೂ ಅಷ್ಟೇ ಕಾಳಜಿ ಇದೆ, ನಿಮಗೂ ಅಷ್ಟೇ ಕಾಳಜಿ ಇದೆ. ನಿಮ್ಮ ಮನಸ್ಸಿನಲ್ಲಿ ಏನಿದೆ ಎಂದು ಒಂದು ಗಂಟೆ ನೀವು ಕೂತು ಚರ್ಚೆ ಮಾಡಿದರೆ, ಒಂದು ತೀರ್ಮಾನಕ್ಕೆ ಬರುವುದಕ್ಕಾಗುವುದಿಲ್ಲವಾ?

ಶ್ರೀ ಹೆಚ್.ಡಿ. ರೇವಣ್ಣ : ನೀವೇ ಮಧ್ಯ ನಿಂತು ನಿಮ್ಮ ಅಧ್ಯಕ್ಷತೆಯಲ್ಲಿ ಮಾಡಿ. ನಮ್ಮದೇನೂ ಅಭ್ಯಂತರವಿಲ್ಲ. ನೀವೇ ನಿಮ್ಮ ಅಧ್ಯಕ್ಷತೆಯಲ್ಲಿ ಮಾಡಿದರೆ ನಿಮಗೆ ಅಭಿನಂದನೆ ಸಲ್ಲಿಸುತ್ತೇವೆ. ನಿಮ್ಮ ಗಮನಕ್ಕೆ ಬರುವವರೆಗೆ ನೀವು ಅದನ್ನು ತಡೆ ಹಿಡಿಯಿರಿ.

ಅಧ್ಯಕ್ಷರು : ಮಾನ್ಯ ಮುಖ್ಯ ಮಂತ್ರಿಗಳೆ, ಈ ವಿಷಯದಲ್ಲಿ ಸ್ವಲ್ಪ ಕುಳಿತು ಮಾತನಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಸುದೀರ್ಘವಾಗಿ ರಾಜ್ಯಪಾಲರ ವಂದನಾ ನಿರ್ಣಯವನ್ನು ಸಮರ್ಥಿಸಿಕೊಳ್ಳತಕ್ಕಂಥದ್ದರಲ್ಲಿ ಸದನದ ಎಲ್ಲಾ ಸದಸ್ಯರುಗಳು ಈ ಭಾಗದಿಂದ ಹಾಗೂ ಆ ಭಾಗದಿಂದ ಏನು ಚರ್ಚೆ ಮಾಡಿದ್ದಾರೆ, ಅದೆಲ್ಲದಕ್ಕೂ ಸಮರ್ಥವಾದ ಉತ್ತರ ಕೊಟ್ಟಿದ್ದಾರೆ. ಇವತ್ತು ರಾಜ್ಯಪಾಲರ ಭಾಷಣದ ವಿಷಯದಲ್ಲಿ ನಾನು ಮಾತನಾಡುವಾಗ ಸರ್ಕಾರಕ್ಕೆ ಮೊದಲೇ ಹೇಳಿದ್ದೇನೆ. ಹೊಸದಾಗಿ ಸರ್ಕಾರ ರಚನೆ ಆಗಿ ರಾಜ್ಯಪಾಲರು ಏನು ಭಾಷಣ ಮಾಡಿದ್ದಾರೆ, ಸರ್ಕಾರದ ಕೆಲವು ಕಾರ್ಯಕ್ರಮಗಳಿಗೆ ನಮ್ಮದೂ ಸಂಪೂರ್ಣ ಬೆಂಬಲ ಇದೆ ಎಂದು ಹೇಳಿದ್ದೇನೆ. ನಾವು ಆದಷ್ಟು ಸದನದಲ್ಲಿ ಈ ಭಾಗದಲ್ಲಿ ಸಭಾತ್ಯಾಗ ಮಾಡುವುದು, ಬಾವಿಗೆ ಬಂದು ಧರಣಿ ಮಾಡತಕ್ಕಂಥದ್ದಕ್ಕೆ ಸದನದ ಹೆಚ್ಚಿನ ಕಲಾಪವನ್ನು ವ್ಯರ್ಥ ಮಾಡುವುದಿಲ್ಲವೆಂದು ಹೇಳಿದ್ದೇವೆ. ಸರ್ಕಾರಕ್ಕೆ

ಸಂಪೂರ್ಣವಾಗಿ ಉತ್ತಮವಾದ ಕೆಲಸ ಮಾಡುವುದಕ್ಕೆ ರಚನಾತ್ಮಕವಾಗಿ ಸಹಕಾರ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ. ಆದರೆ ಒಂದು ಅಧ್ಯಕ್ಷರೆ, ಇಲ್ಲಿ ಪ್ರತಿಷ್ಠೆ ವಿಷಯಕ್ಕೆ ಹಾಗೂ ಮತ್ಯಾವುದೇ ವಿಷಯಕ್ಕೆ ನಾವು ಪರಸ್ಪರ ಚರ್ಚೆ ಮಾಡುವುದು ಏನಿದೆ? ನಾನು ಬೆಳಿಗ್ಗೆಯೂ ತಮ್ಮ ಕೊಠಡಿಗೆ ಬಂದು ಮನವಿ ಮಾಡಿದೆ. ಇವತ್ತು " ಕಾವೇರಿ ಐತೀರ್ಪಿನ ಅನುಸಾರವಾಗಿ " ಎಂದು ಏನಿದೆ, ಅದಕ್ಕೆ ಒಂದು ಪದ add ಮಾಡಿಕೊಳ್ಳಲಿ ಎನ್ನತಕ್ಕಂಥದ್ದನ್ನು ಹೇಳಿದೆವು. ಸುಪ್ರೀಂ ಕೋರ್ಟ್‌ನ ತೀರ್ಪಿನ ಯಾವ ವಿಷಯ ಸುಪ್ರೀಂ ಕೋರ್ಟ್‌ನ decision SLP ಏನಿದೆ, ಅದನ್ನು ಒಂದು word ಅನ್ನು ಬೇಕಾದರೆ ಸೇರಿಸಿಕೊಳ್ಳಲಿ. ಅದಕ್ಕೆ ಒಂದು ಕಟ್ ಮೋಷನ್ ಮೂವ್ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳಿದೆವು. ಆದರೆ ತಾವು ಮೂರು ದಿವಸಗಳ ಮುಂಚೆ ತಾವು ಏನಾದರೂ ಚರ್ಚೆ ಮಾಡಿದ್ದರೆ, ನನ್ನ ಗಮನಕ್ಕೆ ಬಂದಿದ್ದರೆ ತೀರ್ಮಾನ ಮಾಡಬಹುದಾಗಿತ್ತು, ಇವತ್ತು ಆಗಲ್ಲ ಎಂದು ಹೇಳಿದಿರಿ. ನಾನು ಈಗಲೂ ಮಾನ್ಯ ಸಭಾ ನಾಯಕರಿಗೆ ಹೇಳುವುದು, ಕಾನೂನಿನ ವ್ಯಾಪ್ತಿಯಲ್ಲಿ ಎಲ್ಲಿಯಾದರೂ ನಮಗೆ ಅನಾನುಕೂಲಗಳು ಆಗಬಾರದು. ಇವತ್ತು SLP ಏನು ಸುಪ್ರೀಂ ಕೋರ್ಟ್‌ನ ಮುಂದೆ ಇದೆ, ಅದು ಅನಾನುಕೂಲಗಳು ಆಗಬಾರದು ಎನ್ನತಕ್ಕಂತಹ ಹಿನ್ನೆಲೆಯಲ್ಲಿ ಈ ವಿಷಯದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಆದರೆ ಇವತ್ತು ಈ ರಾಜ್ಯಪಾಲರ ನಿರ್ಣಯದ ವಿಷಯದಲ್ಲಿ ಆ ಪದವನ್ನು ಏನು ಭಾಷಣ ಮಾಡಿಸಿದ್ದಾರೆ, ಅಷ್ಟಕ್ಕೇ ನಾವು ಸೀಮಿತವಾಗಿರುತ್ತೇವೆಂದರೆ, ಈ ಒಂದು ವಿಷಯದಲ್ಲಿ ನಾವು ಯಾವುದೇ ಕಾರಣಕ್ಕೂ ಇವತ್ತು ಭಾಗೀದಾರರಾಗಲಿಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೇ ಅವರು stick on ಆಗುವುದಾದರೆ, ಆ ವಿಷಯದಲ್ಲಿ ನಾವು ಸಭಾತ್ಯಾಗ ಮಾಡತಕ್ಕಂಥದ್ದು ಅನಿವಾರ್ಯವಾಗುತ್ತದೆ. ಆದಕಾರಣ, ನಾವು ಇದಕ್ಕೆ ಸಹಕಾರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ರೇವಣ್ಣರವರು ಪ್ರಸ್ತಾಪ ಮಾಡಿರತಕ್ಕಂತಹ ಹಾಲಿನ ವಿಷಯ ಒಂದು ದಿನಕ್ಕೆ ಹಾಲು 54 ಲಕ್ಷ ಲೀಟರ್ ಆಗಿಬಿಟ್ಟಿದೆ, ಹಾಲು ಪೌಡರ್ ಮಾಡುವುದಕ್ಕಾಗುವುದಿಲ್ಲ, ಆ ಕೆಪಾಸಿಟಿ ಇರುವ ಪೌಡರ್ plantಗಳು ಇಲ್ಲ ಎಂದು ಹೇಳಿದ್ದಾರೆ. ಇದೆಲ್ಲಾ ನಿಜ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಅಂಗನವಾಡಿ ಮಕ್ಕಳಿಗೆ ಹಾಗೂ ಶಾಲಾ

ಮಕ್ಕಳಿಗೆ ಹಾಲು ಕೊಡುವುದಕ್ಕಾಗುತ್ತದೆಯೇ ಇಲ್ಲವೆಂದು ಪರಿಶೀಲನೆ ಮಾಡುತ್ತಿದ್ದೇವೆ. ಕೆಲವು ಪರಿಶೀಲನೆ ಮಾಡಿ ಒಂದು ತೀರ್ಮಾನ ಮಾಡುತ್ತೇವೆ ಎನ್ನತಕ್ಕಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಕಾಲೇಜುಗಳಲ್ಲಿ infrastructure ಇಲ್ಲ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ಅದರ ಬಗ್ಗೆ ಕೂಡ ಬಜೆಟ್‌ನಲ್ಲಿ ಪರಿಶೀಲನೆ ಮಾಡಿ ಅಗತ್ಯ ಕ್ರಮ ತೆಗೆದುಕೊಳ್ಳತಕ್ಕಂಥದ್ದು ಮಾಡುತ್ತೇನೆ. ಕಾವೇರಿ ವಿಚಾರದ ಬಗ್ಗೆ ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಬಹಳ ಸ್ಪಷ್ಟವಾಗಿ ಸ್ಪಷ್ಟೀಕರಣ ಕೊಟ್ಟಿದ್ದೇನೆ. ನಮಗೆ ಕಾನೂನು ತಜ್ಞರು ನಾರಿಮನ್‌ರವರು. ಅವರ ಮೂಲಕ opinion ಪಡೆದು ಮಾಡಿರುವುದು. ಇದರಿಂದ ಯಾವುದೇ ಅನಾನುಕೂಲಗಳಾಗುವುದಿಲ್ಲ, ಕಾನೂನಿನ ಹೋರಾಟಕ್ಕೆ ಕೂಡ ಹಿನ್ನಡೆ ಆಗುವುದಿಲ್ಲ. ರಾಜ್ಯದ ಹಿತಕ್ಕೆ ಕೂಡ ಯಾವುದೇ ತೊಂದರೆಯಾಗುವುದಿಲ್ಲ ಎನ್ನತಕ್ಕಂಥದ್ದು ಬಹಳ ಸ್ಪಷ್ಟವಾಗಿರುವುದರಿಂದ ಅವರು without prejudice to the pending appeals ಎಂದು ಇರುವುದರಿಂದ it is not a final one. ಆ ಕಾರಣದಿಂದ ಅವರು ಬಹಳ ಸ್ಪಷ್ಟವಾಗಿ ಅಭಿಪ್ರಾಯ ಕೊಟ್ಟಿದ್ದಾರೆ. (ಗೊಂದಲ) ಮಾನ್ಯ ಚಲುವರಾಯಸ್ವಾಮಿಯವರೆ, ಅದರ ಅಗತ್ಯವಿಲ್ಲ. ನಮ್ಮ ಲಾಯರ್ ಕೋರ್ಟ್‌ನಲ್ಲಿ argument ಮಾಡುವವರು ಯಾರು? ನಿಮ್ಮ ಕಾಲದಲ್ಲಿದ್ದವರು ಯಾರು? ನಾರಿಮನ್‌ರವರು. ಈ ಕಾಲದಲ್ಲಿರುವವರು ಯಾರು? ಅವರೇ ಕೊಟ್ಟಿರುವ opinion ಆಧಾರದ ಮೇಲೆ ಮಾಡಿರುವಾಗ ನಿಮಗೆ ಅನುಮಾನ ಏಕೆ? ಆದ್ದರಿಂದ ಅವರ ಅನುಮಾನಕ್ಕೆ ಯಾವುದೇ ಆಧಾರ ಇಲ್ಲ. ಅನುಮಾನ ಪಟ್ಟುಕೊಳ್ಳಬೇಕಾದ ಅಗತ್ಯವಿಲ್ಲ. ಅದರಲ್ಲಿ ಯಾವುದೇ ಬದಲಾವಣೆ ಮಾಡಬೇಕಾದ ಅಗತ್ಯ ಕೂಡ ಇಲ್ಲವೆಂದು ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರೇ, ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಏನು ವಿನಂತಿ ಮಾಡಿಕೊಳ್ಳುತ್ತೇನೆಂದರೆ, ಸರ್ಕಾರ ಮುಂದೆ ಯಾವುದೇ ಹೆಜ್ಜೆ ಇಡಬೇಕಾದರೆ, ಅಥವಾ ಕ್ರಮ ಕೈಗೊಳ್ಳಬೇಕಾದರೆ ಈ ರಾಜ್ಯದ ಹಿತಕ್ಕೆ ಧಕ್ಕೆ ಆಗದ ರೀತಿಯಲ್ಲಿ ಕ್ರಮ ಕೈಗೊಳ್ಳುತ್ತಾರೆ ಎನ್ನುವುದಕ್ಕೆ ನೀವು, ನೀವು ಸೇರಿಕೊಂಡು ಪರಸ್ಪರ ಚರ್ಚೆ ಮಾಡಿಕೊಂಡು ಸಂಶಯವನ್ನು ಬಗೆಹರಿಸಿಕೊಳ್ಳಿ. ಇಲ್ಲಿಯವರೆಗೆ ನನಗೆ

ಗೊತ್ತಿರುವ ಪ್ರಕಾರ ಪ್ರತಿಯೊಂದು ಹಂತದಲ್ಲಿ ಕೂಡ ಮಾನ್ಯ ವಿರೋಧ ಪಕ್ಷದವರು ಹಾಗೂ ಆಡಳಿತ ಪಕ್ಷದವರು ಒಂದಾಗಿ ಒಂದು ಧ್ವನಿ ಆಗಿ ಕಾವೇರಿ ವಿಷಯದಲ್ಲಿ ನಡೆದುಕೊಂಡು ಬಂದಿದ್ದಾರೆ. ಈಗ ಏಕೆ ಸಂಶಯ ಪಡಬೇಕು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ನಾವು ಸಂಪೂರ್ಣವಾಗಿ ಸಹಕಾರ ಕೊಡುವುದಕ್ಕೆ ತಯಾರಾಗಿದ್ದೇವೆ. ಆದರೆ ನಾರಿಮನ್‌ರವರು ಹೇಳಿದ್ದಾರೆಂದು ಹೇಳುತ್ತಾರೆ. ಕೆಲವು ಬಾರಿ ನಮ್ಮ ವಕೀಲರುಗಳು ಇವತ್ತು ಎಡವಿದ್ದಾರೆ. ಆ ವಿಷಯ ಚರ್ಚೆ ಮಾಡುವುದಕ್ಕಾಗುವುದಿಲ್ಲ. ಸರ್ಕಾರಕ್ಕೆ ನಾನು ಮನವಿ ಮಾಡತಕ್ಕಂಥದ್ದು ನಾವು ಎಚ್ಚರಿಕೆ ವಹಿಸಬೇಕಾದ್ದು ಅವಶ್ಯಕತೆ ಇದೆ. ನಾವು ಅಂತಿಮವಾದ ಘಟ್ಟಕ್ಕೆ ಏನು ಬಂದಿದ್ದೇವೆ, ಸುಪ್ರೀಂ ಕೋರ್ಟಿನಲ್ಲೂ ಆಗಸ್ಟ್ 16ನೇ ತಾರೀಖು ಈ ಕೇಸ್ ಬರುತ್ತಿರುವ ಪರಿಸ್ಥಿತಿ ಒಂದು ಕಡೆ. ಇನ್ನೊಂದು ಕಡೆ Water Resourcesನ Secretary ಅವರು ಯಾವ ರೀತಿಯಲ್ಲಿ ಹೆಜ್ಜೆ ಇಟ್ಟುಕೊಂಡು ಹೋಗುತ್ತಿದ್ದಾರೆ, ಎಲ್ಲೋ ಒಂದು ಕಡೆ ನಮಗೆ ಹಿನ್ನಡೆ ಆಗಬಾರದು. ನಮ್ಮ ಜನರಿಗೆ ಅನಾನುಕೂಲ ಆಗಬಾರದು. ಆ ದೃಷ್ಟಿಯಿಂದ ಹೇಳುತ್ತಿದ್ದೇವೆ. ಇದೇನಾದರೂ ಇದೇ ಒಂದು word ನಿಂದ ನಮಗೆ ನಾಳೆ ಸುಪ್ರೀಂ ಕೋರ್ಟಿನಲ್ಲಿ ಮಾರಕ ಆದರೆ, ಜನ ಇವತ್ತು ನಮ್ಮನ್ನೂ ಪ್ರಶ್ನೆ ಮಾಡುತ್ತಾರೆ. ನೀವು ಸದನದಲ್ಲಿ ಏನು ಮಾಡಿದಿರಿ, ನಮಗೆ ರಕ್ಷಣೆ ಕೊಡಲಿಲ್ಲವೆಂದು ಹೇಳುತ್ತಾರೆ. ಆ ದೃಷ್ಟಿಯಿಂದ ಇವತ್ತು ಹೇಳುತ್ತಿದ್ದೇವೆ. ಇದರಲ್ಲಿ ಪ್ರತಿಷ್ಠೆಯ ಪ್ರಶ್ನೆ ಇಲ್ಲ. ನಾವು ಸರ್ಕಾರಕ್ಕೆ ಬೆಂಬಲ ಕೊಡಬೇಕು ಎನ್ನತಕ್ಕಂಥದ್ದು ವಿರೋಧ ಮಾಡುತ್ತೇವೆಂದು ಅಲ್ಲ. ಇದರಲ್ಲಿ ಎಲ್ಲೋ ಒಂದು ಕಡೆ ನಮಗೆ ಹಿನ್ನಡೆ ಆಗುವ ಪರಿಸ್ಥಿತಿ ಬರಬಾರದು. ಅದಕ್ಕೆ ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು: ಈ ಸಂಶಯ ಬರುವುದಕ್ಕೆ ಏನು ಕಾರಣ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ: ಸಂಶಯ ಅಲ್ಲ ಅಧ್ಯಕ್ಷರೆ, ನಮಗೆ ಕೆಲವು ಕಾನೂನು ತಜ್ಞರು ಹೇಳಿರತಕ್ಕಂಥದ್ದು. ಅಧ್ಯಕ್ಷರೆ, ಮಾಡ್ರನೈಜೇಷನ್ ಬಗ್ಗೆ ಏನು ಹೇಳಿಕೊಂಡಿದ್ದಾರೆ, ನಾವು ಕೇಂದ್ರ ಸರ್ಕಾರದ ಮುಂದೆ ಹೋಗಬೇಕಾಗಿಲ್ಲ. ನಮಗೆ 18 ಲಕ್ಷ ಎಕರೆಗೆ ನೀರು ಉಪಯೋಗ ಮಾಡಿಕೊಳ್ಳುವುದಕ್ಕೆ ಈಗಾಗಲೇ ಆದೇಶ ಮಾಡಿಕೊಂಡಿದ್ದಾರೆ. ಇವತ್ತು ಆ

ವಿಷಯವೇ ಬೇಕಾಗಿರಲಿಲ್ಲ. ನಾವು ಕೇಂದ್ರ ಸರ್ಕಾರದ ಮುಂದೆ ಪ್ರಸ್ತಾವನೆ ತೆಗೆದುಕೊಂಡು ಹೋಗುವ ಅವಶ್ಯಕತೆಯೇ ಇಲ್ಲ. ನಮ್ಮ ರಾಜ್ಯ ಸರ್ಕಾರ ನಾವು ಇಲ್ಲಿ ಕೆಲಸ ಮಾಡುವುದಕ್ಕೆ ನಾವು ಯಾರ ಅನುಮತಿಯೂ ತೆಗೆದುಕೊಳ್ಳಬೇಕಾಗಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಏತಕ್ಕೆ ಇಂತಹ ಕಾನೂನಿನ ತೊಡಕಿಗೆ ನೀವೇ ಅದನ್ನು ಎಳೆದುಕೊಂಡು ಹೋಗುತ್ತಿದ್ದೀರಿ ಎನ್ನತಕ್ಕಂಥದ್ದು ನನ್ನ ಅಭಿಪ್ರಾಯ ಇದೆ ಇದರಲ್ಲಿ. ಈ ವಿಷಯದಲ್ಲಿ ಸರ್ಕಾರ ಅದೇ ಧೋರಣೆ ತೋರುವುದಾದರೆ, ನಾವು ಇವತ್ತು ಈ ಒಂದು ನಿರ್ಣಯದ ವಿಷಯದಲ್ಲಿ ಸಭಾತ್ಯಾಗ ಮಾಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ.

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರೂ ಹಾಗೂ ಜೆಡಿ(ಎಸ್) ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿ ಸದನದಿಂದ ಹೊರನಡೆದರು)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇವರು ರಾಜಕೀಯ ಮಾಡುವುದಕ್ಕೆ ಹೊರಟಿದ್ದಾರೆ. ಸುಪ್ರೀ ಕೋರ್ಟ್ ಆದೇಶದ ಮೇಲೆ ನಾವು ಮಾಡಿರುವುದು. ಸುಮ್ಮನೆ ರಾಜಕಾರಣ ಮಾಡುತ್ತಿದ್ದಾರೆ. ಇವರು ದುರುದ್ದೇಶದಿಂದ ವಾಕ್‌ಔಟ್ ಮಾಡುತ್ತಿದ್ದಾರೆ. ವಾಕ್‌ಔಟ್ ಮಾಡುವುದಾದರೆ ಮಾಡಲಿ, ನಮ್ಮದೇನೂ ತಕರಾರಿಲ್ಲ. ನಿಮಗಿಂತ ಹೆಚ್ಚಾಗಿ ನಮಗೂ ಕೂಡ ಬದ್ಧತೆ ಇದೆ. ನಾನೂಕೂಡ ರೈತನ ಮಗನೇ ನಾನು ಕೂಡ ಕಾವೇರಿ ಬೇಸಿನ್‌ನಿಂದ ಬಂದವನೇ.

ನೀವೊಬ್ಬರೇ ರೈತನ ಮಗನೆಂದು ಹೇಳಿಕೊಂಡು ತಿರುಗಿದರೆ ಮಾತ್ರ ನೀವುಗಳು ರೈತರ ಮಕ್ಕಳಲ್ಲ, ನಾನೂ ರೈತನ ಮಗನೆ, ರೈತರನ್ನು ಕಾಪಾಡುವುದಕ್ಕೆ ನಿಮಗಿಂತ ಹೆಚ್ಚು ಬದ್ಧತೆ ನನಗಿದೆ. ನೀವು ಈ ವಿಷಯದಲ್ಲಿ ರಾಜಕಾರಣ ಮಾಡುವುದಕ್ಕೆ ಹೋಗಬೇಡಿ. ಇದರಿಂದ ನಿಮಗೆ ಲಾಭವೇನೂ ಆಗುವುದಿಲ್ಲ. ಕೆಲವರು ರಾಜಕಾರಣ ಮಾಡಿಕೊಂಡು, ನಾವೇ ರೈತರ ಮಕ್ಕಳು ಎನ್ನುತ್ತಿದ್ದಾರೆ. ಹಾಗಾದರೆ ನಾವೆಲ್ಲರೂ ಯಾರ ಮಕ್ಕಳು? ನಾವೆಲ್ಲರೂ ರೈತರ ಮಕ್ಕಳಲ್ಲವೆ? ನಾನೂ ಕೂಡ ರೈತನ ಮಗನೇ ಆಗಿದ್ದೇನೆ. ನಮ್ಮ ಜಮೀನುಗಳಿಗೂ ಕೂಡ ಅಲ್ಲಿ ನೀರು ಬರುತ್ತದೆ. ಆದುದರಿಂದ ಈ ವಿಚಾರದಲ್ಲಿ I am making it very very clear ಇದರಿಂದ ಯಾವುದೇ ಕಾನೂನಿನ ಬಾಧಕವಾಗುವುದಿಲ್ಲ. ನಾವು legal experts ಜೊತೆ ಮಾತನಾಡಿ ಇದನ್ನು ಏಕೆ ಮಾಡಿದೆವೆಂದರೆ AIBP ಯಿಂದ ನಮಗೆ ಹಣ ಕೇಂದ್ರ ಸರ್ಕಾರದಿಂದ

ಬರಬೇಕು. ಅದು ಬರಬೇಕೆಂದರೆ ಇದನ್ನು ಮಾಡಬೇಕಾಗಿತ್ತು. ಕೇಂದ್ರ ಸರ್ಕಾರದವರು 75 ಪರ್ಸೆಂಟ್ ಗ್ರಾಂಟ್ಸ್ ಕೊಡುತ್ತಾರೆ, ಅದನ್ನು ನಾವು ತೆಗೆದುಕೊಳ್ಳಬೇಕೋ ಬೇಡವೋ ನಾವು ಈಗ ಎಲ್ಲಾ ಕೆಲಸಗಳನ್ನೆಲ್ಲಾ ಮಾಡುವುದಕ್ಕೆ? ಅದಕ್ಕೋಸ್ಕರ ಮಾಡಿದ್ದೇವೆ. ಅದಕ್ಕೆ ಇವರು ರಾಜಕಾರಣ ಮಾಡಿಕೊಂಡು ನಾವು ರೈತರ ಪರ ಎಂದು ಹೇಳಿಕೊಂಡು ಹೋದರೆ ಹೇಗೆ? ಇವರೊಬ್ಬರೇ ರೈತರ ಪರ ಇರುವವರೆ? ನಾವೇನು ಕಾವೇರಿ ಬೇಸಿನ್‌ನವರಲ್ಲವೆ ಅಥವಾ ನಾವು ಕರ್ನಾಟಕದವರಲ್ಲವೆ?

ಅಧ್ಯಕ್ಷರು :– ಜಗದೀಶ್ ಶೆಟ್ಟರ್‌ರವರೆ, ನೀವು ಬೇಗ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಸದಸ್ಯರ ಹಲವಾರು ವಿಚಾರಗಳ ಬಗ್ಗೆ ಉತ್ತರಗಳನ್ನು ಕೊಡುತ್ತಿದ್ದಾರೆ. ಇನ್ನೂ ಕೆಲವೊಂದು ವಿಚಾರಗಳು ಹಾಗೆಯೇ ಉಳಿದಿವೆ.

ಅಧ್ಯಕ್ಷರು :– ನೀವು ಕೇವಲ ಕ್ಲಾರಿಫಿಕೇಷನ್ ಕೇಳಿ. ಅದನ್ನು ಬಿಟ್ಟು ಮತ್ತೊಂದು ಭಾಷಣ ಮಾಡಬೇಡಿ.

ಶ್ರೀ ಜಗದೀಶ್ ಶೆಟ್ಟರ್ :– ಕ್ಲಾರಿಫಿಕೇಷನ್‌ನ್ನೇ ಕೇಳುತ್ತಿದ್ದೇನೆ. ನಾನು ಭಾಷಣ ಮಾಡಿರುವುದಕ್ಕೆ ಅದರಲ್ಲಿ ಕೆಲವೊಂದನ್ನು ಅನುಷ್ಠಾನ ಮಾಡುತ್ತೇನೆಂದು ಹೇಳಿದ್ದಾರೆ, ಮಾಡಲಿ, ನನ್ನದೇನೂ ತಕರಾರಿಲ್ಲ. ಅದರ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ತೆಗೆದುಕೊಂದು ಇನ್ನೂ ಹೆಚ್ಚು ಸಂಗ್ರಹ ಮಾಡಿಕೊಂಡು ಮಾಡಿದರೆ ಅದು ಒಳ್ಳೆಯದು ಎಂದು ನಾನು ಹೇಳುತ್ತಿದ್ದೇನೆ. ಇನ್ನು ಒಂದು ಮನೆಗೆ 1 ಲಕ್ಷದ 20 ಸಾವಿರ ರೂ.ಗಳ ಸಬ್ಸಿಡಿಯನ್ನು ಕೊಡುವಂಥದ್ದರ ಬಗ್ಗೆ ಇದು ಯಾವಾಗಿನಿಂದ ಪ್ರಾರಂಭವಾಗುತ್ತದೆ ಎನ್ನುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಸ್ಪಷ್ಟೀಕರಣ ಕೊಡಬೇಕು.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು) :– ಈ ವರ್ಷದಿಂದ, ಅಂದರೆ 2013–14 ನೇ ವರ್ಷದಿಂದ.

ಶ್ರೀ ಜಗದೀಶ್ ಶೆಟ್ಟರ್ :– 2013–2014 ಕ್ಕೆ ಎಂದು ಹೇಳಿದಿರಿ, ಈಗೇನು ಲಕ್ಷಾಂತರ ಮನೆಗಳು ನಿರ್ಮಾಣವಾಗುತ್ತಿವೆ, ಆ ಮನೆಗಳಿಗೆ 75 ಸಾವಿರ ರೂ.ಗಳೆಂದು ಇದೆ ಅದಕ್ಕೆ 1 ಲಕ್ಷದ 20 ಸಾವಿರ ರೂ.ಗಳನ್ನು

ಕೊಡುತ್ತೀರೋ ಇಲ್ಲವೋ ಎನ್ನುವ ಬಗ್ಗೆ ಸ್ಪಷ್ಟೀಕರಣ ಕೊಡಬೇಕು. ಏಕೆಂದರೆ ಮುಖ್ಯಮಂತ್ರಿಗಳಾಗಿ ನೀವು ಪ್ರಮಾಣ ವಚನ ಸ್ವೀಕಾರ ಮಾಡಿದ ಮೊದಲ ದಿನವೇ ಇದನ್ನು ಅನೌನ್ಸ್ ಮಾಡಿದಿರಿ, ಇಷ್ಟೊಂದು ಹೆಚ್ಚಳವಾಗುತ್ತದೆ ಎನ್ನುವಂಥ ಮಾತನ್ನು ಹೇಳಿದಿರಿ. ಅದನ್ನು ನೀವು ಬಜೆಟ್‌ನಲ್ಲಿಯೇ ಅನೌನ್ಸ್ ಮಾಡಬಹುದಿತ್ತು ಈ ವರ್ಷದಿಂದ ಮಾಡುತ್ತೇವೆಂದರೆ ಹೊಸದಾಗಿ ಬಜೆಟ್ ಮಂಡನೆ ಮಾಡುತ್ತೇವೆಂದು ಹೇಳಿದಿರಲ್ಲಾ, ಆಗ ಅನೌನ್ಸ್ ಮಾಡಬಹುದಿತ್ತು. ನೀವು ಮೊದಲ ದಿವಸವೇ 6 ಸಾವಿರ ಕೋಟಿ ರೂ.ಗಳು ಎಂದು ಹೇಳಿದಿರಿ. ಅದರಲ್ಲಿ ಮನೆಯದ್ದು 1 ಲಕ್ಷದ 20 ಸಾವಿರ ರೂ. ಸಬ್ಸಿಡಿಯ ಮೊತ್ತವೇ 1900 ಕೋಟಿ ರೂ. ಇದರಲ್ಲಿಯೇ ಬರುತ್ತದೆ. ಇದಕ್ಕೆ ಅವರು ಸ್ಪಷ್ಟೀಕರಣ ಕೊಡಲಿ ಯಾವಾಗ ಇದನ್ನು ಇಂಪ್ಲಿಮೆಂಟ್ ಮಾಡುತ್ತಾರೆ, ಎಷ್ಟು ದಿವಸಗಳಲ್ಲಿ ಇದನ್ನು......

ಅಧ್ಯಕ್ಷರು :– ಈಗಾಗಲೇ 2013–14 ರಿಂದ ಎಂದು ಹೇಳಿದ್ದಾರಲ್ಲ?

ಶ್ರೀ ಜಗದೀಶ್ ಶೆಟ್ಟರ್ :– ನಾನು ಇನ್ನೊಂದು ವಿಚಾರ ಪ್ರತಿಪಾದನೆ ಮಾಡಿದು ಯಾವುದೆಂದರೆ, ಹೊಸ ತಾಲ್ಲೂಕುಗಳನ್ನು ಪುನರ್ ರಚನೆ ಮಾಡುವಂಥ ಕೆಲಸವನ್ನು ನಾವು 43 ತಾಲ್ಲೂಕುಗಳೆಂದು ಏನು ಘೋಷಣೆ ಮಾಡಿದ್ದೇವೆ, ಅದರ ಬಗ್ಗೆಯೂ ಸಾಕಷ್ಟು ವಿಚಾರಗಳನ್ನು ನನ್ನ ಭಾಷಣದಲ್ಲಿ ಹೇಳಿದ್ದೇನೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನನ್ನೂ ಹೇಳಲಿಲ್ಲ. ಕಂದಾಯ ಮಂತ್ರಿಗಳು ಒಂದು ಕಡೆ ಸ್ಟೇಟ್‌ಮೆಂಟ್ ಮಾಡಿದ್ದಾರೆ ಅದೇನೆಂದರೆ ನಾವು ಹೊಸ ತಾಲ್ಲೂಕುಗಳನ್ನು ಮಾಡುವಂಥ ಪ್ರಶ್ನೆಯೇ ಇಲ್ಲವೆಂದು ಹೇಳಿದ್ದಾರೆ. ಆಮೇಲೆ ಮತ್ತೆ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡುತ್ತೇವೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಜನರಲ್ಲಿ ಒಂದು ರೀತಿಯ ಗೊಂದಲ ಉಂಟಾಗಿದೆ. ಆದುದರಿಂದ ಈ ಬಗ್ಗೆ ಕೂಡ ಸ್ಪಷ್ಟೀಕರಣವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕು. ಏಕೆಂದರೆ ಹೊಸ ತಾಲ್ಲೂಕುಗಳಿಗೆ ಆ ಭಾಗದ ಜನರಿಂದ ಬಹಳ ವರ್ಷದಿಂದ ಬೇಡಿಕೆಯಿದೆ. ಆ ದೃಷ್ಟಿಯಿಂದ ಅದರ ಬಗ್ಗೆ ಕೂಡ ಸ್ಪಷ್ಟೀಕರಣವನ್ನು ಕೊಡಬೇಕು. ಇದರ ಬಗ್ಗೆ ಸರ್ಕಾರದ ನಿಲುವೇನು ಎಂಬ ಬಗ್ಗೆ ಹೇಳಬೇಕು. ಇನ್ನು ಕಾವೇರಿ ವಿಚಾರದ ಬಗ್ಗೆ ಹಿಂದೆ ನಾರಿಮನ್ ಬಗ್ಗೆ ಅವರು ಹಿಂದೆ ಇಲ್ಲಿ ವಿರೋಧ ಪಕ್ಷದಲ್ಲಿ ಕುಳಿತಿದ್ದಾಗ ಅವರ ಬಗ್ಗೆ ಮತ್ತು ಅಡ್ವೊಕೇಟ್ಸ್ ಬಗ್ಗೆ ಏನು ಮಾತನಾಡಿದ್ದಾರೋ ಅವೆಲ್ಲವೂ ರೆಕಾರ್ಡ್ ಆಗಿದೆ.

ಈಗ ಅದರ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಕಾವೇರಿ ವಿಚಾರದ ಬಗ್ಗೆ ತಾವು ಇನ್ನೂ ಸ್ವಲ್ಪ ಗಂಭೀರವಾಗಿ ಆಲೋಚನೆ ಮಾಡಿ ಇನ್ನೂ ಸ್ವಲ್ಪ legal opinion ತೆಗೆದುಕೊಳ್ಳಿ. ಮತ್ತೆ ಈಗಾಗಲೇ ಈ ವಿಚಾರದಲ್ಲಿ ನಾವು ಇಷ್ಟೆಲ್ಲಾ ಫೈಟ್ ಮಾಡಿದ್ದೇವೆ ಸುಪ್ರೀಂ ಕೋರ್ಟ್‌ನಲ್ಲಿ, ಬೇರೆ ಬೇರೆ ಹಂತಗಳಲ್ಲಿ ಫೈಟ್ ಮಾಡುವಾಗ ಕೂಡ ಯಾವ ರೀತಿ ರಿಸಲ್ಟ್ ಬಂದಿದೆ ಎಂಬುದು ತಮಗೆಲ್ಲರಿಗೂ ಗೊತ್ತಿದೆ. ನಾಳೆ ಇದೇ ಒಂದು ವಿಚಾರದಲ್ಲಿ ತೊಂದರೆಯಾಗಬಾರದು ಎನ್ನುವ ದೃಷ್ಟಿಯಿಂದ ಸರ್ಕಾರದವರು ಇದರ ಬಗ್ಗೆ ಇನ್ನೊಮ್ಮೆ ಗಂಭೀರವಾಗಿ ಆಲೋಚನೆಯನ್ನು ಮಾಡಬೇಕು ಎನ್ನುವಂಥ ಮಾತನ್ನು ತಮ್ಮ ಮುಖಾಂತರ ಹೇಳಬಯಸುತ್ತೇನೆ.

ಶ್ರೀ ಬಿ.ಆರ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಒಂದು ರೂಪಾಯಿಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡತಕ್ಕಂಥ ಯೋಜನೆಯನ್ನು ಜಾರಿಗೆ ತರುತ್ತಿದ್ದಾರೆ. ನನ್ನದೇನೂ ಇದರ ಬಗ್ಗೆ ಅಭ್ಯಂತರವಿಲ್ಲ. ಆದರೆ ಉತ್ತರ ಕರ್ನಾಟಕದಲ್ಲಿ ನಾವ್ಯಾರೂ ಕೂಡ ಅನ್ನ ಊಟ ಮಾಡುವಂಥ ಅಭ್ಯಾಸವನ್ನು ಹೊಂದಿಲ್ಲ. ಇಲ್ಲೇನಾಗಿದೆಯೆಂದರೆ, ಈಗಾಗಲೇ ಏನು ಅಕ್ಕಿ ಬರುತ್ತಿದೆ, ಅದೆಲ್ಲಾ ಸ್ಮಗಲ್ ಆಗಿ ಬ್ಲಾಕ್ ಮಾರ್ಕೆಟ್‌ಗೆ ಹೋಗುತ್ತಿದೆ, ವಸ್ತು ಸ್ಥಿತಿ ಹೇಳುತ್ತಿದ್ದೇನೆ. ನೀವು ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಅಕ್ಕಿಯನ್ನು ಕೊಡುವುದಕ್ಕೆ ಹೋದರೆ ಹೇಗೆ ಎಂದು ವಿಚಾರ ಮಾಡಬೇಕು. ಆದಕಾರಣ, ಇವರು ಉತ್ತರ ಕರ್ನಾಟಕದ ಭಾಗಕ್ಕೆ ಜೋಳ ಅಥವಾ ಗೋಧಿಯನ್ನು ಕೊಡುವ ಬಗ್ಗೆ ಸರ್ಕಾರದವರು ವ್ಯವಸ್ಥೆ ಮಾಡುತ್ತಾರೆಯೆ ಎಂಬ ಬಗ್ಗೆ ಹೇಳಬೇಕು.

ಶ್ರೀ ಗೋವಿಂದ ಎಂ. ಕಾರಜೋಳ್ :- ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ನಾನು ಮುಖ್ಯಮಂತ್ರಿಗಳಿಗೆ ವಿನಂತಿ ಮಾಡಿದ್ದೆ, ಬಡವರ ಮಕ್ಕಳು ಓದತಕ್ಕಂಥ ಖಾಸಗಿ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಬೋರ್ಡಿಂಗ್ ಚಾರ್ಜಸ್ ಎಂದು 500/- ರೂ.ಗಳನ್ನು ಕೊಡುತ್ತಿದ್ದಾರೆ. ಆದರೆ ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಓದತಕ್ಕಂಥವರಿಗೆ 850/- ಮತ್ತು 1,000/- ರೂ.ಗಳನ್ನು ಕೊಡುತ್ತಾರೆ. ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಓದತಕ್ಕಂಥ ವಿದ್ಯಾರ್ಥಿಗಳಿಗೆ ಬೋರ್ಡಿಂಗ್ ಚಾರ್ಜಸ್ ಎಂದು ಏನು ನೀವು ಕೊಡುತ್ತಿದ್ದೀರೋ ಅಷ್ಟೇ ಮೊತ್ತವನ್ನು ಖಾಸಗಿ ವಿದ್ಯಾರ್ಥಿ ನಿಲಯಗಳಲ್ಲಿ ಓದತಕ್ಕಂಥ ಮಕ್ಕಳಿಗೆ ಕೊಡಬೇಕೆಂದು ನಾನು ನಿನ್ನೆಯ ದಿವಸ ವಿನಂತಿ ಮಾಡಿದ್ದೆ. ಇನ್ನು ಎರಡನೆಯದಾಗಿ, ಲ್ಯಾಂಡ್

ಪರ್ಚೇಸ್‌ಗೆ 5 ಲಕ್ಷದಿಂದ 10 ಲಕ್ಷ ರೂ.ಗಳಿಗೆ ಹೆಚ್ಚಿಸಬೇಕೆಂದು ವಿನಂತಿ ಮಾಡಿದ್ದೆ. ದಯವಿಟ್ಟು ಅದನ್ನು ಮಾಡಬೇಕು. ಇಲ್ಲದಿದ್ದರೆ 5 ಲಕ್ಷ ರೂ.ಗಳಿಗೆ ಈಗ ಜಮೀನು ಸಿಗುತ್ತಿಲ್ಲ.

ಅಧ್ಯಕ್ಷರು:-ಇವೆಲ್ಲಾ ವಿಚಾರವನ್ನು ಸಮಾಜ ಕಲ್ಯಾಣ ಇಲಾಖೆ ಮೇಲೆ ಚರ್ಚೆಯಾಗುವಾಗ ಹೇಳಿದರೆ ಅದಕ್ಕೆ ಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ಗೋವಿಂದ ಎಂ. ಕಾರಜೋಳ್:-ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಷಯದ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಸ್ವತಃ ಭೇಟಿಯಾಗಿ ವಿನಂತಿ ಮಾಡಿದ್ದೆ. ಈಗ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಪಡೆದಿರುವ ಸಾಲವನ್ನು ಮನ್ನಾ ಮಾಡಿದ್ದೀರಿ, ದೇವರಾಜ ಅರಸು ನಿಗಮದಿಂದ ಪಡೆದಿರುವ ಸಾಲವನ್ನು ಮನ್ನಾ ಮಾಡಿದ್ದೀರಿ, ಅಲ್ಪಸಂಖ್ಯಾತ ನಿಗಮದಿಂದ ಪಡೆದಿರುವ ಸಾಲವನ್ನು ಮನ್ನಾ ಮಾಡಿದ್ದೀರಿ. ಅದೇ ರೀತಿ ಇಡೀ ರಾಜ್ಯದಲ್ಲಿ 175 ತಾಲ್ಲೂಕುಗಳಲ್ಲಿ ಕಳೆದ ಎಂಟತ್ತು ವರ್ಷಗಳಿಂದ ಪಿ.ಎಲ್.ಡಿ. ಬ್ಯಾಂಕ್‌ನಲ್ಲಿ ಎಸ್‌ಸಿ/ಎಸ್‌ಟಿ ಜನಾಂಗದವರು ಸಾಲವನ್ನು ಪಡೆದುಕೊಂಡಿರುವುದು ಒಟ್ಟು 40 ಕೋಟಿ ರೂಪಾಯಿಗೆ ಈ ಅಸಲಿನ ಜೊತೆ ಬಡ್ಡಿ ಸೇರಿ 104 ಕೋಟಿಯಾಗಿದೆ. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಸಾಲವನ್ನು ಯಾವ ರೀತಿ ಮನ್ನಾ ಮಾಡಿದ್ದೀರಿ ಅದೇ ರೀತಿ ಪಿ.ಎಲ್.ಡಿ. ಬ್ಯಾಂಕ್‌ನಿಂದ ತೆಗೆದುಕೊಂಡಿರುವ ಸಾಲವನ್ನೂ ಕೂಡ ಮನ್ನಾ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಸ್ವತಃ ಭೇಟಿಯಾಗಿ ವಿನಂತಿ ಮಾಡಿ ಒಂದು ಸ್ಟೇಟ್‌ಮೆಂಟ್‌ನ್ನು ಕೊಟ್ಟಿದ್ದೆ. ಆ ಸಾಲವನ್ನು ಕೂಡ ಮನ್ನಾ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ:-ಸನ್ಮಾನ್ಯ ಸಭಾಧ್ಯಕ್ಷರೆ, ಬಹಳ ಮುಖ್ಯವಾಗಿ ನಾನು ಮಾತನಾಡಿರತಕ್ಕಂಥ ವಿಷಯವೇನೆಂದರೆ, ಪ್ರತಿ ತಿಂಗಳೂ ಇವತ್ತು ರಾಜ್ಯದಲ್ಲಿ ಬಹು ಮುಖ್ಯವಾದ ಸಮಸ್ಯೆ ಏನೆಂದರೆ, pensionersಗೆ 30 ನೇ ತಾರೀಖು ಅವರಿಗೆ 400 ರೂಪಾಯಿ ಇರುವುದನ್ನು 600 ರೂಪಾಯಿಗಳಿಗೆ ಹೆಚ್ಚಿಸಿ ಆ ಹಣ ಸರಿಯಾಗಿ ತಿಂಗಳಾಂತ್ಯದ ದಿನಾಂಕದಲ್ಲಿ ತಲುಪುವಂಥ ವ್ಯವಸ್ಥೆ ಮಾಡಿದರೆ ಬಹುಶಃ ತಾವು ಮುಖ್ಯಮಂತ್ರಿಗಳಾಗಿ ಈ ರಾಜ್ಯದಲ್ಲಿ ಪ್ರಮುಖ ಕೆಲಸ ಮಾಡಿದಂತಾಗುತ್ತದೆ. ಇನ್ನು ಎರಡನೆಯದಾಗಿ ಹಸಿರು ಬರದ ಬಗ್ಗೆ ಮಾತನಾಡಿದ್ದೇನೆ. ಅದೇನು ಕ್ಲಾರಿಫಿಕೇಷನ್ ಮಾಡುತ್ತೀರೋ ಅದು ನಿಮ್ಮಿಷ್ಟ. 25 ಟಿ.ಎಂ.ಸಿ. ನೀರು ಕಾವೇರಿ ವಿವಾದದಿಂದ ಹೊರಟುಹೋಯಿತು.

ಮೈಸೂರು ಮತ್ತು ಮಂಡ್ಯ ಜಿಲ್ಲೆ, ಈ ಎರಡು ಜಿಲ್ಲೆಗಳಲ್ಲಿ ಕೃಷಿ ಚಟುವಟಿಕೆಗಳು 18 ತಿಂಗಳು ಸಂಪೂರ್ಣ ನಿಂತುಹೋಯಿತು. 18 ತಿಂಗಳವರೆಗೂ ಯಾವುದೇ ಆರ್ಥಿಕ ಭದ್ರತೆ ಬರುವುದಿಲ್ಲ. ಇದನ್ನು ಹಸಿ ಬರ ಎಂದು ಕರೆಯುತ್ತಾರೆ. 1200 ಕೋಟಿ ರೂ.ಗಳ ಸಾಲವಿದೆ, ಕೃಷಿ ಚಟುವಟಿಕೆ ಸಂಪೂರ್ಣ ನಾಶವಾಗುತ್ತಿದೆ. ಹೊಸ ಸಾಲದ ನೀತಿ ಮತ್ತು ಆ ಸಾಲದ ಬಗ್ಗೆ ತಾವು ಆಲೋಚನೆಯನ್ನು ಮಾಡಿ ಬಜೆಟ್‌ನಲ್ಲಿ ಹೇಳುತ್ತೀರೋ ಅಥವಾ ಈಗಲೇ ಹೇಳುತ್ತೀರೋ ಎಂಬ ಬಗ್ಗೆ ಸದನಕ್ಕೆ ಕ್ಲಾರಿಫೈ ಮಾಡಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) :- ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಬೇಕಾದರೆ ಸವಿಸ್ತಾರವಾಗಿ ಹಲವಾರು ವಿಚಾರಗಳನ್ನು ಹೇಳಿದ್ದೆ. ಮುಖ್ಯಮಂತ್ರಿಗಳು ಸಾಕಷ್ಟು ವಿಷಯಗಳ ಬಗ್ಗೆ ಬೆಳಕನ್ನು ಚೆಲ್ಲಿದ್ದಾರೆ. ಒಂದೇ ಒಂದು ಚಿಂತನೆ ನನ್ನ ಮನಸ್ಸಿನಲ್ಲಿರುವಂಥದ್ದೆಂದರೆ, ನಾನೂ ಕೂಡ ಮೂರುಕಾಲು ವರ್ಷ ಇಲ್ಲಿ ಮುಖ್ಯಮಂತ್ರಿಯಾಗಿ ಕುಳಿತು ಕೆಲಸ ಮಾಡಿದ್ದೇನೆ. ಹಿಂದಿನ ಸರ್ಕಾರಗಳು ಬಂದಂಥ ಯಾವುದೇ ಸಂದರ್ಭದಲ್ಲಿ ರಾಜ್ಯಪಾಲರಿಂದ ಹಿಂದಿನ ಸರ್ಕಾರಗಳನ್ನು ಭ್ರಷ್ಟಾಚಾರದ ಹಗರಣಗಳ ಹಿನ್ನೆಲೆಯಲ್ಲಿ ಕೆಟ್ಟ ಹೆಸರು ಬಂತು ಎಂದು ಆರೋಪ ಮಾಡುವಂಥ, ಗೂಬೆ ಕೂರಿಸುವಂಥ ಕೆಲಸವನ್ನು ಹಿಂದಿನ ಯಾವುದೇ ಸರ್ಕಾರಗಳು, ಯಾವುದೇ ಮುಖ್ಯಮಂತ್ರಿಗಳು ಮಾಡಿರಲಿಲ್ಲ. ನೀವು ಅದನ್ನು ಮಾಡಿದಿರಿ. ನಾನು ಅದಕ್ಕೆ ನಿಮಗೇನು ಹೇಳಿದೆ, ಭ್ರಷ್ಟಾಚಾರದ ಹಗರಣಗಳಿರಬಹುದು, ಅಕ್ರಮ ಗಣಿಗಾರಿಕೆ ಇರಬಹುದು ಅಥವಾ ಸ್ಟ್ರೇ ಸೈಟ್‌ನ್ನು ಮುಖ್ಯಮಂತ್ರಿಗಳ ವಿವೇಚನೆಯಲ್ಲಿ ಕೊಟ್ಟಂಥ ಸೈಟ್‌ಗಳಿರಬಹುದು ಅಥವಾ ಇಂಡಸ್ಟ್ರಿಗಳಿಗೆ ಕೊಟ್ಟಂಥ ಜಮೀನುಗಳಿರಬಹುದು, ಇದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿಸಿ. ಈ ತನಿಖೆಯಿಂದ ರಾಜ್ಯದ ಜನತೆಗೆ ಸತ್ಯಾಸತ್ಯತೆಗಳು ಗೊತ್ತಾಗಲಿ ಎಂದು ಹೇಳಿದ್ದೆ. ರಾಜ್ಯದ ಉದ್ದಗಲಕ್ಕೂ ಈ ಅಕ್ರಮ ಗಣಿಗಾರಿಕೆ ಬಗ್ಗೆ ಚರ್ಚೆಯಾಗುತ್ತಿದೆ. ಆದರೆ ಇವುಗಳ ಬಗ್ಗೆ ಯಾವುದೇ ರೀತಿಯ ತನಿಖೆಯನ್ನು ಮಾಡಿಸುತ್ತೇನೆಂದು ಹೇಳಲಿಲ್ಲ. ಲೋಕಾಯುಕ್ತ ವರದಿಯನ್ನು ಸದನದಲ್ಲಿ ಮಂಡಿಸಿ, ಅದರ ಬಗ್ಗೆ ಮೂರು ದಿನಗಳ ಕಾಲ ಚರ್ಚೆ ನಡೆಯಲು ಅವಕಾಶ ಮಾಡಿಕೊಡಿ ಎಂದು ಕೇಳಿದೆ. ಆದರೆ ಅದಕ್ಕೂ ತಾವು ಅವಕಾಶವನ್ನು ಮಾಡಿಕೊಡಲಿಲ್ಲ. ನೀವು ಯಾವುದರ ಬಗ್ಗೆಯೂ ಸಮರ್ಪಕವಾದ ಉತ್ತರವನ್ನು ಕೊಡದೇ ಇರುವುದರಿಂದ ಈ

ರಾಜ್ಯಪಾಲರ ಭಾಷಣದಿಂದ ಬಂದಿರುವ ಉತ್ತರಗಳು ನಮಗೆ ತೃಪ್ತಿ ತಂದಿಲ್ಲ. ಇದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ. ಈ ಹಂತದಲ್ಲಿ.

ಈ ಹಂತದಲ್ಲಿ ಕೆ.ಜೆ.ಪಿ.ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ನಿಮಗೆ ಉತ್ತರ ಹೇಳುವುದು ಬೇಡವೆ? ಇದು ಒಳ್ಳೆಯ ಕಥೆಯಾಯಿತಲ್ಲಾ?

ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):-ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಬಹಳ ಸೀನಿಯರ್ ಲೀಡರ್. ನಾನು ಉತ್ತರ ಹೇಳುವುದಕ್ಕೆ ಮುಂಚಿತವಾಗಿಯೇ ಅವರು ವಾಕ್‌ಔಟ್ ಮಾಡುತ್ತಿದ್ದಾರೆಂದರೆ ಇದು ರಾಜಕಾರಣವೇ. ಅವರಿಗೆ ನಾನು ಕೊಡಬೇಕಾದ ಯತ್ತರವನ್ನು ಕೇಳಲು ಅವರು ತಯಾರಾಗಿಲ್ಲ. ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾತನಾಡುತ್ತಾ ಮನೆಗಳಿಗೆ ಕೊಡುವ 45 ಸಾವಿರ ಸಬ್ಸಿಡಿ ಬಗ್ಗೆ ಹೇಳಿದ್ದಾರೆ, ಅದನ್ನು ನಾನು ಈ ವರ್ಷ ಮಂಜೂರಾಗತಕ್ಕಂಥ ಮನೆಗಳಿಗೆ ನಾನು ಹೇಳಿರುವುದು. ಈಗಾಗಲೇ ಪ್ರಾರಂಭವಾಗಿರತಕ್ಕಂಥದ್ದು, ವಿವಿಧ ಹಂತಗಳಲ್ಲಿರತಕ್ಕಂಥವುಗಳಿಗೆ ಕೊಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು :- ಅದರಲ್ಲಿ ಒಂದು ಪ್ರಶ್ನೆಯೇನೆಂದರೆ ಲಾಕ್ ಮಾಡಿಬಿಟ್ಟಿದ್ದಾರೆ. ಅದನ್ನು unlock ಮಾಡಬೇಕು.

ಶ್ರೀ ಸಿದ್ದರಾಮಯ್ಯ :-ಅದನ್ನು ಮುಂದುವರಿಸುವುದಕ್ಕೆ ಮುಂದಿನ ವರ್ಷಕ್ಕೆ ಅದನ್ನೂ ಸೇರಿಸಿಕೊಂಡು ಮಾಡುವ ಹಾಗೆ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ :-ಈಗಾಗಲೇ ಮನೆಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿಬಿಟ್ಟಿದ್ದಾರೆ.

ಅಧ್ಯಕ್ಷರು :-ಹಿಂದೆ 75 ಸಾವಿರಕ್ಕೆ ಎಂದು ಏನಿತ್ತಲ್ಲ, ಅದರಲ್ಲಿಯೇ ಅವರು ಪೂರೈಸಿಕೊಳ್ಳುತ್ತಾರೆ, unlock ಮಾಡಿಬಿಟ್ಟರೆ ಸಾಕು.

ಶ್ರೀ ಸಿದ್ದರಾಮಯ್ಯ :-ಈಗ ಅವುಗಳನ್ನೂ ಕೂಡ ಮುಂದಿನ ವರ್ಷ ಮನೆಗಳನ್ನು ಸ್ಯಾಂಕ್ಷನ್ ಮಾಡುತ್ತೇವಲ್ಲ, ಆಗ ಅದನ್ನು ಸೇರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಕಾರ್‌ಜೋಳ್‌ರವರೆ ನೀವು ಕೆಲವನ್ನೆಲ್ಲಾ ಹೇಳಿದ್ದೀರಲ್ಲಾ, ಆ ಹಾಸ್ಟೆಲ್‌ಗಳಿದ್ದು, ಜಮೀನಿನ ಬೆಲೆ ಜಾಸ್ತಿ ಮಾಡುವುದು, ಇದರ ಬಗ್ಗೆ ಬಜೆಟ್ ಮಂಡಿಸುವಾಗ ಪರಿಶೀಲನೆ ಮಾಡುತ್ತೇನೆ. ಆಮೇಲೆ ಪಿ.ಎಲ್.ಡಿ. ಬ್ಯಾಂಕ್‌ಗಳ ಸಾಲದ ಬಗ್ಗೆ ಹೇಳಿದ್ದೀರಲ್ಲಾ, ಆ ಪಿಎಲ್‌ಡಿ ಬ್ಯಾಂಕ್‌ನಲ್ಲಿ

ಎಸ್‌ಸಿ/ಎಸ್‌ಟಿ ಗಳವರ ಸಾಲವೇನಿದೆಯಲ್ಲಾ, ಬಾಕಿ ಉಳಿದಿರತಕ್ಕಂಥದ್ದರ ಬಗ್ಗೆಯೂ ಕೂಡ ಮನ್ನಾ ಮಾಡುವ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಮಾನ್ಯ ಪುಟ್ಟಣ್ಣಯ್ಯನವರು pension ವಿಚಾರ ಹಸಿ ಬರ ಮತ್ತು ಒಣ ಬರದ ಬಗ್ಗೆ ಏನು ಹೇಳಿದ್ದೀರಿ, ನಾವು ಬಜೆಟ್ ಸಮಯದಲ್ಲಿ ಇದನ್ನೆಲ್ಲ ಪರಿಶೀಲನೆ ಮಾಡುತ್ತೇವೆ. ನೀವು ಹೇಳಿದವಂತಹ ಸಲಹೆಗಳನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತೇವೆ. ಮಾನ್ಯ ಜಗದೀಶ್ ಶೆಟ್ಟರ್‌ರವರಿಗೆ ಕಾವೇರಿ ಬಗ್ಗೆ notification ಮಾಡುವುದು ಬೇಡ, ಅದಕ್ಕೆ ತೀವ್ರವಾಗಿ ವಿರೋಧ ಮಾಡಬೇಕಾಗಿತ್ತು ಎಂದು ಹೇಳಿದ್ದೆ. ಈಗ ಪುನಃ ಅದೇ ಮಾತನ್ನು ಹೇಳುತ್ತೇನೆ. ಈಗ notification ಆಗಿಬಿಟ್ಟಿದೆ, ಅದು ನಿಮ್ಮ ಕಾಲದಲ್ಲೇ ಆಗಿದೆ. ಈಗಾಗಲೇ notification ಆಗಿರುವುದರಿಂದ ಮತ್ತೇ ಹಿಂದಕ್ಕೆ ಹೋಗುವುದಕ್ಕಾಗುವುದಿಲ್ಲ. ಈಗ ಸುಪ್ರೀಂ ಕೋರ್ಟ್‌ನಲ್ಲಿ ಕಾನೂನು ಹೋರಾಟ ಮಾಡಬೇಕು. ನಾವು ಸಮರ್ಥವಾಗಿ ಕಾನೂನು ಹೋರಾಟ ಮಾಡುತ್ತೇವೆ. ನಾವು ರೈತರ ಹಿತವನ್ನು ಕಾಪಾಡುವುದಕ್ಕೆ ಬದ್ಧರಾಗಿದ್ದೇವೆನ್ನುವಂತಹ ಮಾತನ್ನು ಸ್ಪಷ್ಟವಾಗಿ ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಅಧ್ಯಕ್ಷರೆ, ಹೊಸ ತಾಲ್ಲೂಕುಗಳ ಬಗ್ಗೆ ಹೇಳಲಿಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, 43 ಹೊಸ ತಾಲ್ಲೂಕುಗಳನ್ನು ಮಾಡುತ್ತೇವೆಂದು ಇವರು ಹೇಳಿದ್ದಾರೆ. ಈ ಹೊಸ ತಾಲ್ಲೂಕುಗಳನ್ನು ಮಾಡಬೇಕೋ ಬೇಡವೋ ಎನ್ನುವುದರ ಬಗ್ಗೆ ನಾಲ್ಕು ಜನರ ವರದಿಗಳು ಇವೆ. ಅದರಲ್ಲಿ ಇವರು 7–8 ತಾಲ್ಲೂಕುಗಳು announce ಮಾಡಿರುವುದು ಯಾವ ವರದಿಯಲ್ಲಿ ಕೂಡ ಇಲ್ಲ ಮತ್ತು ಅದರ ಆಧಾರದ ಮೇಲೆ ಕೂಡ ಮಾಡಿಲ್ಲ. ಆ ರೀತಿ announce ಮಾಡಿದ್ದಾರೆ. ಅದಕ್ಕೋಸ್ಕರ ನಾವು ಬಜೆಟ್ ಮಂಡಿಸುವುದಕ್ಕಿಂತ ಮುಂಚಿತವಾಗಿ ಅವುಗಳನ್ನೆಲ್ಲ ಪರಿಶೀಲನೆ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಈ ರೀತಿ vague ಆಗಿ answer ಮಾಡುವುದು ಸರಿಯಲ್ಲ. ಇವರಿಗೆ ತಾಲ್ಲೂಕು ಮಾಡುವಂತಹ ಮನಸ್ಸಿಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ಜೆ.ಹೆಚ್. ಪಟೇಲ್ ಮತ್ತು ನಾವು ಇದ್ದಾಗ ಜಿಲ್ಲೆಗಳನ್ನು ಮಾಡಿದ್ದು. ನಾನು ಹಣಕಾಸಿನ ಮಂತ್ರಿಯಾಗಿದ್ದಾಗ,

ಮಾನ್ಯ ಜೆ.ಹೆಚ್. ಪಟೇಲ್‌ರವರು ಇದ್ದಾಗ ಹೊಸ ಜಿಲ್ಲೆಗಳನ್ನು ನಾವೇ ಮಾಡಿದ್ದು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಅವರು ತಾಲ್ಲೂಕಿನ ಬಗ್ಗೆ confusion ಮಾಡುತ್ತಿದ್ದಾರೆ. 7–8 ತಾಲ್ಲೂಕುಗಳನ್ನು ಹೊಸದಾಗಿ ಮಾಡಬೇಕೆಂದಿರುವುದಕ್ಕೆ ಇವರಿಗೆ ಸ್ಪಷ್ಟವಾದಂತಹ ನಿಲುವಿಲ್ಲ.

ಅಧ್ಯಕ್ಷರು : ಭಾಷಣ ಬೇಡ.

ಶ್ರೀ ಸಿದ್ದರಾಮಯ್ಯ : ಅವರು walk out ಮಾಡುವುದಕ್ಕೆ ready ಆಗುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ನಾನು ಇದನ್ನು protest ಮಾಡುತ್ತಿದ್ದೇನೆ. ಇವರು ಸ್ಪಷ್ಟವಾದಂತಹ ನಿಲುವನ್ನು ತೆಗೆದುಕೊಂಡಿಲ್ಲ. ಅದರ ಬಗ್ಗೆ detail ಆಗಿ ಹೇಳಿದರೂ ಕೂಡ ಇವರಿಗೆ ಕಾಳಜಿ ಇಲ್ಲ.

(ಈ ಹಂತದಲ್ಲಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಸೇರಿದಂತೆ ಬಿಜೆಪಿಯ ಸದಸ್ಯರು ಸದನದಿಂದ ಹೊರನಡೆದರು)

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇವರದು ರಾಜಕಾರಣ. ಯಾವುದೇ ವರದಿಯ ಆಧಾರವಿಲ್ಲದೆ ತಾಲ್ಲೂಕು ಮಾಡಿಬಿಡಲಿ, ಚುನಾವಣೆಗೋಸ್ಕರ ಬಜೆಟ್ ಮಂಡಿಸಿ ಬಿಟ್ಟಿದ್ದಾರೆ. ಇದು ಚುನಾವಣೆಗೋಸ್ಕರ ಮಾಡಿದಂತಹ ಬಜೆಟ್. ಅದಕ್ಕೋಸ್ಕರ ನೀವು ಹೇಳಿರತಕ್ಕಂಥದ್ದನ್ನೆಲ್ಲ ಮಾಡುವುದಕ್ಕಲ್ಲ ನಾವು ಇರುವುದು. ನಾವು ಪರಿಶೀಲನೆ ಮಾಡುತ್ತೇವೆ. ಯಾವುದೇ ಕಮಿಟಿಯ ವರದಿ ಆಧಾರವಿಲ್ಲದೆ ಐದು ತಾಲ್ಲೂಕುಗಳನ್ನು ಹೊಸದಾಗಿ ಸೇರಿಸಿಬಿಟ್ಟಿದ್ದಾರೆ. ಅದನ್ನು ಮಾಡುವುದಕ್ಕೆ ಬರುತ್ತದೆಯೇ?

ಅಧ್ಯಕ್ಷರು : ಅವರು ಹೇಳುತ್ತೇವೆಂದು ಹೇಳಿದ್ದಾರೆ, ಸ್ವಲ್ಪ ಹೊತ್ತು ಬಿಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಂಡ್ಯದ ಪಾಂಡವಪುರ ಸಕ್ಕರೆ ಕಾರ್ಖಾನೆ . . .

ಅಧ್ಯಕ್ಷರು : ಅದನ್ನು ಆಮೇಲೆ ತೆಗೆದುಕೊಳ್ಳೋಣ ಬಿಡಿ. ನೀವು ಒಂದೊಂದು ಸಾರಿ ಎದ್ದೆದ್ದು ಕೇಳಬೇಡಿ. ಒಂದು ಸಲ ಕೇಳಿ ನೀವು.

ಶ್ರೀ ಸಿದ್ದರಾಮಯ್ಯ : ಅಧಿಕಾರಿಗಳ ಜೊತೆ ಮೀಟಿಂಗ್ ಮಾಡುತ್ತೇವೆ.

ಅಧ್ಯಕ್ಷರು : ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವನೆ ಹೀಗಿದೆ, "3ನೇ ಜೂನ್ 2013ರಂದು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ."

ಪ್ರಸ್ತಾವದ ಪರವಾಗಿರುವವರು **ಹೌದು** ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು

ಪ್ರಸ್ತಾವವು **ಹೌದು** ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು **ಹೌದು** ಎನ್ನುವವರ ಪರವಾಗಿದೆ

ಪ್ರಸ್ತಾವವು **ಹೌದು** ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕೃತವಾಗಿದೆ.

ವಂದನಾ ನಿರ್ಣಯದ ಪ್ರಸ್ತಾವಕ್ಕೆ ಸಭೆಯ ಅನುಮತಿ ದೊರಕಿದೆ.

ವಂದನಾ ನಿರ್ಣಯವನ್ನು ಘನತೆವೆತ್ತ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು.

ಈಗ ನೀರಾವರಿ ಸಚಿವರು ನಿನ್ನೆ ಚರ್ಚೆಯಾದಂತಹ ವಿಷಯಕ್ಕೆ ಉತ್ತರವನ್ನು ಹೇಳಬೇಕು.

8. ಶಾಸನ ರಚನೆ : ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಮಕ.2013 (ವಿಧೇಯಕದ ಮುಂದುವರೆದ ಪರ್ಯಾಲೋಚನೆ ಹಾಗೂ ಅಂಗೀಕಾರ)

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಸದನದಲ್ಲಿ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕದ ಬಗ್ಗೆ ಚರ್ಚೆ ಮಾಡಿದ್ದೇವೆ. ಚರ್ಚೆ ನಡೆದ ಸಂದರ್ಭದಲ್ಲಿ ಒಂದು ಗ್ರಾಮಸಭೆಯನ್ನು ಕರೆಯದೇ ಹೋದರೆ disqualify ಆಗಬೇಕೆನ್ನುವ provision ಇತ್ತು, ಅದಕ್ಕೆ ಸತತ ಎರಡು ಸಭೆ ಎಂದು ಹೇಳಿ ತಿದ್ದುಪಡಿ ಮಾಡಿದ್ದೇವೆ.

(ಈ ಹಂತದಲ್ಲಿ ಶ್ರೀ ಜಗದೀಶ್ ಶೆಟ್ಟರ್‌ರವರು ವಿಧಾನಸಭೆಯೊಳಗೆ ಆಗಮಿಸಿದರು)